DAMAGE BOOK

THE BOOK WAS DRENCHED

UNIVERSAL LIBRARY
OU_202328
UNIVERSAL LIBRARY

# ತಾಳೀ ಕಟ್ಟೋಕ್ಕೂಲೀನೇ?

## ( ಟೊಳ್ಳು-ಗಟ್ಟಿ II )


ಲೇಖಕ

ಕೈಲಾಸಂ



ಪ್ರಕಾಶಕರು

ಅಗಸ್ತ್ಯರ್

ಮೊದಲನೆಯ ಮುದ್ರಣ
ವಿಷು ಸಂ|| ಮಾರ್ಗಶಿರ: ನೊವೆಂಬರ್: ೧೯೪೧

ಮುದ್ರಣಕಾರರು
ಬಿ. ಬಿ. ಡಿ. ಪವರ್ ಪ್ರೆಸ್, ಬೆಂಗಳೂರು ಸಿಟಿ

*COPYRIGHT REGISTERED*
*Staging, Translating and All other Rights Reserved.*

---

**ಬೆಲೆ ಹನ್ನೆರಡು ಆಣೆ**

---

For permission to stage Kailasam's plays
apply with a Royalty of
Rupees **Ten** for each performance
to
**Srimati LAKSHMI KAILASAM, B.A**
**"The White House"**
**Chamarajapet, Bangalore City**

# ಪೂರ್ವ ಕಥಾ ಪರಿಚಯ

" **ತಾಳೀ ಕಟ್ಟೋಕ್ ಕೂಲೀನೇ?** " ಎಂಬ ಈ ದೃಶ್ಯವಾಲಿ "**ಟ್ರ್ಲೋಳ್ಳುಗಟ್ಟೆ ಅಥವಾ ಮಕ್ಕಳಿಸ್ಕೂಲ್ ಮನೇಲಲ್ವೇ?** " ಎಂಬ ದೃಶ್ಯದ ಮುಂದಿನ ಭಾಗ. ಆದ್ದರಿಂದ ಇದನ್ನು ಓದುವ ಮುಂಚೆ ಪೂರ್ವಭಾಗದ ಕಥಾಪರಿಚಯ ಆಗಿದ್ದರೆ ಅನುಕೂಲ.

**ಇದು ಪೂರ್ವ ಕಥಾ ಪರಿಚಯ:**

ಹಿರಿಯಣ್ಣಯ್ಯ ಕಸಬಾಹೋಬಳಿ ಹೆಡ್ಮ್ಯಾನ್ಸ್. ಅವನ ಹಿರೀ ಮಗ ಪುಟ್ಟು, ಕಿರೀಮಗ ಮಾಧು. ಇವರಿಬ್ಬರಿಗೂ ತಾಯಿ ಭಾಗೀರಥಮ್ಮ "**ಈ ಭೂಮೀಲಿ ವಾಸಿಸೋಕೆ ನಾವು ದೇವರಿಗೆ ಕೊಡಬೇಕಾದ ಬಾಡಿಗೆ ಅಂದ್ರೆ ನಂಸುತ್ತ ಮುತ್ಲೂ ಇರೋ ಜನರಿಗೆ ಉಪಯೋಗ**" ಅಂತ ಹೇಳಿಕೊಟ್ಟಿದ್ರೂನೂವೆ, ಮಾಧು ಅದನ್ನ ಕಲ್ತಿದ್ದ, ಪುಟ್ಟು ಅದನ್ನ ಮರ್ತಿದ್ದ.

'ಯಾವ್ದೆಲ್ಲಾರೂ ಹೋಗ್ಲಿ, ಯಾರೇನಾರೂ ಆಗ್ಲಿ; ನಾನೂ, ನನ್‌ಪುಸ್ತ್ಕ, ನನ್‌ಫಸ್ಟ್‌ಕ್ಲಾಸೂ'ಂತ ಪರೀಕ್ಷೆಗಳ್ನ ಸಿಗಿದು ಸಿಪ್ಪೇ ಹಾಕ್ತಿದ್ದ ಪುಟ್ಟು. ಅಮ್ಮನಿಗೆ ಜ್ವರ ಬಂದ್ರೆ, ಮಗೂಗ್ ಹಾಲ್ ಹಾಕ್ಬೇಕಾದ್ರೆ, ಸೀರ್ಮನೆ ಹಂಡೆ ತುಂಬ್‌ಬೇಕಾದ್ರೆ, ಕಂಡವರ ಕೂಸು ಬಾವೀಲ್ ಬಿದ್ರೆ, ಸಮಯಕ್ ನಾನೂ ಅಂತ ಬರೋ ಭರಾಟೀಲಿ ಓದೋಕ್ ಬಿಡುವಿಲ್ದೆ — ಒಳ್ಳೇ Bright Fellow ಆದ್ರೂನೂವೆ— ಫೇಲಾಗ್ತಿದ್ದ ಮಾಧು.

**ಇವರಿಬ್ಬರಲ್ಲಿ, 'ಅಪ್ಪಸತ್ರೂ ಸಾಯ್ಲಿ, ತಿಥೀಗ್ ವಡೆ ಸಿಕ್ತು' ಅನ್ನೋ ಹಾಗೆ ತಾಯಿ ತಂದೆಗೆ ಯಾವ ವಿಧದಲ್ಲೂ ಸಹಾಯವಾಗಿಲ್ದೆ ತನ್ಕೆಲ್ಸಾ ಮಟ್ಟಿಗ್ ತಾನ್ ನೋಡ್ಕೊಳ್ಳೋ ಪುಟ್ಟೂನ ತಲೇಮೇಲೆ ಕೂರಿಸಿಕೊಂಡಿದ್ದ ಹಿರಿಯಣ್ಣಯ್ಯನಿಗೆ ಮನೇಗೊಂದ್ ದಿಕ್ಕಾಗಿರೋ ಮಾಧು ಅಂದ್ರೆ ಕಾಲ್ಕೆಳಗಿನ ಕಸಕ್ಕಿಂತ ಕಡೆ.**

ಪುಟ್ಟೊಗೂ ಮಾಧೂಗೂ ಮದುವೆ ಆಗಿತ್ತು. ಪುಟ್ಟು ಹೆಂಡ್ತಿ ಪಾತು ರಾಮಪುರದ ಮಾಮಲೇದಾರ್ ರಾಮಣ್ಣನ ಮಗಳು; ದೊಡ್ಕುಟುಂಬ, ದೊಡ್ರುಕ್ತ. 'ಇದಕ್ pass ಆದ್ರಿಂದ ಇದರ ಅಂತಸ್ತು ಏನ್ ಹೆಚ್ಚಾಯ್ತು? ಇದರ ಗುಣ ಇದಕ್ಕೆ' ಅಂತ ಗಂಡನ್ನ ಗುಡಿಸಿದ್ಳು ಮೂಲೇಗೆ. ಅಲ್ದೆ, ಭಾ ವಿ ೀ ಬಿ ದ್ ಸಾ ಯ್ತೀ ನೇ ೀ ಂ ತ ಹೆದರ್ಸಿ, ತೌರ್ಮನೆಯೋರು ತನ್ನ ಕರೆಸಿಕೊಳ್ಳೋ ಹಾಗೆ ಕಾಗದ ಬರೆಸಿಸಿ, ಕಟ್ಟಿದ ಟ್ರಂಕು ಹಾಸಿಗೆ ಸಮೇತ ತುದಿಗಾಲ್‌ತುದೀಲಿ ನಿಂತಿದ್ದಳು, ತವರ್ಮನೇಗೆ ತೆರಳೋಕೆ, ಪಾತು. ಅವಳ ಓರಗಿತ್ತಿ ಸಾತು — ಮಾಧು ಹೆಂಡ್ತಿ — ಗುಮಾಸ್ತೆ ರಂಗಣ್ಣನ ಮಗಳು. ಅವಳೂ ರಾಮಪುರದವಳೆ. 'ಊರೂ ಬೇಡ, ತೌರೂ ಬೇಡ. ಇಲ್ಲೇ ಇದ್ರೆ ಇವರು ಪಡೋ ಕಷ್ಟಗಳಲ್ಲಿ ಅರ್ಧವಾದ್ರೂ ನನ್ತಲೇಮೇಲೆ ಬಿದ್ದೀತೂ'ಂತ ಗಂಡನ ಜೊತೇಗೇ ನಿಲ್ಲೊ ಹೆಣ್ಣು, ಅವಳು.

ಒಂದು ಸಲ ಹಿರಿಯಣ್ಣಯ್ಯ, ಪುಟ್ಟೊ ಹೆಂಡ್ತಿ ಪಾತೂನ ಅವರ ಅಪ್ಪನ ಮನೇಗೆ ಕಳಿಸ್ಬೇಕಾಯ್ತು....'ಪುಟ್ಟೊ ಪಾಸಾದ್ಮೇಲೆ ಕೆಲಸಕ್ಕೆ ಅವನ ಮಾವನ ಶಿಫಾರಸ್ಸು ಬೇಕಾದೀತೂ'ಂತ. ಅದೇ ಸಮಯದಲ್ಲೇ 'ಆ ಕೆಲಸಕ್ ಬಾರದ ದಡ್ಡನ್ಗೆ ಅನ್ನ ಹಾಕೋದಲ್ದೆ ಅವನ ಹೆಂಡ್ತಿಗೂ ಯಾಕ್ ಹಾಕ್ಬೇಕು' ಅಂತ ಮಾಧೂ ಹೆಂಡ್ತಿ ಸಾತೂನ್ನೂ ಅವಳ ತೌರ್ಮನೆಗೆ ಕಳಿಸಿದ, ಹಿರಿಯಣ್ಣಯ್ಯ. ಹೀಗೆ ಇಬ್ಬರು ಸೊಸೇರ್ನೂ ಹಿರಿಯಣ್ಣಯ್ಯನ ವಿತಂತು ತಂಗಿ ನಾಗತ್ತೆ ರಾಮಪುರದಲ್ಲಿರೋ ಅವರ ತೌರ್ಮನೇಗೆ ಕರಕೊಂಡ್ಹೋದ್ಳು.

ಅದೇ ರಾತ್ರಿ ಹಿರಿಯಣ್ಣಯ್ಯನ ಮನೇಗೆ ಬೆಂಕಿ ಬಿತ್ತು. ಆಗ ಪುತ್ರರತ್ನ ಪುಟ್ಟು....ಲಾಗಾಯತ್‌ನಿಂದ ಪರೀಕ್ಷೆಗಳಲ್ಲಿ First class ಸಿಗೀತಾ ಬಂದವನು ............ ಅಪ್ಪ, ಅಮ್ಮ, ಕೈಕೂಸು ಬೆಂಕೀ ಬಾಯಿಗ್ಬಿದ್ದಿರೋ ಈ ಪರೀಕ್ಷೆ ಕಾಲದಲ್ಲಿ ದಿಗ್ಭ್ರಾಂತನಾಗಿ ತನ್ನ ಪುಸ್ತಕಗಳನ್ನು ತಾನು ಬಾಚ್ಕೊಂಡು ಬೀದೀಗೋಡಿಹೋದ. ಆದರೆ ಮಾಧು .... ಪರೀಕ್ಷೇಲಿ ಅಣ್ಣನ ಹಾಗೆ pass ಆಗ್ದೆ ಇದ್ದವನು, ಈ

ಪರೀಕ್ಷೇಲಿ ತಾನು ಧೈರ್ಯಗೆಡದೆ, ಒಳಗಿದ್ದವರಿಗೂ ಧೈರ್ಯ ಹೇಳಿ, ತಾಯೀನೂ ಕೂಸ್ನೂ ಹೊರಕ್ಕರತಂದು, ಹಿಂದಿನ ಕೋಣೇಲಿದ್ದ್ ತಂದೇನೂ ಮುಂದಕ್ಕಡಸ್ಕೊಂಡ್ಬಂದು, ಪುನಃ ಪುಟ್ಟ್ನೊನ ಹುಡಕ್ಕೊಂಡು ಉರಿಯೋ ಮನೇ ಒಳಕ್ನುಗ್ಗಿದ. ಕಡೇಗೆ, ಮೂರ್ಛೆಬಿದ್ದ ಮಾಧೂನ ನಾಲ್ಕಾರು ಜನ ಉಳಿಸಿಕೊಂಡ್ಬರಬೇಕಾಯ್ತು.

ಅಂತೂ, ಆ ದಿನ ಮಾಧೂ ಇಲ್ದಿದ್ರೆ—ಆ ಊರವರು ಹೇಳಿದ್ಹಾಗೆ—ಆ ಕುಟುಂಬಕ್ ಕುಟುಂಬಾನೇ ಪಡ್ಚಾ ಆಗ್ತಿತ್ತು. ಆ ಊರಿನ ರೀಡಿಂಗ್ ರೂಂ ರೈಟರು ರಾಮಾಶಾಸ್ತ್ರಿ...... ಆ ಮನೇಗ್ಬಿದ್ದ ಅಗ್ನಿ ಎದುರಿಗೆ ಸಾಕ್ಷಿಯಾಗಿ...... "ಸ್ವಾಮಿ ಹಿರಿಯಣ್ಣಯ್ನೋರೇ.........ಪ್ರಾಸಾದ್ರೇನು !.........ಆಗ್ದಿದ್ರೇನು ! ಟೊಳ್ಳು ಟೊಳ್ಳೇ!......ಗಟ್ಟಿ ಗಟ್ಟಿಯೇ!" ಅಂತ ಜನಿವಾರ ಹಿಡಕೊಂಡ್ ಸ್ಥಾಪಿಸ್ದಾಗ......ತಂದೆ ತಾನು ಬೋಧಿಸಿದ ಪುಟ್ಟ್ನೊಗೂ, ತಾಯಿ ಭಾಗೀರಥಮ್ಮ ಸಾಕಿದ ಮಾಧೂಗೂ, ಸ್ವಭಾವದಲ್ಲಿದ್ದ ವ್ಯತ್ಯಾಸ - ಕುಂಬಳಕಾಯಷ್ಟಿಲ್ದಿದ್ರೂನೂವೆ ರಾಗಿ ಕಾಳಷ್ಟಾದರೂ—ಹಿರಿಯಣ್ಣಯ್ಯನ ಮನಸ್ಸಿಗೆ ಹೊಳದೇ ಇರಬೇಕು. "ಮಕ್ಕಳಿಸ್ಕೂಲ್ ಮನೇಲೇನೇ" ಅನ್ನೋದೂ "ಸಾಕೋದನ್ ಅರಿತ ಆತ ಸಾವಿರ ಜನಕ್ ತ್ರಾತ" ಅನ್ನೋದೂ ಅವನ ಮುಂದೇಗೂ ಮುಂದಟ್ಟಾಗಿರಬೇಕು.

— ಇದು ಪೂರ್ವ ಕಥೆಯ ಪರಿಚಯ —

## ಸೂಚನೆ

ಈ ನಾಟಕದ ವ್ಯಕ್ತಿಗಳು ಸಮಾಜದಲ್ಲಿ ಕಂಡುಬರುವಂಥವುಗಳಾಗಿದ್ದರೂ, ಯಾವ ಒಂದು ವ್ಯಕ್ತಿಯನ್ನೂ ಕುರಿತು ಬರೆದದ್ದಲ್ಲ.

# ತಾಳೀ ಕಟ್ಟೋಕ್ಕೋಲೀನೇ?

## (ಮೂರು ಭಾಗ)

೧

ಪಾತೂ ತೌರ್ಮನೆ

೨

ಸಾತೂ ತೌರ್ಮನೆ

೩

ಯೋಧ್ರುವಾಣಿ

# ತಾಳೀ ಕಟ್ಟೋಕ್ಕೂಲೀನೇ?

೧

ಸಾತೂ ಶಾರ್ಮನೆ

# ಪಾತು ತೌರ್ಮನೆ

---

## ಪಾತ್ರಗಳು

ಟೊಳ್ಳುಗಟ್ಟಿಯ ನಾಗತ್ತೆ

ಟೊಳ್ಳುಗಟ್ಟಿಯ ಪಾತು

ಟೊಳ್ಳುಗಟ್ಟಿಯ ಸಾತು

| | | |
|---|---|---|
| ರಾಮಣ್ಣ | .... | ಪಾತುವಿನ ತಂದೆ : ರಾಮಪುರದ ಮಾಮಲೇದಾರ್ |
| ಲಕ್ಷ್ಮೀದೇವಮ್ಮ | .... | ಪಾತುವಿನ ತಾಯಿ |
| ಕಿಟ್ಟಿ | .... | ಪಾತುವಿನ ಅಣ್ಣ |
| Miss ಪ್ರಭಾಮಣಿ | .... | ಲಕ್ಷ್ಮೀದೇವಮ್ಮನ ಸಹಕಾರಿಣಿ |
| ಬೋರ, ಯಾಕೊಬ | .... | ಜವಾನರು |
| ನರಸಿಂಹಯ್ಯ | .... | ರಾಮಪುರದ ಲಾಯರಿ |
| ಪಾರ್ವತಮ್ಮ | .... | ಈತನ ಪತ್ನಿ |
| ಪುರೋಹಿತ | .... | ರಾಮಣ್ಣನ ಮನೆಯವ |

---

ಕಾಲ ಮತ್ತು ಭಾಷಾ : ಆಧುನಿಕ

ಸ್ಥಳ : ರಾಮಪುರ

---

# ಪಾತು ತೌರ್ಮನೆ

## ಸೀನ್ ೧

**ನರಸಿಂಹಯ್ಯನ ಆಫೀಸ್ ಕೋಣೆ**

[ನರಸಿಂಹಯ್ಯನು ಪ್ರವೇಶಿಸಿ ಮೇಜಿನ ಮೇಲಿರುವ ಕೆಲವು ಕಾಗದ ಪತ್ರಗಳನ್ನು ವಿಂಗಡಿಸಿಟ್ಟು ಗೋಡೆಗೆ ತಗಲಿಸಿರುವ ಗಡಿಯಾರವನ್ನು ನೋಡಿ "ಎಂಟೂವರೆ ಘಂಟೆ ಇನ್ನೂ ಬರಲಿಲ್ಲ ಇವ್ನು" ಎನ್ನುತ್ತಾ ಬೀದಿ ಬಾಗಿಲಿನ ಪಕ್ಕದ ಕಿಟಕಿಯಿಂದ ನೋಡುತ್ತಾನೆ.]

**ನರಸಿಂಹಯ್ಯ** : ಇಕೋ ಬಂದ....ಇವ್ನಲ್ಲ ...ಪೋಸ್ಟ್‌ಮನ್ನು....ಇದೇನಿಷ್ಟು ಬೇಗ ?....ಮೇಲ್ಬರೋದೊಂಬತ್ತೂವರೆ .... ಲೆದರ್ ಬ್ಯಾಗ್ನಲ್ಲಿ ಕೈಹಾಕ್ತಿದಾನೆ ! . .ಅರ್ಥವಾಯಿತು. ಯಾವ್ದೋ ಮನಿಯಾರ್ಡರು ನಿನ್ನೆ ಬಂದದ್ದು....ಮಧ್ಯಾಹ್ನದ್ಹೊತ್ತು ಕೋರ್ಟಿನ ಗಲಾಟೆಯಲ್ಲಿರ್ತೀನೇಂತಾ ಮನೇಗೆ ತಂದ್ಬಿಟ್ಟಿದಾನೆ ಈಗ .... (ಬಾಗಿಲನ್ನು ತೆಗೆಯುತ್ತಾ) ಗಿಲೀಟಾಗಿ ಮಾತಾಡ್ಸಿ ಅವನ್ ಕಮೀಶನ್ನ ಮರೆಸಿಸಿಬಿಡಬೇಕು .... (ಬಾಗಿಲ ಹೊರಗೆ ತಲೆಯನ್ನು ಚಾಚಿ ಘಟ್ಟಿಯಾಗಿ) ಬಾ ತಮ್ಮ ಒಳ್ಗೆ. ಬಿಸ್ಲು ಹೊರಗೆ, ಬಿಸ್ಲು . . . ಒಳಗ್ಬಾ (ಪ್ರವೇಶ, ಪೋಸ್ಟ್‌ಮನ್) ಏನ್ ಕಾಲಿಗ್ ಜೋಡಿಲ್ವೆ.... at least.... ಎಕ್ಡ ?

**ಪೋಸ್ಟ್‌ಮನ್** : ಎಕ್ಡ! ಈಗ ಸಿಗೋ ಸಂಬ್ಳ ಹೊಟ್ಟೆಪಾಡ್ಗೇ ಸಾಲ್ದು .... ಇನ್ನೆಕ್ಡಕ್ಕೆಲ್ಲಿಂದ್ ತರೋದು ದುಡ್ನ ! .... ಏನೋ ತಮ್ಮಂಥ ಧನ್ವಂತ್ರು ನನ್ನಂಥ ಬಡವನ್ಮೇಲೆ....

**ನರ** : (ಅಡ್ಡಮಾತಾಗಿ) ಹಾಗಾದ್ರೆಷ್ಟು ಸಂಬ್ಳ ನಿನ್ಗೆ ?

**ಪೋ** : ಮೂವತ್ತುದಿನ್ಸಾಗ್ಲಿ ಮೂವತ್ತೊಂದಿನ್ಸಾಗ್ಲಿ ಹದ್ನೈದು ರೂಪಾಯಿ....ತಿಂಗ್ಳಿಗೆ.

**ನರ:** ಜೋಡಿಲ್ದೆ ನಡಿಯೋದು ತಪ್ಪು ನನ್ನ ತಮ್ಮ!....(hook-worm) ಹುಕ್ವರ್ಮ್ ನನ್ಮಾಜಾ .... ಕಾಲಿಂದ ಹೊಕ್ಕು ಮೈಯೆಲ್ಲಾ ಹತ್ತಿ ಮನುಷ್ಯನ ವಪೇ ವಪೇನೇ ಹೀರ್ಬಿಡತ್ತೆ .... ಈ ಪೋಸ್ಟ್ಮೆನ್ನಿಗೆ ವರ್ಷಕ್ಕೊಂದ್ಕೊಡೆ, ಎರಡುಜೊತೆ ಎಕ್ಕಗಳು ಕೊಡಲೇಬೇಕು ಅಂತಾ ಪೇಪರಿಗೆ ಬರೀತೇನೆ ನಾನು!....ಬೆದರಬೇಡ!....ಹೌದೂ, ಪೋಸ್ಟ್ ಕಾಗದ ಇತ್ಯಾದಿಗ್ಳೆಲ್ಲಾ ಕೈನಲ್ಲಿರೊ ಕಟ್ನಲ್ಲಾಯಿತು. ಆದರಾ ಬ್ಯಾಗ್ನಲ್ಲಿ (Bag)?....ಮನಿಯಾರ್ಡರ್ಸ್ ಮನಿ, ಇತ್ಯಾದಿಗ್ಳೇನೊ? ಹೌದೂ! ಹವಿನ್ನೈದ್ರೂಪಾಯಿ ಸಂಬ್ಳ ಅಂದ್ಯಲ್ಲ, ಏನ್ಪಾಸ್ಮಾಡಿದೀಯ, ಬಿ.ಯೆ.?....ಮೆಟ್ರಿಕ್ಯುಲೇಷನ್?

**ಪೋ:** ಇಲ್ಲ ಸಾರ್ F.A.....

**ನರ:** F.A. ಪ್ಯಾಸೇ....?

**ಪೋ:** ಅಲ್ಲ ಸಾರ್ Fail......Lower secondary ಒಂದೇ ಪ್ಯಾಸಾದ್ದು....ಆಗುತ್ಲಾವೇ....ನನ್ನ circumstan......

**ನರ:** (ಅಡ್ಡಮಾತಾಗಿ) ಅರ್ಥವಾಯಿತು....ಸಂಸಾರ, ತಾಪತ್ರಯ, ಪಾಪ ಸಹಸ್ರ. ಇದ್ದೇ ಇದೆ, ನನಗಿಲ್ವೆ?....ಯಾರಿಗೆತಾನೆ ಇಲ್ಲ....Suffering ಅಂಬೋದು ಸರ್ವತ್ರ....ಸತ್ಮೇಲೇನೇ ಇವುಗ್ಳಿಂದ ವಿಮೋಚ್ನೆ..... ಹೌದೂ? ಈಗ ನನಗ್ಬಂದಿರೋ ಪೋಸ್ಟ್ ಬಾಬತ್ತು....ಎಷ್ಟು ರೂಪಾಯಿನ ಸಮಾಚಾರ?

**ಪೋ:** (ಬ್ಯಾಗಿನಿಂದ ಒಂದು ಕಾಗದವನ್ನು ತೆಗೆಯುತ್ತಾ) ರೂಪಾಯಿಗಳ ಸಮಾಚಾರವಲ್ಲ: ಆಣೆಗಳ ಸಮಾಚಾರ....ಎರಡೂವರಾಣೆ.

**ನರ:** ಎರ್ಡೂವರಾಣೆಗೆ ಯಾರು ನನಗ್ ಮನಿಯಾರ್ಡರು ಮಾಡೋರೂ?

**ಪೋ:** (ಕಾಗದವೊಂದನ್ನು ನೀಡಿ) ಮನಿಯಾರ್ಡರಲ್ಲ. ಬರೀ ಲೆಟ್ರು (Letter)....ನಾಟ್ ಪೇಡು (Not-paid)!

**ನರ**: ( ಉದ್ರೇಕದಿಂದೆದ್ದು ಘರ್ಜಿಸುತ್ತಾ ) **ನಾಟ್ ಸ್ಪೈಡ್ ! ನನ್ನಲ್ಲ.... ಹೊರಟ್ಹೋಗು!!!**

**ಪೋ**: ಒಳ್ಳೇ ಹೊರಟ್ಹೋಗು ಸಾರ್. ನರಸಿಂಹಯ್ಯ ಅಂತ ಬರೆದಿದೇ ವಿಳಾಸಾ.... ?

**ನರ**: ವಿಳಾಸ ಬರೆದಿದ್ರೇನು? ನರಸಿಂಹಯ್ಯ ನಾನೊಬ್ನೇನೆ? .... ಹಿರಣ್ಯಕಶಿಪು ಹುಟ್ಟಿದಾಗಿನಿಂದ ಲಕ್ಷಾಂತರ ನರಸಿಂಹಯ್ಯಗಳು ಬಂದು, ಇದ್ದು, ನತ್ಹೋಗಿದಾರೆ !

**ಪೋ**: ಈ ಊರ್ನಲ್ಲಿ ನರಸಿಂಹಯ್ಯ....ನೀವು ಒಬ್ರೆ....

**ನರ**: ನಾನೊಬ್ನೆ ಅಲ್ಲ; ಯಾಕೆ ಗುಡೀಲಿಲ್ವೇನು ನರಸಿಂಹಸ್ವಾಮಿ ! ಅಲ್ಲಿ ಡೆಲಿವರ್ ಮಾಡು. ನಿಮ್ಮ ಪೋಸ್ಟಾಫೀಸ್ ಕಂಬದೆದುರ್ಗೆ ನಿಂತ್ಕೊ, ಪ್ರಹ್ಲಾದನ್ನ ನೆನೆಸ್ಕೊಂಡು, ನೀಡು ನಿನ್ಹಾಳ್‌ನಾಟ್ಪೇಡ್ನ.... ಕಂಬ ಬಿರ್ಕೊಂಡು ಬರ್ತಾನೆ ನರಸಿಂಹ ನಿನ್ನೆರಡೂವರಾಣೆ ಕೊಡೋಕೆ! ....ಲಕ್ಷ್ಮೀಪತಿ ಅವ್ನು! ಹೊಡ್ರು !

**ಪೋ**: ಏನ್ಸಾರ್ ಹಳ್ಳಿಗಮಾರ್ರು ನೀವೂ? .... ಇದ್ಗಾನ ಕೊಡ್ದಿದ್ರೆ ಪೋಸ್ಟಿನಲ್ಲಿ ಬರೋ ಒಂದ್ಕಾಬ್ಲೂನು ಡೆಲಿವರ್ ಆಗೋದಿಲ್ಲ ನಿಮ್ಗೆ. ಈವತ್ತೆರಡೂವರಾಣೆಗೆ ಹಿಂಜರಿದ್ರೆ ನಾಳೆ ಬರೋ ಕಾಗದಗಳಿಗೂ, ಬರಬಹುದಾದ ಮನಿಯಾರ್ಡರ್ಗಳಿಗೂ ತುಂಡು ಬೀಳುತ್ತೆ ಸಾರ್ !

(ಕಾಗದವನ್ನು ಪುನಃ ನೀಡುವನು)

**ನರ**: ಸರಿ ! ನನ್ಕೋಪ ನಿನ್ಮೇಲ್ಹೋರ್ಸೇನುಪಯೋಗ .... ಈ ದಂಡ ತೆತ್ತೂ ಬರ್ದವ್ನು ಯಾರೋ ಅವನ್ನ ಬಲಿ ಇಡ್ತೇನೆ. ಇಲ್ತಾ........

(ಎಂದು ಕೈಯನ್ನು ಚಾಚುವನು.)

**ಪೋ**: (ಕೈಯನ್ನು ಹಿಂದೆಳೆಯುತ್ತಾ) ಕ್ಷಮಿಸಿ ಸಾರ್. ದುಡ್ಕೊಡ್ರುಲೂ....

**ನರ: ನಂಬ್ಕೇ ಅಂಬೋದು ಇಲ್ಬಿರೋ ಹೊತ್ಗೇನೆ ನಿನ್ನ ಬಿಸಲ್ನಿಲ್ಲಿ ಓಡ್ಯಾಡ್ಸಿ ಭಸ್ಮಮಾಡ್ತಿರೋದು ಭಗವಂತ!**

(ಕೈಯನ್ನು ಕೋಟಗಿರುವ ಆರು ಕಿಸೆಗಳಲ್ಲಿಯೂ ಒಂದಾದಮೇಲೊಂದು ಕೈಹಾಕಿ ಬರೀ ಕೈಯನ್ನು ಹೊರತೆಗೆದು ಮುಖವನ್ನು ಗಂಟುಹಾಕಿಕೊಂಡು ಕ್ರಮೇಣ ಕೈಯನ್ನು ಏಳನೇ ಕಿಸೆಯಲ್ಲಿ ಇಳಿಸಿ ವಿಷಮತಃ ಹೊರಕ್ಕೆಳೆದು ಎರಡಾಣೆಯನ್ನು ಪೋಸ್ಟ್ಮನ್ನಿನ ಕೈಯಲ್ಲಿಡಲು ತೊಡಗುವನು)

**ಪೋ:** ಏನ್ಸಾರ್ ಇದು ಚೌಕಾಸಿ....ಇದೇನಂಗ್ತೀನೆ ? ತೆಗೀರಿನ್ನೊಂದರ್ದಾಣೆ....

**ನರ: ಕೊಡೋದಿಲ್ಲ.**

**ಪೋ:** ಒಳ್ಳೇ ಕೊಡೋದಿಲ್ಲ ಸಾರ್ .... ನೀವ್ ಕೊಡದಿದ್ದರ್ಧಾಣೆ ನನ್ ಕೈಯಿಂದ ಹಾಕೋದೆ ?

**ನರ:** ಅದಕ್ಕೇನ್ಮಾಡೋದು ? ನೀನ್ ಬೀದಿ ಉದ್ದಕ್ಕೂ ನಡಕೊಂಡ್ ಬಂದು ಮೂರ್ಮಕ್ರಿ ಮದರಿಂಡಿಯಾನ ನನ್ಮೂ್ರಮಲ್ತಂದು ಕೊಡವಿದಿಯಲ್ಲ. ಅದ್ನ ನನ್‌ಕೈಯಿಂದ್ಯಾನ್ಯಾಗೆತ್ಬಾಕ್ಬೇಕೊ, ಹಾಗೇ ನನ್ನಿಂದಾದ ಹೆಚ್ಚುಕಮ್ಮೀನ ನಿನ್‌ಕೈಯಿಂದ....

**ಪೋ:** ಏನ್ಸಾರ್ ಮೂರ್ಮಕ್ರಿ ಮಣ್ಣೆ? ಅದಕ್ಮುಕ್ಕಾಲಾಣೆ ಆಯಿತಲ್ಲಾ ಸಾರ್ (ಎನ್ನುತ್ತಾ ಕಾಗದವನ್ನು ಬ್ಯಾಗಿಗೆ ಹಾಕತೊಡಗುವನು.)

**ನರ:** ಸ್ವಲ್ಪ ತಾಳೋ ಚಿತ್ರಗುಪ್ತ! ಸ್ವಲ್ಪ ತಾಳು.

(ಪೂರ್ವತಃ ಏಳು ಕಿಸೆಗಳನ್ನೂ ಶೋಧಿಸಿ ಎಂಟನೇ ಕಿಸೆಯಲ್ಲಿ ಕೈಯನ್ನಿಳಿಸಿ ಅರ್ಧಾಣೆ ಬಿಲ್ಲೆಯನ್ನು ಹೊರಕ್ಕೆ ತೆಗೆದು, ಎರಡೂವರಾಣೆಯನ್ನು ಪೋಸ್ಟ್ಮನ್‌ನ ಕೈನಲ್ಲಿಟ್ಟು ಕಾಗದವನ್ನು ತೆಗೆದುಕೊಳ್ಳುವನು.)

**ಪೋ:** (ತಾಮ್ರದ ನಾಣ್ಯವನ್ನು ಪರೀಕ್ಷಿಸಿ)ನಮುಕಲು ಕಾಸು ಸಾರ್!

**ನರ:** ನಿನ್ಹಾಳ್ಯಾಗ್ದಾನೂ ನಮುಕ್ಲೆ. ನಿನ್ಹಾಳ್ಪಿ ಪಾರ್ಟ್ಮೆಂಟಿನವ್ರು ನವರಿ ನವರಿ, ಮುಟ್ಟಿಮುಟ್ಟಿ, ಕುಟ್ಟಿಕುಟ್ಟಿ ನಮುದ್ಹೋಗಿರೊ ನನ್ಯಾಕಗ್ದಕ್ಕೂ

ನಾನ್ಕೊಟ್ಸಮುಕಲ್ಕಾಸಿಗೂ ಸರ್ಹೋಯಿತು ........... ಇನ್ನಿಲ್ಲಿಂತು ರೇಗಿಸ್ಬೇಡ ನನ್ನ .... ಹುಚ್ಚಿಡ್ಸತ್ತಿ ನಿನ್ಮುಖಾರವಿಂದ! ನೀನೋ, ನಿನ್ನ FACE ಓ!........

**ಪೋ:** ಕೋಪ್ಸ್ಕೋಬೇಡಿ ಸಾರ್....Good morning ಸಾರ್!

**ನರ:** (ಶ್ಲೇಷಪೂರಿತ ಧ್ವನಿಯಿಂದ) Good morning, God bless you!... ...That is what I **say** ಏ....but you know what I **m-e-a-n**... Goodಏನು morning ಏನು?....ಗುಡುಗು ಸಿಡ್ಲು ನಿನ್ತಲೇಮೇಲೆ ಬಿದ್ರೆ ನನಗೇನ್ನಷ್ಟ....ಮುಖ್ಯ ಎರ್ಡೂವರಾಣೆ ನನ್ಕೈಯಿಂದ ಛಟ್ಟು. ....**ತೊಲಗು!** (ಪೋಸ್ಟ್ ಮನ್ ನಿಷ್ಕ್ರಮಿಸುವನು.).... ನನ್ಕೈಯಿಂದ ಎರಡೂವರಾಣೆ ಹೋಗೋ ಹಾಗೆ ಮಾಡಿದ ಕಡುಪಾಪಿ ಯಾರಿದೂ?(ಎಂದು ಕಾಗದದ ವಿಳಾಸವನ್ನು ಪರೀಕ್ಷಿಸುವನು). ಓಹೋ ಇನ್ಯಾರು?....ನನ್ನ Genealogical treeನ ಬುಡಸಮೇತ ಬೋಳ್ಸೋಕೆ ಅಂತ ನನ್ಹೊಟ್ಟೇಲಿ ಹುಟ್ಟಿದ ಈ **ಕೊಡ್ಲಿಮರಿ!** (ಲಕೋಟೆಯನ್ನು ಹಸ್ತದಲ್ಲಿ ಹಿಡಿದು ಮತ್ತೊಂದು ಹಸ್ತದಲ್ಲಿ ಕಿಸೆಯಲ್ಲಿಯ ಸುಲೋಚನವನ್ನು ಹೊರಹಾಕಿ ಅಲಂಕರಿಸಿಕೊಂಡು ಓದುತ್ತಾ)

"ತೀ|| ರೂಪ|| .... ಪಾದಪದ್ಮ"....ಈ ತಾರೀಫ್‌ಗಳನೆಲ್ಲಾ ತಸ್ಕರ ಹಾಕ್ಕೊಂಡೇ ಇಳೀಬಿಡೋದು ಇವ್ನ ಕೈನ, Parental pocket ನೊಳಗೆ ...............ಈ ಸಲದ ದರೋಡೆ ಎಷ್ಟು ನೋಡೋಣ. (ಪತ್ರವನ್ನು ಅಲ್ಲಿಯೂ ಇಲ್ಲಿಯೂ ತಿರುಗಿಸಿ ಓದಿ) ಸರಿ Thirty Rupees ಈ ಸರತಿ ........ ಅಲ್ಲಾ! ನಾನೇನ್ರೂಪಾಯಿ ಗಿಡ ಹಾಕಿದೀನಿ ಹಿತ್ತಲ್ಬಾಕ್ಲಲ್ಲೀಂತ ತಿಳಕೊಂಡಿದ್ಧಾನೆಯೇ....(ನೇಪಥ್ಯದಿಂದ ಪ್ರವೇಶಿಸುತ್ತಿರುವ ಪತ್ನಿಯನ್ನು ಗಮನಿಸಿ)ಅವನ್ಹೆತ್ತವಳೇ ಬರ್ತಿದಾಳೆ. ಇಲ್ನೋಡೇ ನಿನ್ಮಗ, ನಿನ್ ಶ್ರೀಮಂತಪುತ್ರ, ಬರೆದಿದಾನೆ೩೦ ರೂಪಾಯಿಗೆ....ಅವ್ನ ಕಾಗ್ದ ನನ್ಕೈಮುಟ್ಟೋವಾಗ್ಲೆ ಎರ್ಡೂವರಾಣೇಗೆ ಕಚ್ತು....ಇನ್ನಿದಲ್ದೆ ಇನ್ಮೂವತ್ತು ರೂಪಾಯಿ ಕಳಿಸ್ಬೇಕಂತೆ....ಹೀಗಿವ್ನು ಹತ್ತು ಇಪ್ಪತ್ತು

ಮೂವತ್ತು ಅಂತಾ ಸುಲಕೊಳ್ತಾ ಬರ್ತಿದ್ರೆ ನಮ್ಗತಿಯೇನೆ? ಮನೆ ಹೊಲಾನೆಲ್ಲ ಮಾರ್ಕೊಂಡು ನಿನ್ಮಗನ ಬೂಟ್ಸ್‌ಹಾಕ್ಕೊಂಡ್ ಪಾದಾರವಿಂದಕ್ಕೊಪ್ಪಿಸ್ಬಿಟ್ಟು, ಮೈದಾನದಲ್ಕಿಂತ್ಕೊಂಡು ಕೈ ಕೈ ಹಿಸುಕ್ತಾ ಕಣ್‌ಕಣ್ ಬಿಡ್‌ತಿರ್‌ಬೇಕಾಗತ್ತಲ್ಲೇ ........ ಒಂದ್ಮಟ್ಗೆ ನಿರ್ಧರವಾಯ್ತು... ವೆಂಕೂ ಮದುವೆ ಈ ವರ್ಷ ಆಗೋಹಾಗಿಲ್ಲ. ಈ ಮಾತ್ಪಂಡಿತ. ಇದ್ಕನ್ತಪ್ಪಲ್ಲ. ಮನೇ ದುಡ್ನೆಲ್ಲ ನಾಲಕ್ಕಡೆ ಎರ್ಚೋಕೆ ಅಂತ ಹುಟ್ಟಿರೋ ನಿನ್ಮಗನ್ ಪ್ರಭಾವ!....ಅಲ್ಲಾ....

**ಪಾರ್ವತಮ್ಮ:** ಹಯ್ಯೊ ನಾಕು ನಿಲ್ಸೀ ಅಂದ್ರೆ! ನನ್ಮಗನಾಗ್ಹೋದ್ನೋ ಈಗ .... ಅವನು ಪಾಸ್ಮಾಡಿದ ಹೊಸದ್ರಲ್ಲಿ ನಿಮ್ಕೋರ್ಟಿನ ನಿಮ್ಮ ಕ್ಲಬ್ಬು, ಅಲ್ದೆ ಒಂದು ಪೇಟೆ, ಒಂದು ಕೇರಿ, ಒಂದು ಬೀದಿ, ಒಂದು ಮನೆ ಬಿಡದೆ ಬುಡುಬುಡಿಕೆಯುವನು ಸಾರಿದ ಹಾಗೆ "My boy you know...First class you know" ಅಂತಾ ಬೊಗಳ್ತಾ ಬಂದ ಅದೇ ಬಾಯಲ್ಲೇ ಈಗ ನನ್ಮಗಾ ಅಂದ್ಬಿಟ್ರಲ್ಲಾ! ಇಲ್ಲೀ! ನನ್ಮಗ್ನೇ ಆಗ್ಲಿ.... ಮಗೂ ಪಾಪ ತಂದೆತಾಯಿಗ್ಳನ್ ಬಿಟ್ಟು ದೂರ್ದೇಶಹೋಗಿ ಓದ್ತಿದೆ.... ಏನಾಪತ್ತೋ, ಏನ್ವಿಪತ್ತೋ, ಜ್ವರದಲ್ಲಿ ನರಳ್ತಿಧಾನೋ, ಇಲ್ಲ ಬಂಡಿ ಗಿಂಡಿ ಮೇಲೆ ಹತ್ತಿ ಆಸ್ಪತ್ರೆಯಲ್ಲಿ ಬಿದ್ಕೊಂಡು ಪ್ರಾಣ ಬಿಡ್ತಿಧಾನೊ ಏನೊ....ಕಾಗದದ ಸ್ಟಾಂಪಿಗ್ಗತಿ ಇಲ್ದೆ ನಾಟ್‌ಪೈಡ್ ಬರದ ನನ್ಕಂದ ಒಂದು ಶನಿ ೩೦ ರೂಪಾಯಿ ಕೇಳಿದ್ರೆ, ಅದಕ್ಕಿಷ್ಟು ಎಗ್ರಾಟ್ರೆ....ಅವನ್ಕೇಳೊ ೩೦ ರೂಪಾಯಿ ನಾನ್‌ಕಳಸ್‌ತೀನೆ. (ಕೊರಳನ್ನು ಮುಟ್ಟಿ ತೋರಿಸಿ) ನನ್ತೌರ್ಮನೇಲಿ ಹಾಕಿದ ಅವಲಕ್ಕಿ ಸರಾನ ಕುರೂಪ್ ಚಂದನ ಅಂಗ್ಡೀಲಿ ಕುದುವಿಟ್ಟಾದ್ರೂ ಕಳಸೇಕಳಸ್ತೀನೆ; ನಿಮಗಾ ಯೋಚ್ನೆ ಬೇಡ! .... ಹೌದೂ! .... ಇದಕ್ಕೂ ... ವೆಂಕೂ ಮದುವೆ ನಿಲ್ಲೋದಕ್ಕೂ ಸಂಬಂಧವೇನು?

**ನರ:** ಏನೇನೆ?....ಅದೇ....ಸೀಜನ್ನೂ ಆಗ್ತಾ ಬಂತು....ವರ ಹುಡ್ಕೀ ....ಸಿಕ್ಕೀ, ಜಾತ್ಕಾ ಹೊಂದ್ಸೀ ವರದಕ್ಷಿಣೆ ಟರ್ಮ್ಸೆಲ್ಲಾ ಮಾತಾಡೀ ....ಲಗ್ನ fix ಮಾಡೀ....ಯಾವಾಗ....ಏನು....?

**ಪಾ**: (ಅಡ್ಡಮಾತಾಗಿ) ಹಯ್ಯೋ! ಸಾಕೊಂದ್ರೆ! ಹುಡುಕೋದೇನ್ ವರಗಳ್ನಾ....ಇರೋದೆರಡೇ ವರಗಳು, ಮಾಮಲೆ ರಾಮಣ್ಣೋರ ಮಗ ಕೃಷ್ಣಮೂರ್ತಿ ಒಬ್ಬ .... ಗುಮಾಸ್ತೆ ರಂಗಣ್ಣೋರ ಮಗ ಅಶ್ವತ್ಥ ಒಬ್ಬ....ಅವನಿಗೆ ಮೆಟ್ರಿಕ್ಲೇಷನ್ ಇಲ್ದಿದ್ರೂನೂವೆ ದೊಡ್ಡುಟುಂಬ, ತಂದೆ ಆಫೀಸರು....ಇಲ್ಲ ಇವನಿಗೆ ಬಿ.ಎ. ಆಗಿದ್ರೂನೂವೆ ಆಸ್ತಿಯಿಲ್ಲ ಪಾಸ್ತಿಯಿಲ್ಲ, ಅಪ್ಪ ಗುಮಾಸ್ತೆ....ಎರಡು ಜಾತ್ಕಾನೂ ಹೊಂದುತ್ತೆ. ಇಬ್ರನ್ನೂ ನೋಡ್ಬ್ಯಾ, ಮಾತಾಡ್ಬ್ಯಾ, ಜೋಯಿಸನ್ಕರ್ಸಿ ಲಗ್ನ ಅಂಟಿಸ್ಬ್ಯಾ ಅಂಬೋದ್ಬಿಟ್ಟು ಮಡುವಿನಲ್ಲಿ ಸಿಕ್ಕೊಂಡವನ್ಹಾಗೆ ಕಣ್ ಕಣ್ ಬಿಡ್ತಾ ನಿಂತಿರೋದೆ ಗಂಡಸುತನ.... ...

**ನರ**: ಅದಕ್ಕೇ ಕಾಣೇ, ಕೋಟುಗೀಟು ಹಾಕ್ಕೊಂಡು ಹೊರಟದ್ದು. ರಾಮಣ್ಣೋರ್ಮನೇಗೆ ಹೋಗೀ ವಿಚಾರ್ಸಿಕೊಂಡು ಬರೋಣಾ ಅಂತ.

**ಪಾ**: ಅದು ಮೊದಲೇ ಬೊಗಳ್ಬ್ಯಾ .... ಅಲ್ಲಾ ಹೇಳ್ಬ್ಯಾದ್ದಾಗಿತ್ತೆ .... ಸ್ವಲ್ಪಿರಿ. ಎಸರಿಗಿಟ್‌ಬಿಟ್ ಬರ್ತೇನೆ. ನೀ....

**ನರ**: ನೀನೆಲ್ಲೀಗೆ ಬರ್ತ್ತೀಯೋ? ನಾನು ಹೋಗಿ ನೋಡ್ಕೊಂಡು ಬರ್ತ್ತೇನೆ.

**ಪಾ**: ಹಯ್ಯೋ, ನೀವೇನ್ನೋಡೀರೀಂದ್ರೆ ಗಂಡಸ್ರೂ....ಡಸಾ ಪಸಾಂತ ಇಂಗ್ಲೀಷಿನಲ್ಲಿ ಮಾತಾಡೋಕೆ ಗೊತ್ತೇ ಹೊರ್ತು ನಮ್ಹುಡ್ಗಿ ಮುಂದ್ಬಾಳೋ ಮನೆ, ಮನೆ ಹ್ಯಾಗಿದೆ, ಮನೆಯವ್ರು ಗುಣಾ ಏನೂ ಈ ಬಾಬ್ತುಗಳೆಲ್ಲ ನಿಮ್ಕಣ್ಣಿಗೆ ಬೀಳುತ್ತೆಯೋ?....ನಾನ್ಬಂದ್ರೆ....

**ನರ**: **ಒಪ್ದೆ**, ಒಪ್ದೆ, ಒಪ್ದೆ. ದಮ್ಮಯ್ಯ ಬಾ. ಆದರೆ ಭೇಗ ಹೊರಡು.

**ಪಾ**: ಭೇಗೇನು? ಹೊಸ ಸೀರೆ ಕಟ್ಕೊಂಡೇ ಬರ್ಬೇಕು; ದೊಡ್ಡ ಸ್ಥಳ!

**ನರ**: (ನಿಷ್ಕ್ರಮಿಸುತ್ತಾ) ಸರಿ ಹಾಗಾದ್ರೆ! ಜಗಲೀಮೇಲ್ಕೂತಿರ್ತೇನೆ. ಅಲಂಕಾರ ಪೂರ್ತಿಯಾದರೆ ಬಾ. (ನಿಷ್ಕ್ರಮಣ)

[ಪಾರ್ವತಮ್ಮನು ಒಳಬಾಗಿಲ ಕಡೆ ನಿಷ್ಕ್ರಮಿಸುತ್ತಿರುವಾಗ ಪರದೆಯು ಮೆಲ್ಲನೆ ಬೀಳುವುದು.]

## ಸೀನ್ ೨

### ರಾಮಪುರದ ಒಂದು ಬೀದಿ

[ಪ್ರವೇಶ: ಗಂಟುಗಳನ್ನು ಹಿಡಿದುಕೊಂಡಿರುವ ನಾಗತ್ತೆಯೂ ಸಾತುವೂ ಬರೀ ಕೈಯಿಂದಿರುವ ಪಾತುವೂ]

**ನಾಗತ್ತೆ:** ಹಿಂದ್ಕ್ಮುಂದ್ನೋಡಿದ್ದಿಲ್ವೇನೆ ನಿಮ್ಮೀ ಹಾಳೂರ್ನ ?....ನಾಚ್ಕೆ ಹೇಸ್ಕೆ ಇಲ್ದೆ ಹೆಂಗ್ಸಂಬೋದ್ಮರ್ತು....ಅತ್ತಿತ್ನೋಡ್ತಾ'ನಲೀಬೇಡ.... ನಡಿ ನಡಿ, ಹೆಜ್ಜೆಮುಂದ್ಹೆಜ್ಜೆ ಹಾಕ್ತಾ ನಡಿ.

**ಪಾತು:** (ಮುಖದಲ್ಲಿಯೂ ಧ್ವನಿಯಲ್ಲಿಯೂ ಕೋಪ ತಾತ್ಸಾರಗಳನ್ನು ತುಂಬಿ) ಅದಕ್ಕೆ ನಾನ್ಹೇಳಿದ್ದು, ಜಟ್ಕಾದಲ್ಲಿ ಬರೋಣಾಂತ!

**ನಾಗತ್ತೆ :** **ಜಟ್ಕಾ....ಜನ್ಮಕ್ಕೆ!** ಹೊಲಸುಕುದುರೆ, ಚಕ್ಕದ ಸಾಮಾನು —ಕಂಡೋರ್ಕ್ಕಾಣದವರು ಕೂತಗಾಡಿ—ಸುವಾಸ್ನೀ ಸುಪ್ಪತ್ತಿಗೆ— ಇನ್ನಾಲದ್ದಕ್ಕೆ ಸಾಬಿಗ್ಳ ಸಾರಧ್ಯ....! **ಜಾತಿ** ಬೇರೆ ಉಳಿಯುತ್ತೇ ನಿನ್ನ್ ಜಟ್ಕಾಲಿ ಜಂಬೂಸವಾರಿ ಮಾಡಿದ್ಮೇಲೆ!

[ಪಾತುವು ಎದುರು ಬರುತ್ತಿರುವ ಶೂದ್ರನೊಬ್ಬನು ಎಳೆದುಕೊಂಡು ಬರುತ್ತಿರುವ ನಾಯಿಯೊಂದರ ಹತ್ತಿರ ಓಡಿಹೋಗಿ ಅದರ ತಲೆಯನ್ನು ಸವರುತ್ತಾ "ಟೈಗರ್-ಟೈಗರ್" ಎನ್ನುವಳು.]

ಅಯ್ಯಯ್ಯೋ ಇದೇನೇ ಹೊಲ್ಸು! ಮುತ್ತೈದೆ ನಾಯೀನ್ಮುಟ್ಟಿ ಕೊಳ್ಳೋದು!

**ಪಾತು:** (ನಾಯಿಯನ್ನು ಅಪ್ಪಿಕೊಳ್ಳುತ್ತಾ) ಕಂತ್ರಿಯಲ್ಲ....ಜಾತಿ ನಾಯಿ, ಹೌಂಡು.

**ನಾಗತ್ತೆ :** ಹೌಂದು—ಹೌಂದು!

**ಬೋರ:** ಕೈಮುಗ್ದೇರವ್ವ! ಇದ್ಯಾಕ್ರವ್ವ ಇಂಗ್ಬಂದ್ಬಿಟ್ರಿ? ಒಂದು ತಂತೀನ್ಯಾನ ಕಳ್ಸಿದ್ರೆ, ಗಾಡೀ ತರ್ತಿದ್ನೆಲ್ಲ ಟೇಸನ್ನಿಗೆ, ಸಾಮಾನೆಲ್ರವ್ವಾ....?

**ಪಾತು:** (Constable) ಕಾನ್ಸ್ಟೇಬಲ್ಗೆ ಹೇಳಿದೇನೆ, ಕಳಸ್ತಾನೆ ಮನೇಗೆ.

**ನಾಗತ್ತೆ:** ಇದೇನಿದೂ? ಶೂದ್ರನ್ಹತ್ರ ಮಾತೂ?

**ಪಾತು:** (ತಿರುಗದೆ) ಬರೀ ಶೂದ್ರನಲ್ಲ. ನಮ್ಜವಾನ. ಮನೇಲಿ ಸೌಖ್ಯವೇನೋ ಎಲ್ರೂ?

**ಬೋರ:** ಉಂರವ್ವಾ.

**ಪಾತು:** ಎಲ್ಲಿ ಕರ್ಕೊಂಡ್ಹೋಗ್ತಿದ್ದೀಯಾ ನಾಯೀನಾ?

**ಬೋರ:** ಕೆರೆ ಕೆಟ್ಗೇ ಮೈತೊಳಿಯಾಕ್ರವ್ವಾ.

**ನಾಗತ್ತೆ:** ಅಲ್ವೇ ಮತ್ತೆ?! ಜಾತಿ ನಾಯೀ....ಹುಂ....ಕೆರೇಲಿ **ಶುಭ್ರ**ವಾಗಿ ಸ್ನಾನ ಮಾಡ್ಬಿಟ್ಟು, ಸ್ವಾಮಿ ದರ್ಶನ ಮಾಡಿಕೊಂಡ್ಬರುತ್ತೇನೋ, ಈ **ಶ್ವಾನ ಮುಂಡೇದು**!....ಮುಂಜೀಯೇನಾದ್ರೂ ಆಗಿದೆಯೇನು ಈ ಮೃಗಕ್ಕೇ? .... ಜಾತೀ ನಾಯೀ!!!!.... ಇದಲ್ದೆ ಇನ್ನೆಷ್ಟು ಜಾತಿ ಮೃಗಗಳಿವೆ ನಿಮ್ಮ ಅರಮನೇಲಿ....?

**ಪಾತು:** (ಬೋರನಿಗೆ) ಚಿಕ್ರಾಯರು ಊರಿಂದ್ತಿರ್ಗಿ ಬಂದ್ಬಿಟ್ರೇನೋ?

**ನಾಗತ್ತೆ:** ಎಷ್ಟುರಾಯ್ರೇ ನಿಮ್ಮನೇಲಿ....?

**ಪಾತು:** ಚಿಕ್ರಾಯ್ರೂ ಅಂದ್ರೆ, ನಮ್ಮಣ್ಣ!

**ನಾಗತ್ತೆ:** ನಿಮ್ಮಣ್ಣಾ?!....ಯಾವಣ್ಣಾ!....ಓಹೋ, ನಿನ್ನ್ಮದುವೇಲಿ? ಕತ್ತೇ ಹಾಗೆ ಕೇಕೇ ಹಾಕ್ತಾ ಕುಣಿದಾಡ್ತಿತ್ತಲ್ಲಾ ಆ ಮಂಗ್ನೋ....

**ಪಾತು:** (ಕೋಪದಿಂದ ತೀಕ್ಷ್ಣ ದೃಷ್ಟಿಯನ್ನು ನಾಗತ್ತೆ ಮೇಲೆ ತಿರುಗಿಸಿ) ನಮ್ಮಣ್ಣನೇನು ಮಂಗ್ನಲ್ಲ!

**ನಾಗತ್ತೆ : ಸರಿ, ಮಾರ !** ಇಟ್ಕೋ....ವ್ಯತ್ಯಾಸ್ವೇನು? **ಮಾರನಿಗೆ ಸುಟ್ಕೋರೆ ನಿಮ್ಮಣ್ಣನಿಗೆ ಸೊಟ್ಕೋರೆ!**....ನಡಿ, ನಡಿ.

[ನಾಗತ್ತೆ ಮೊದಲಾದವರು ಒಂದು ದಿಕ್ಕಿಗೂ, ಬೋರನೂ ನಾಯಿಯೂ ಇನ್ನೊಂದು ದಿಕ್ಕಿಗೂ ನಿಷ್ಕ್ರಮಣ.]

## ಸೀನ್ ೩

[ರಾಮಣ್ಣನವರ ಬಂಗ್ಲೆಯ ಗೇಟನೆದುರಿಗೆ ನಾಗತ್ತೆ ಇತ್ಯಾದಿ ಬಂದು ಸೇರುವರು]

**ನಾಗತ್ತೆ :** ಇದೇನೋ ನಿಮ್ಮನೆ?

**ಪಾತು :** ಹೌಸು (House ಉ) ನಮ್ದು. (Site ಉ) ಸೈಟು ನಾವೇ ತಗೊಂಡು (Build) ಬಿಲ್ಡ್ ಮಾಡಿಕೊಂಡದ್ದು.

**ನಾಗತ್ತೆ :** ಏ.... ನೂ ?

**ಪಾತು :** (ಘಟ್ಟಿಯಾಗಿ) **House ನಮ್ದು Site ನಾವೇ ತಗೊಂಡು Build ಮಾಡಿಕೊಂಡದ್ದು.**

**ನಾಗತ್ತೆ :** (ಕಿಡಿಕಿಡಿಯಾಗಿ) ಎಷ್ಟುದೊಡ್ಡೋ ನಿನ್ಗಂಟ್ಲೊ .... ದೊಡ್ಡಿ ಪತ್ರ ಬತರ್ಾ ಬತರ್ಾ ದೊಡ್ಗಂಟ್ಲಲ್ಲಿ ಕಿರ್ಚ್ಕೋ ಕತ್ತೆಮರಿ ಹಾಗೆ ಎತ್ತತಾಳೆ ಸ್ವರಾನ....! ಇದೇನೇ ಸಾಲಿ ಹುಡುಗರು ಹಲಿಗೇ ಮೇಲೆ ಬರದಹಾಗೆ ಬಾಕ್ಲಿಗೆ ತಗಲ್ಸಿದೆ....?

**ಪಾತು :** ಅದು ನಮ್ಮನೆ ಹೆಸ್ರು .... ಜ್ಞಾನ ವಿಲ್ಲ (Villa) ಅಂತ.

**ನಾಗತ್ತೆ :** ಗೊತ್ತು! ಅದನ್ನ ನಾಚಿಕೆ ಹೇಸ್ಕೆ ಇಲ್ದೇ ಬೀದೀಲಿ ಬಡ ಕೊಳ್ಳೋದೇ?.... !

**ಪಾತು :** ವಿಲ್ಲ(Villa)ಅಂಬೋದು ಇಂಗ್ಲೀಷು....“ಇಲ್ಲಾ” ಅಂತಲ್ಲ....

**ನಾಗತ್ತೆ :** **ಗೊತ್ತು ! ಇಥೆ ಇಥೇ** ಅಂತರ್ಥ....ಇಂಗ್ಲೀಷ್ ಭಾಷೇ.... ತಳ್ಕಳ್ಕು....ತುರುಕಿನ ಹಾಗೆ....**ಇಲ್ಲಾ ಅಂದ್ರೆ ಇಥೆ. ಮನೆ ಅಂದ್ರೆ ಮಸಾಣ** .... ಮನುಷ್ಯರು ಅಂದ್ರೆ ಪ್ರೇತಗಳೂ . . . ! ನಡಿ, ನಡಿ [ಗೇಟನ್ನು ಪ್ರವೇಶಿಸಿ ವೆರಾಂಡಾ ಮೆಟ್ಲಿನ ಪಕ್ಕದಲ್ಲಿರುವ ಕ್ರೋಟನ್ ಗಿಡಗಳ ಮರೆಯನ್ನು ಸೇರುತ್ತಲೇ ಅಲ್ಲಿ ಕೂತು ಸಂಭಾಷಿಸುತ್ತಿರುವವರ ಕೆಳಗಿನ ವಾಕ್ಯಗಳು ಕೇಳಿಬರುವುವು]

[ಲಕ್ಷ್ಮೀ: ಮೀಟಿಂಗ್ attend ಮಾಡೋಕೆ try ಮಾಡ್ತೇನೆ. Miss. ಪ್ರಭಾಮಣಿ! Manage ಮಾಡೋಕಾಗದಿದ್ರೆ ನನ್ನ sympathy ಎಲ್ಲ ನಿಮ್ಮ movementನಲ್ಲಿ ಸಂಪೂರ್ಣವಾಗಿದೆ ಅಂಬೋದು ಮರೀ ಬಾರದು. After all, heart ಅಲ್ವೆ ದೊಡ್ದು.

Miss. ಪ್ರಭಾಮಣಿ: ಅದು ನಿಚ್ಚಯ Mrs. ರಾಮಣ್ಣಾ.... ]

ನಾಗತ್ತೆ: ಇದೇನೇ ಇದೂ! ಯಾರಮನೇ?....ಕೊಂಗರ ಮನೇನೋ .... ಚಟ್ಟೀಗಾರರ ಮನೇನೋ .... ಕನ್ನಡ ಇಂಗ್ಲೀಷ್ನ ಕಲಸು ಮೇಲೋಗರ ಮಾತಾಡ್ತಿಧಾರೆ....!

ಪಾತು: ಮಾತಾಡ್ತಿರೋದು ನಮ್ಮ Mother ಉ ಇನ್ನೊಬ್ರು; ಯಾರೋ Visitorಊ ......

[Miss. ಪ್ರಭಾಮಣಿ: ಇಂಡೂ ಸ್ತ್ರೀಗಳು ನಿಮ್ಮ ಆಗೆ ಇದ್ದರೆಟಾನೆ.... Futureನಲ್ಲಿ ಸೀಮೆ ಡೊರೆಸಾನಿಗಲ ಹಾಗೆ ಆಗಬಹುದು.

ಲಕ್ಷ್ಮೀ: ನಿಜ of course ನಿಜ .... ಹೊರ್ಟುಬಿಟ್ಟಿರಾ .... ? ನಿಮ್ಮ Visitಗೆ ಬಹಳ thanks ಉ]

ನಾಗತ್ತೆ: ಓಹೋ! ಸೀಮೆ ದೊರೆಸಾನಿಗಳಾಗಬೇಕೋ! ಓ ಹ್ಹೋ ಹೊ! ಈಗ ಅರ್ಥವಾಯಿತು, ನಿನ್ನ ಹಾಳು ಚಾಳಿಗಳೆಲ್ಲ ಎಲ್ಲಿಂದ ಬಂತೂ ಅಂತ. ಈ ಹಾಳು ಕಾರ್ಖಾನೇಲಿ ತಯಾರಾಗಿರೋ ಹೊತ್ತಿಗೇನೆ ಮನೆ ಬಿಟ್ಟು ಮಾವನ ಮನೆಗೆ ಬಂದ್ರೂನೂವೆ, ಸೊಟ್ಟಬೈತಲೆ ತಲೇಲಿ, ಸೀಮೆಸುಣ್ಣ ಮುಖಕ್ಕೆ, ಜಾತಿ ನಾಯಿ ನೆಕ್ಕಿ ಕುಂಕುಮವಿಲ್ಲದ ಹಣೆ, ಈ ದೊರಸಾನಿತನ, ಎಲ್ಲಾ....

[Miss. ಪ್ರಭಾಮಣಿ: (ಮೆಟ್ಟಿಲನ್ನು ಇಳಿಯುತ್ತಾ) Good Morning Mis ರಾಮನ್ನಾ.

**ಲಕ್ಷ್ಮೀದೇವಮ್ಮ :** (ತಾನೂ ಇಳಿದು Miss ಪ್ರಭಾಮಣಿಯು ಚಾಚಿದ ಕೈಯನ್ನು ಹಿಡಿದು ಕುಲುಕುತ್ತಾ) Good Morning Miss. ಪ್ರಭಾಮಣಿ]

**ನಾಗತ್ತೆ : ಪ್ರಭಾಮಣಿ....**ಪ್ರಭಾ! ಮಣಿ! .... ಮಿಸ್ಸು....ನೀನೇನ್ ತಾನೇ ಇಂಗ್ಲೀಷ್ ಕಿಲೂರ್, ನೀನೆಷ್ಟುತಾನೆ ಕೈಕುಲಕು ಆದರೆ ನಿನ್ನ ಕಪ್ಪುಮುಖದ ಕಪ್ಪಂ ಕಪ್ಪೇನೋ ಹೋಗೋ ಹಾಗಿಲ್ಲ ಕಲಿಯುಗ ತೀರೋವರೆಗೆ! ಹೆಸರು ನೋಡು ಪ್ರಭಾಮಣಿ! ........ಅಗ್ನೀಗೆ ಅಭಿಷೇಕ ಮಾಡಿ ಅಂಬಾರಿಯಲ್ಲಿಟ್ಟು ಜಂಬೂಸವಾರಿ ಹೊರಡಿಸಿದ ಹಾಗೆ ಇದೆ ಇವಳ ಪ್ರಭೆ!........ಈ ಪ್ರಭಾಮಣಿ ಜ್ವಾಲೆ ಶಮನ ಮಾಡೋಕೆ ಬಿಳೀ ಸೀರೆ ಬೇರೆ! .... .... ಒಂದು ಹತ್ತು ವರ್ಷ ಸುಣ್ಣದ ಗೂಡ್‌ನಲ್ಲಿ ಕುಕ್ಕರ್ಸಿಸಿ ಅದೃಷ್ಟವಾಸ ಮಾಡಿಸಿದ್ರೆ ಒಂದು ವೇಳೆ ಬಣ್ಣ ಸ್ವಲ್ಪ.... ಊ ಹೂಂ. ಆದೂ ಸಂದೇಹವೆ!

**Miss. ಪ್ರಭಾಮಣಿ :** (ಪಾತುವನ್ನು ಗಮನಿಸಿ) Mrs ರಾಮುನ್ನಾ, ಪರ್ವಾಟಿ ಅಮ್ಮನವರು! .... (ಪಾತುವಿನ ಹತ್ತಿರ ಬಂದು ಕೈಯನ್ನು ಚಾಚುತ್ತಾ) ಪರ್ವಾಟಿ ಅಮ್ಮನವರೇ, ನಿಮ್ಮ ಯಜಮಾನರು ಸೌಕಿಯವಾಗಿ ಇಥಾರೆಯೇ?

**ಪಾತು :** (ಕೈಯನ್ನು ಕುಲಕುತ್ತಾ) ಇಥಾರೆ.

**ನಾಗತ್ತೆ :** ಇಥಾನಿಥಾನೆ. .... ಗಂಡನ ಮನೆ ಬಿಟ್ಟು ಹೆತ್ತವರ ಮನೆಗೆ ಬಂದರೂನೂನೆ ತಾಳೀ ಕಟ್ಟಿದ್ದೊಂದು ಕ್ರಿಮಿ ಇನ್ನೂ ಇಥೇ ಅಂತಾದರೂ ಜ್ಞಾಪಕ ಇಥೆಯಲ್ಲ!....ಆಶ್ಚರ್ಯ! ಪರಮಾಶ್ಚರ್ಯ!

(Miss. ಪ್ರಭಾಮಣಿಯು ಪ್ರಯಾಣೀಕರನ್ನು ಹಾಸಿ ನಿಷ್ಕ್ರಮಿಸುವಳು)

**ಪಾತು :** (ಮಾತೆಯನ್ನು ಸೇರಿ) ಅಮ್ಮಾ, ನಾಗತ್ತೆ ಬಂದಿಥಾರೆ. ಮೆಟ್ಲು ಹತ್ತಿ ವರಾಂಡಾದ ಆರಾಮು ಕುರ್ಚಿಯನ್ನು ಅಲಂಕರಿಸಿ ಕಾಲುಗಳನ್ನು ತೂಗುತ್ತ ಕೂಡುವಳು.)

**ಲಕ್ಷ್ಮೀ:** ಬಂದ್ರಾ....?

**ನಾಗತ್ತೆ:** ಇಲ್ಲ! ಇನ್ನೂ ಊರ್ನಲ್ಲೇ ಇಧೇನೆ!....ಇದೇನು ಜಾಣತನದ ಪ್ರಶ್ನೆಯೋ?....ಊರು ಬಿಟ್ಟು ಊರಿಗೆ ಬಂದು ಎದುರಿಗೆ ನಿಂತಿರೋ ವ್ಾರನ್ನನೋಡಿ ಬಂದ್ರಾ ಅಂದ್ರೆ, ಏನು ಬುದ್ಧಿ ಮಂದಾನೋ, ಇಲ್ಲ ದೃಷ್ಟಿ ಮಧ್ಯನ್ಹಾನೋ, ನನಗೇನ್ಗೊತ್ತು!....?

**ಲಕ್ಷ್ಮೀ:** ~~ಸಾತೂ~~! ಬಂದ್ಯಾ ಮಗೂ. ಬನ್ನಿ ಒಳಗೆ.

(ಮೂವರೂ ಮೆಟ್ಲನ್ನು ಹತ್ತಿ ವೆರಾಂಡಾ ಸೇರುವರು.)

**ಪಾತು:** ಅದೇನಮ್ಮ Miss. ಪ್ರಭಾಮಣಿ ಬಂದಿದ್ದದ್ದು?

**ಲಕ್ಷ್ಮೀ:** ಏನೇನು? Association Secretary ಅವ್ಳು. ನಾನು Presidentಉ Next meeting arrange ಮಾಡೋಕೂ, ನಾನು last Lecture ಕೊಟ್ಟಿದ್ರ ವಿಷಯ Hindu Paperನಲ್ಲಿ ಬಂದ cuttingನೂ ತಂದು ಕೊಡೋಕೆ ಬಂದಿದ್ಲು. ಇಕೋ ನೋಡು, (ವರ್ತಮಾನ ಪತ್ರದಿಂದ ಕತ್ತರಿಸಿದ ಒಂದು ಅಂಶವನ್ನು ಪಾತುವಿಗೆ ನೀಡಿ) ಓದು.

**ಪಾತು:** (ಚಾಚಿದ ಕಾಲುಗಳನ್ನು ಅತ್ತಿತ್ತ ಆಡಿಸುತ್ತಾ ಓದುವಳು.)

"Rampur Notes"

**Women's Progressive Union.** Mrs. Ramanna, our popular President delivered a well thought out lecture on ideal methods of up-bringing of children. The discourse was listened to with rapt attention. It is felt assured that brought upon the lines laid down by this most enlightened lady the future generation of Rampur will take the most prominent part in the activities of our motherland". ಇದೇನಮ್ಮ? ಇಷ್ಟೇನೆ?

**ಲಕ್ಷ್ಮೀ:** ಇನ್ನೆಷ್ಟು ಬೇಕೂ?

**ಪಾತು:** ಅದೇನ್ ನೀನುಕೊಟ್ಟ lectureಉ ?

**ಲಕ್ಷ್ಮೀ:** ಬರದಿದೆಯಲ್ಲ, Ideal methods of upbiingingಉ ಅಂತ.

**ನಾಗತ್ತೆ:** ಲೆಕ್ಚರ್ ಕೊಟ್ರಾ ನೀವೂ .... ? ಅದೇನ್ ಲೆಕ್‌ಚರೂ....?

**ಲಕ್ಷ್ಮೀ:** ಮನೆಗಳಲ್ಲಿ ಹುಟ್ಟಿದ ಮಕ್ಕಳು ಮುಂದಕ್ಕೆ ನಮ್ಮ ಮಾತೃ ಭೂಮೀಗೆ ಉಪಯೋಗವಾಗೋ ಪ್ರಜೆಗಳಾಗಲು ಚಿಕ್ಕಂದಿನಲ್ಲಿಯೇ ಎಂಥೆಂಥ ಶಿಕ್ಷೆ...ತರಪೇತು, ತಾಯಿ ತಂದೆಗಳು ಕೊಡಬೇಕಾದ್ದು, ಅಂಬೋ ವಿಷಯ ....

**ನಾಗ:** ಓಹೋ! ಅದೆಂಥ ತರಪೇತು ಕೊಡಬೇಕೋ? ಕೇಳಬಹುದೋ?

**ಲಕ್ಷ್ಮೀ:** ಅದಕ್ಕೇನು ಕೇಳಿ, ಮೇಲೆ ಬನ್ನಿ.

**ನಾಗತ್ತೆ:** ಕ್ಷಮಿಸಿ. ಆ ಮಸೀ ಮುಖದ ಸುಪ್ರದೀಪ ಕಾಲಿಟ್ಟ ಜಮಖಾನೆ! ನಾನೇನು ಕಿವುಡಲ್ಲಾ, ಇಲ್ಲಿಂದ್ಲೇ ಕೇಳತೇನೆ.

**ಲಕ್ಷ್ಮೀ:** ನಿಮ್ಮಿಷ್ಟ. ಮಕ್ಕಳನ್ನ ಸಾಕೋದು ಹೂವಿನ ಗಿಡ ಸಾಕಿದ ಹಾಗೆ ಸಾಕಬೇಕು ; ಪಾತಿ ಚೆನ್ನಾಗಿ ಕಟ್ಟಿ, ಆಹಾರ ಇತ್ಯಾದಿಗಳನ್ನ ಚೆಲ್ಲಿ ಶುಭ್ರವಾದ ನೀರು ಬಿಟ್ಟು ನಾಜೋಕಾಗಿ ಹ್ಯಾಗೆ ಹೂವಿನ ಗಿಡಗಳನ್ನ ಬೆಳಸ್ತೇವೋ ಅದೇಪ್ರಕಾರ ಮಕ್ಕಳು ಬೆಳೆಯೋ ಪರಿಸ್ಥಿತೀನೆಲ್ಲಾ ಪರಿಶುದ್ಧವಾಗಿಟ್ಟು, ಇರೋ ದುರ್ಗುಣಗಳನ್ನೆಲ್ಲಾ ತಿದ್ದಿ, ಸುಗುಣಗಳನ್ನ ಬಿತ್ತಿ ಬೆಳೆಸಿದ್ದರ ಫಲ, ಸುವಾಸನೆಭರಿತವಾದ ಕುಸುಮಗಳಾಗಿ ಮುಂದಕ್ಕೆ ಬಂದು, ಬೆಳೆಸಿದವರಿಗೂ ಅವುಗಳ ಆನ್ಯೋನ್ಯತೇನ ಅನುಭವಿಸುವವರಿಗೂ ಆನಂದವನ್ನು ಕೊಡುವುದರಲ್ಲಿ ಸಂಶಯವೇನೂ ಇಲ್ಲ, ಅಂಬೋದು ನನ್ನ lectureನ ಸಾರಾಂಶ.

**ನಾಗತ್ತೆ:** ಹ್ಯಾಗಿರಬೇಕು, ಹ್ಯಾಗೆ ಮಾಡಬೇಕು, ಅಂಬೋದ್ನೆಲ್ಲಾ ಸಿಕ್ಕಾಪಟ್ಟೆ ಬಾಯಿಂದ ಬೊಗಳೋಕೆ ಬದಲಾಗಿ ತಾನೇ ತನ್ನ

ಹೊಟ್ಟೇಲಿ ಹೆತ್ತ ಒಂದೆರಡು ಮಕ್ಕಳನ್ನ ಸಾಕಿ **ನಮೂನೆಯಾಗಿ** ತೋರ್ಸ್ಸೋದಲ್ವೇ ಉತ್ತಮಾ? ಸುಮ್ಮನೆ ಬಾಯಿಂದ ಕುಸುಮಾ ಅಂತ ಕಿರಲಿ ದಾಕ್ಷಣವೇ..

**ಲಕ್ಷ್ಮೀ:** ಯಾಕೇ .... ? ನಮ್ಮ ಪಾತು .... ?

**ನಾಗತ್ತೆ:** ಓಹೋ! ಇದನ್ನ ಕುಸುಮದ ಲೆಕ್ಕಾಚಾರಕ್ಕೆ ಸೇರಿಸಿಬಿಟ್ರಾ! .... ? ಈ ಎಕ್ಕದ ಹೂವು, ನಿಮ್ಮ ಕಣ್ಣಿಗೊಂದುವೇಳೆ ಕುಸುಮದ ಹಾಗಿದ್ರೂನೂವೆ ಮಿಕ್ಕೋರ ಕಣ್ಣಿಗೆ ಕಳ್ಳೀ ಹಾಲು! ಅಲ್ಲಾ, ಬ್ರಹ್ಮ ಕುಲದಲ್ಲಿ ಹುಟ್ಟಿ ಬ್ರಾಹ್ಮಣಿಕೇನ ಮೂಲೇಗೆ ಕುಕ್ಕಿ ಒಂದ್‌ಮಡೀ ಒಂದ್‌ಆಚಾರ ಇಲ್ದೇ, ಹೆಗ್ಗಣ ಹಂದಿ ತಿನ್ನುವ ಪರಂಗಿಯವರ ಚಂಮ್ಮಡಕ್ಕರಿಗಿ, ತೊನ್ನಿನ ತೊಗಲು-ಬೆಕ್ಕಿನ ಕಣ್ಣು-ಕೆಂಗೂದ್ಲು-ಬಿಟ್ಟು, ಮಿಕ್ಕ ವಿಷಯದಲ್ಲೆಲ್ಲಾ, ಸೀಮೆ ದೊರಸಾನಿಗಳಾಗ ಬೇಕೂಂತಾ ಉತ್ತಮಜಾತಿ ಕುಲಸ್ತ್ರೀಯರು ನಲಿದಾಡೋ ಮನೆಗಳಲ್ಲಿ ಹುಟ್ಟಿದ್ಮಕ್ಳೂ ನಮ್ಮ ದೇಶದ ನಡತೆ ಆಚಾರಾನ ಮುಂದಕ್ಕೆ ಹ್ಯಾಗ್ತಂದಾರೂ? "ಹಿರಿಯಕ್ಕನ ಚಾಳಿ ಮನೆಗೆಲ್ಲ" ಅಂತ ಹಿರಿಯರಂಬೋ ಸಾಮತಿ ಸುಳ್ಳೇ....? ಸರಿಸರಿ. ನನಗ್ಯಾಕೆ ನಿಮ್‌ಲೆಕ್‌ಚರಿನ ಮಾತು. ನಾನಿಲ್ಲಿಬಂದದ್ದೂ, ಹುಟ್ಟಿದ ಮನೆ ಸೇರುತ್ಲೂ ಹಿರಿಯರೂ ಅಂಬೋ ಮರ್ಯಾದೆ ಇಲ್ದೇ ಕಾಲ್ಚಾಚಿಕೊಂಡ್‌ಬಿದ್ದಿರೋ ಈ ಕತ್ತೇಮರಿ, .... ಅಲ್ಲ .... ನಿಮ್ಮ ಕುಮಾರೀನ .... ತಲ್ಪಿಸೋಕೆ.... ಬರ್ತೀನೆ! ನಡಿ, ಸಾತೂ!

**ಲಕ್ಷ್ಮೀ:** ಯಾಕೆ, ಇಲ್ಲೆ ಸ್ನಾನಮಾಡಿಬಿಟ್ಟು, ಊಟ .... ? ....

**ನಾಗತ್ತೆ:** ಕ್ಷಮಿಸಿ, ತೊಂದರೆ! (ತಾತ್ಸಾರಭರಿತವಾದ ಮುಗುಳು ನಗೆಯಿಂದ) ತೊಂದರೆ! ನಿಮ್ಮ ಕಪ್ಪು ದೊರೆಸಾನಿಗ್ಳೂ, ನಿಮ್ಮ ಬೋರಗ್ಳೂ, ಇಂಥ ಪುಣ್ಯಾಜನರ ಪಾದಾರವಿಂದ ತಗಲಿದ ಈ ಮನೇನ ಗುಡ್ಸಿ ಸಾರ್ಸಿ ಪುಣ್ಯಾಚನಾ ಮಾಡಿ, ನಾನೂ ತಕ್ಕ ಪ್ರಾಯಶ್ಚಿತ್ತಾನೂ ಮಾಡಿಕೊಂಡೂ, ಆಮೇಲೆ ಊಟಕ್ಕೇಳೋದು, ತೊಂದ್ರೆ ತೊಂದ್ರೆ

........! (ಕ್ರಮೇಣ ಮುಖವು ರೌದ್ರವನ್ನು ತಾಳಿ) **ಒಡದು ಹೇಳಿಬಿಡ ತೇನೆ ಕೇಳೀ! ನಿಮ್ಮೀ ಹಾಳು ಆಚಾರಗೆಟ್ಟಮನೇಲಿ ಕಾಲಿಟ್ಟದ್ ಪಾಪಕ್ಕೇನೆ.** ....... ರೌರವಾದಿ ನರಕ ನನಗೆ ಕಾದಿರೋದಲ್ದೇ, ಒಂದು ತೊಟ್ಟು ಜಲಪಾನ ಮಾಡಿದ್ರೋ ನಿಮ್ಮನೇಲಿ, ನನ್ಜಾತಿ ನಾಶಾ ಆಗೋದಲ್ದೇ ಬಿರುಗಾಳೀಗೆ ಹುಣಿಸೇ ಹಣ್ಣುಗಳು ಉದರಿದ ಹಾಗೆ ಪಟಪಟ ಪಟಪಟ ಪಟಾಂತ ನಮ್ಮ ಕುಲದ ಪಿತೃಗಳು ಉದುರಿಬಿಟ್ಟಾರು ಮೇಲ್‌ಲೋಕದಿಂದಾ .... ಬರ್‌ತೇನೆ! ನಡೀ, ಸಾತೂ! (ನಾಗತ್ತೆಯೂ ಸಾತೂ ನಿಷ್ಕ್ರಮಣ)

**ಲಕ್ಷ್ಮೀ:** ಅಬ್ಬಾ! ಏನು ಹೆಂಗ್ಸೆ!

**ಪಾತು:** ಹುಷಾರಮ್ಮ! ಅವಳ ಕಿವೀಗ್ ಬಿದ್ದೀತೂ .... ತಿರಿಗಿ ಬಂದು ತಿಂದ್ಬಿಟ್ಟಾಳು, ನಿನ್ನೂ ನನ್ನೂ (ಕುರ್ಚಿಯನ್ನು ಬಿಟ್ಟು ನಾಲ್ಕೈದು ಮೆಟ್ಲುಗಳನ್ನು ಇಳಿದು ಬಗ್ಗಿನೋಡಿ) **ಇನ್ನೇಕವದ್ದು ಹೇಳ್ರೊ! ತೊಲಗಿತಾ ಪಿಶಾಚಿ!**

**ಲಕ್ಷ್ಮೀ:** ಅದೆಲ್ಲಾ ಇಲ್ಲೀಗ! ನೀನೇನ್ ಕಾಗದ ಬರದು ಹೆದಸ್ಕೋದು, ಭಾವೀಲ್ಬಿದ್ದ್ನಾಯ್ತೇನೆ ಅಂತಾ?

**ಪಾತು:** ಹೆದಸ್ಕೋದೇನು, ದಿಟಾನೇ! ಬರದದ್ದು, ಇಲ್ಲಿ ಮನೆಗೆ ಕರಸ್ಕೊಳ್ಳೋಕೆ .... ನಿನ್ನೆದುರ್ಗೇ ಹೀಗಿದಾಳಲ್ಲ ಈ ಪಿಶಾಚಿ, ಅವರ್ಮನೇಲೀ ಸಾವಿರ ದೆವ್ವಾ ಹತ್ತಾವು ಪಿಶಾಚಿ ಪಾಕ ಇಳಿಸಿದ **ಖೋವಾ ಅಮ್ಮ ಅವ್ಳು. ಒಂದೇ ಮಾತ್ನಲ್ಲಿ ಹೇಳ್ತೀನಮ್ಮ, ಇನ್ನಾತಿರ್ಗಂಗ್ಯು ನಾನು ಆ ಮನೇಗೆ ಹೋಗೋ ಮಾತೆತ್ತಿದ್ರೋ, ಈ ಮನೇಲಿ ಒಂದು ಭಾವಿ ಇರೋದ್ನ ..................... ನನಗೆ ಜ್ಞಾಪಿಸಬೇಕಾದ್ದಿಲ್ಲ .... ಈ ಮಾತು ಖಂಡಿತ.**

**ಲಕ್ಷ್ಮೀ:** ಏನು ಹಟವೇ ನಿನ್‌ದು. **ಚನ್ನಾಗಿ** ಹೇಳಿದ್ದಾಕೆ, .... **‘ಎಕ್ಕದ ಹೂವು, ಕಳ್ಳೀ** ಹಾಲು, **ಕತ್ತೆಮರಿ’** ....ಅಂತ! ...........
(ಗೇಟಿನ ಕಡೆಗೆ ಕಿವಿಗೊಟ್ಟು) ಯಾರದು, ಬಂದ್ದಾಗಿದೆ?

[ನರಸಿಂಹಯ್ಯನೂ ಪಾರ್ವತಮ್ಮನೂ Verandah ಮೆಟ್ಲನ್ನು ಸೇರುವರು.]
ಹೋಗಿ ನಿಮ್ಮ ತಂದೇನ ಕರಿಯೆ. (ಪಾತುವು ನಿಷ್ಕ್ರಮಿಸುವಳು)

(ಪಾರ್ವತಮ್ಮನಿಗೆ) ಬನ್ನಿ ಒಳಗೆ.

[ಪಾರ್ವತಮ್ಮನು ಮೆಟ್ಲನ್ನು ಹತ್ತಿ ಲಕ್ಷ್ಮೀದೇವಮ್ಮನೊಡನೆ ಮನೆಯೊಳಗೆ ಪ್ರವೇಶಿಸುವಳು. ನರಸಿಂಹಯ್ಯನು ಗೋಡೆಗೆ ತಗುಲಿಸಿರುವ ಚಿತ್ರಪಟಗಳನ್ನು ಒಂದೊಂದಾಗಿ ನೋಡುತ್ತಿರುವನು.]

**ರಾಮಣ್ಣ** : (ಪ್ರವೇಶಿಸಿ) My dear boy ಬಂದೆಯಾ, goodಉ ! ಕೂತ್ಕೊ.

**ನರ**: ಕೂತ್ಕೋತೇನೆ, ಆದ್ರೆ ಯಾರದ್ದೀ ಫೋಟೋ ?

**ರಾಮು** : Most eccentric man in India ಆತ ! ಮೊಳದುದ್ದ ಜುಟ್ಟು ದಾಡಿ ಇಟ್ಕೊಂಡು ಬೋಳಪುರದಲ್ಲಿ ಸ್ಕೂಲು ಇಟ್ಟಿದಾನೆ. **ಬೋಳ ಪುರ .... ಜೋಕು** (ಎನ್ನುತ್ತಾ ಬೆಟ್ಟಿನಿಂದ ನರಸಿಂಹಯ್ಯನ ಪಕ್ಕೆಯನ್ನು ಚುಚ್ಚುವನು)...... ಬಾ, Sit down. ನಿನ್ನ expect ಮಾಡ್ದೆ ನಾನು. Clubನಲ್ಲಿ, ಕೃಷ್ಣರಾಯ ನಿನ್ನ daughter ವಿಷಯ ನಿನ್ಗೆ broach ಮಾಡಿದಾಗ್ಲೇ ಇವತ್ತೋ ನಾಳೇನೊ honour of your visit ದಯ ಪಾಲಿಸ್ತೀಯಾ ಅಂತ expect ಮಾಡ್‌ತಿದ್ದೆ ... come into the office ! ......have a cup of coffee !

**ನರ**: (ಎದ್ದು ರಾಮಣ್ಣನನ್ನು ಹಿಂಬಾಲಿಸುತ್ತಾ ) ಬೆಳಿಗ್ಗೇನೇ ಆಯಿತು ನನಿಗೆ. ....

**ರಾಮು** : ಆದ್ರೇನು .... ಆಗ್ಲಿ ಇನ್ನೊಂದು doseಉ ! (ಘಟ್ಟಿಯಾಗಿ) **ನಾರಾಯಣಾ** !

(ಆಫೀಸ್ ರೂಮಿನ ದ್ವಾರದಿಂದ ನರಸಿಂಹಯ್ಯನು ಆತನ ಹಿಂದೆ ನಿಷ್ಕ್ರಮಣ.)

**ಲಕ್ಷ್ಮೀ**: (ಬೇರೊಂದು ಬಾಗಿಲಿಂದ ಪಾರ್ವತಮ್ಮನೊಂದಿಗೆ ಪ್ರವೇಶಿಸಿ) ಬನ್ನಿ ಯಾರೂ ಇಲ್ಲ. ಆಫೀಸ್ ರೂಂನಲ್ಲಿಧಾರೆ. ಕೂತುಕೊಳ್ಳಿ ........

(ಪಾರ್ವತಮ್ಮನು ಸುತ್ತಲೂ ನೋಡುವುದನ್ನು ಗಮನಿಸಿ) ಏನು, ಮಗಳು ಮುಂದೆ ಬಾಳೋ ಮನೆ ಹ್ಯಾಗಿದೇಂತ ನೋಡತೀರಾ? .... ನಿನ್ನೇ ಹೇಳಿದ್ರಿವ್ರು, ಒಂದ್ವೇಳೆ ನೀವಿಬ್ರೂ ಬಂದೀರಿ ಅಂತ. ಜೋಯಿಸ್ರೂ ಹೇಳಿದ್ರು, ನಿಮ್ಮ ಹುಡುಗಿ ಜಾತಕ ದಿವ್ಯವಾಗಿಧೆ, ನಮ್ಮ ಕಿಟ್ಟಿ ಜಾತಕಕ್ಕೆ ಸರಿಯಾಗಿ .... ಅರುಂಧತಿ ವಸಿಷ್ಠರ ಜಾತಕಗಳ ಹಾಗೆ ಹೊಂದುತ್ತೆ ಅಂದ್ರು. ನಾವೇನೋ ಬಹಳ ಆಶೆಯಿಂದ ಎದುರು ನೋಡ್ತಿಧೇವೆ. ನಿಮ್ಮಗಳ ಅಭಿಪ್ರಾಯವೇನೋ ....? .... ಆದ್ರೆ ಹಿರಿಯರು ಹೇಳೋ ಹಾಗೆ ಶುಭಸ್ಯ ಶೀಘ್ರಂ ಅಂತಾ ಎಷ್ಟಕ್ಕೆಷ್ಟು ಬೇಗನೆ ತೀರ್ಮಾನ ಮಾಡಿ ಕಾರ್ಯಾನ ನೆರವೇರಿಸ್ತೇವೋ ಅಷ್ಟಕ್ಕಷ್ಟು ಬೇಗನೆ ಹಿರಿಯರ ಯೋಚ್ನೆ ತಪ್ಪುತ್ತೆ. ನಮ್ಗುತ್ತೆ .... ಅದೇ ಕಿಟ್ಟಿ ಅಜ್ಜಿ, ಅವನು ಗೃಹಸ್ಥಾಶ್ರಮ ಅವಲಂಬಿಸಿದ್ರೇನೇ ಅವನಿಗಿಟ್ಟಿರೋ ಆಸ್ತಿ ಅವನ ಕೈಗಿಡತೇನೇಂತ ಕೂತಿಧಾಳೆ .......... ವಯಸ್ಸಾದ ಮುಯ್ಯಿ....ಮೊದಲೆ ! ನಿಮ್ಮ ಅಭಿಪ್ರಾಯ ಏನೊ....?

**ಪಾರ್ವ :** ನಮ್ಮ ಯಜಮಾನ್ರು ಅಭಿಪ್ರಾಯ ಹ್ಯಾಗೋ ಹಾಗೆ ....

**ಲಕ್ಷ್ಮೀ :** ಹಾಗಾದ್ರೆ ಅವರ ಅಭಿಪ್ರಾಯತಾನೆ ಏನು ?

**ಪಾರ್ವ :** ಏನೇನೂ? ... ಸಮ್ಬಂಧದಲ್ಲಿ ಇಷ್ಟವೆ, ಆದ್ರೆ ನಮಗೂ ಕಾಲೇಜಿನಲ್ಲಿ ಓದ್ತಾ ಇರೋ ಮಗನ ಮುಂದಿನ್ಯೋಚ್ನೆಯ ಜವಾಬ್ದಾರೀ ಬಿದ್ದಿರೋದ್ರಿಂದಾ ನಮ್ಮ ವೆಂಕೂ ವಿಷಯದಲ್ಲಿ ... ಮದ್ವೇ ಖರ್ಚು ನಿಧಾನಿಸಿ ನಿರ್ಧರಿಸಬೇಕಾಗಿದೆ.

**ಲಕ್ಷ್ಮೀ :** ಒಳ್ಳೆ ಮದುವೆ ಖರ್ಚು ಅಂದ್ರೆ. ನಾಲ್ಕು ಬ್ರಾಹ್ಮಣ್ರನ ಕರದು ಹೋಮಾನೋ ಅದೆಂಥಾದ್ದೋ ಮಾಡಿಸಿ, ಬ್ರಾಹ್ಮಣರಿಗೆ ಅನ್ನ ಹಾಕಿ ತಾಳೀಕಟ್ಟೋ ಬಾಬತ್ತಿಗೆ ಖರ್ಚೇನು ಯೋಚನೆ ಯೇನು?

**ಪಾರ್ವ:** ಅದೊಂದೇ ಖರ್ಚಲ್ಲಾ. ಆದ್ರೆ ಈ ಕಾಲದಲ್ಲಿ ........ ಈ ವರದಕ್ಷಿಣೇಂತಾ ಏರ್ಪಾಟಾಗಿಥೆಯಲ್ಲ ಅದು ಈ ವಿಷಯದಲ್ಲಿ ಎಷ್ಟಾಗುತ್ತೋ ಏನೋ ಅಂತ ನಮ್ಮ ಯಜಮಾನ್ರಿಗೆ ಯೋಚ್ನೆ.

**ಲಕ್ಷ್ಮೀ:** (ಗಂಭೀರವಾಗಿ) **ದಯವಿಟ್ಟು ಆ ವರದಕ್ಷಿಣೆ ಮಾತು ಈ ಮನೇಲಿ ಎತ್ತಬೇಡಿ!**

**ಪಾರ್ವ:** ಕೋಪಿಸಬಾರದು. ಎಂಥೆಂಥಾ ಅಂತಸ್ತು ಐಶ್ವರ್ಯ ಇರೋ ಕುಟುಂಬಗಳಲ್ಲೂ ಈ ವರದಕ್ಷಿಣೆ ಅಂಬೋದು ಸಂಪ್ರದಾಯವಾಗಿ ಹೋಗಿರೋದರಿಂದಲೇ .... ಮುಂದಕ್ಕೆ ನಮ್ಮ ನಮ್ಮಲ್ಲಿ ಮನಸ್ತಾಪ ಬರಬಾರದೂ ಅಂತಾ ನಾನ್ಹೇಳಿದ್ದು. ಕೋಪಿಸಿಕೋಬಾರದು.

**ಲಕ್ಷ್ಮೀ:** ಕೋಪವೇನೂ ಇಲ್ಲ. ಆದರೆ ನೀವು ಹೇಳಿದಹಾಗೆ ಎಂಥೆಂಥಾ ಅಂತಸ್ತು ಐಶ್ವರ್ಯ ಇರೋ ಕುಟುಂಬಗಳಲ್ಲಿ ಈ ಸಂಪ್ರದಾಯ ಇದ್ರೂವೆ ಅಂಥ ಅಂಥಾ ಅಂತಸ್ತು ಅಖಂಡೈಶ್ವರ್ಯ ನಮಗೆ ಇಲ್ಲದಿದ್ರೂನೂವೆ **ಮಗನ್ನ ದುಡ್ಡಿಗೆ ಮಾರಿಕೊಂಡು ಸೊಸೇನ ಮನೇಗೆ ತಂದುಕೊಳ್ಳೋ ತುಚ್ಛಸ್ಥಿತೀಗೆ ನಮ್ಮ ಕುಟುಂಬ ಇನ್ನೂ ಇಳೀಲಿಲ್ಲ. ಇದನ್ನ ನೀವು ದಯವಿಟ್ಟು ಮರೀಬಾರದು.** (ಪಾರ್ವತಮ್ಮನ ಮುಖವು ತಿಳಿಯಾಗುವುದು)........ ಏನೋ ಹಕ್ಕಿಗಳ ಹಾಗೆ ಹುಟ್ಟಿದವು ನಮ್ಮ ಮಕ್ಳು. ಹಕ್ಕಿಗಳ ಹಾಗೆ ಬೆಳೆದವು ಅವು ಗಳಿಗೆ ರೆಕ್ಕೆಗಳು ಬಂದು ತಾವು ತಾವೇ ಹಾರೋಕೆ ಶಕ್ತಿ ಬರುತ್ಲೂ ನೂವೆ ಒಂದು ಕುಟುಂಬಾ ಅಂತಾ ಅವುಗಳಿಗೆ ಕುದುರಿಸಿಕೊಟ್ಟು ಅವುಗ್ಳು ಮಾಡೋ ಸಂಸಾರಾನ ಅಲ್ಪಸ್ವಲ್ಪದಿನ ನೋಡಿ ಸಂತೋಷ ಪಟ್ಬಿಟ್ಟು ಶಾಂತಮನಸ್ಕರಾಗಿ ಕಣ್ಮುಚ್ಚೋದಲ್ವೆ....ನಮ್ಮಗಳ ಕರ್ತವ್ಯ .... ? (ಪಾರ್ವತಮ್ಮನು ಮಾತಿನಲ್ಲಿ ಮೈಮರೆತಿರುವಳು)

**ಲಕ್ಷ್ಮೀ:** ಹಾಗೆ ನೀವು ಒಪ್ಪೋಪಕ್ಷಕ್ಕೆ .... ಹಕ್ಕಿಗಳೂ ಅಂದೆ .... ಆ ಹಕ್ಕಿಗಳಿಗೂ ವಾಸ ಮಾಡೋಕೆ ಒಂದು ಗೂಡು ಬೇಡವೆ? .... ನಿಮ್ಮ ಮಗಳು, ಮುಂದಕ್ಕೆ ಅವಳ ಗಂಡ, ನಿಮ್ಮೊಮ್ಮಕ್ಳು, ಯಾವ

ಅಡಚಣೆಯೂ ಇಲ್ದೆ ಸಂತೋಷ ಸೌಕರ್ಯದಿಂದ ವಾಸಮಾಡೋಕೆ, ಭೋಗ್ಯಕ್ಕೆ ಬಿಟ್ಟಿರೋ ಈ ಮನೇನ ನಿಮ್ಮಗಳಿಗೆ ಬಿಡಿಸಿಕೊಡೋ ವಿಷಯದಲ್ಲಿ ನೀವೂ ನಿಮ್ಮ ಯಜಮಾನ್ರೂ ಉತ್ಸಾಹಿಸೋ ಪಕ್ಷಕ್ಕೆ, **ಬೇಡಾ** ಅಂತ ಹೇಳೋ ಹಕ್ಕು **ನನಗಾಗ್ಲಿ** ನಮ್ಮ **ಯಜಮಾನ್ರಿಗಾಗ್ಲಿ ಇಲ್ವೇ ಇಲ್ಲ** ಅಂತ ನಾನೊಪ್ಪಿಕೊಳ್ಳೀಬೇಕು.

**ಪಾರ್ವ:** (ಚಮುಕಿತಳಾಗಿ) ಭೋಗ್ಯಕ್ಕೆ ಬಿಟ್ಟಿದೆಯೆ!... ಹೊಸಮನೆ!!

**ಲಕ್ಷ್ಮೀ:** ಹೊಸಮನೆ ಅಂದ್ರೇನು! ಹೊಸಲು ದಾಟೋವರೇಗೂ ಹೊಸಮನೆ...... ಅರ್ಥವಾಯಿತು ನಿಮಗಾಗೋ ಆಶ್ಚರ್ಯ........ ಸರ್ಕಾರಿ ಸಂಬಳ, ಅಲ್ಲದೆ ಸಂಪಾದ್ನೆ, ಆಸ್ತಿ ಬಡ್ಡಿ, ಇಷ್ಟಿಟ್ಕೊಂಡು ಲೋಕದೆದುರಿಗೆ ದೊಡ್ಡ ಕುಟುಂಬಾ ಅಂತ ಅನ್ನಿಸಿಕೊಳ್ತಿರೋರಿಗೆ, ಹೊಸದಾಗಿ ಕಟ್ಟಿದ ಬಂಗ್ಲೆಗೆ ಭೋಗ್ಯದ ತಕ್ರಾರು ಎಲ್ಲೀದೂ ಅಂತ ನಿಮಗೆ ತೋಚೋದು ಸಹಜವೆ!!!! ಆದರೆ ದೊಡ್ಡ ಕುಟುಂಬಗಳನ್ನು ನೋಡಿ ಬೆರಗಾಗೋ ಬಡ ಜನಗಳಿಗೆ ದೊಡ್ಡ ಮನುಷ್ಯರಿಗೆ ಇರೋ .... ಕೊರತೆಗಳು ಗೊತ್ತಾಗೋದಿಲ್ಲ. ಎಷ್ಟು ಕಷ್ಟಬಂದ್ರೂ ನೂವೆ **ಹೇಗಾದ್ರೂ ಹಲ್ಲು ಕಚ್ಚಿಕೊಂಡು ಅಡಗಿಸ್ಕೊಂಡು, ಅಂತಸ್ತನ್ನ ಕಾಪಾಡಿಕೋಬೇಕಾಗುತ್ತೆ**........ಆದ್ರೆ ನಮಗೆಷ್ಟು ನಷ್ಟವಾಗಿದ್ರೂನೂವೆ ಎಷ್ಟು ಖರ್ಚಾಗಿದ್ರೂನೂವೆ ವ್ಯರ್ಥವಲ್ಲ. ಅದರಿಂದ ಮುಂದಕ್ಕೆ ಬರೋ ಫಲಾ ನಮ್ಮ ಕಿಟ್ಟು ಮೂಲಕ ನೀವೇ ಅನುಭವಿಸ್ತೀರಾ........ಹೇಳ್ತೀನ್ಕೇಳಿ! ನಮ್ಮ ಕಿಟ್ಟೂ ಹುಟ್ಟೋವಾಗ್ಲೇ ಬಲು ನಾಜೋಕು........ಅದೆಂಥಾದ್ದೊ........ಹಗುರ........ ಅಲ್ಲಾ ನಯ delicate ಅಂತಾರಲ್ಲ ಇಂಗ್ಲೀಷಿನಲ್ಲಿ, ಅದು. ಮೂರ್ ಡಾಕ್ಟರುಗಳು ನಾಲ್ಕು ನರ್ಸುಗಳು........ಬೆಳೀತಾ ಬೆಳೀತಾನೂ ನಾಜೋಕೆ. "ಮಂಗಳಾರತಿ ತಕ್ಕೊಂಡ್ರೆ ಉಷ್ಣಾ ತೀರ್ಥ ಪ್ರೋಕ್ಷಿಸಿದರೆ ಶೀತ" ಅಂತಾ ಹಾಸ್ಯಕ್ಕೆ ಹೇಳೋದುಂಟು. ಆದ್ರೂ ನೂವೆ ನನ್ನ ಅನುಭವದಲ್ಲಿ ನಮ್ಮ ಕಿಟ್ಟಿಗೆ ಒಪ್ಪುತ್ತೆ ಆ ಸಾಮತಿ.... ....ಅವನ ಜಾತಕರಣ ಅವನ ನಾಮಕರಣ ಅವನ ಚೌಲ, ಅವನ

ಉಪನಯನ, ಇವೆಲ್ಲಾನೂ ನಮ್ಮ ಅಂತಸ್ತು ಪ್ರಕಾರ ಜರಗ್ಸಿದ್ದಕ್ಕೆ ಆದ ಖರ್ಚು ಅಷ್ಟಿಷ್ಟಲ್ಲ. ಇನ್ನ್ ವಿದ್ಯಾಭ್ಯಾಸ ಪ್ರಾರಂಭ. ಬುದ್ಧಿ ಹುಟ್ಟ್ಯೋವಾಗ್ಲಿಂದ್ಲೇ ಚುರುಕು. ಕನಡ ಎಲ್ಲಾ ತೀರಿಸ್ಕೊಂಡು, ಇಂಗ್ಲೀಷು, ಅಂದ. ಅಲ್ಲಿ firstಉ, secondಉ ಅಂತ standard ಗಳು ಐದೋ ಹತ್ತೋ. ಅವಾಗುತ್ಲೂ ಫಾರ್ಮುಗಳು, firstಉ secondಉ, ಹೀಗೆ ಇವುಗಳಿಗೆಲ್ಲಾ ಪುಸ್ತಕದ ಖರ್ಚು, ಮೇಷ್ಟರುಗಳ ಫೀಜು—ಸ್ಕೂಲ್ ಫೀಜು....ನಿಮ್ಮ ಮಗನೂ ಓದುತಾನೆ ಅಂದ್ರೆಲ್ಲ. ನಾನು ಹೇಳಬೇಕಾದ್ದಿಲ್ಲ. ಅಲ್ಲದೆ, ಆಗಾಗ ಒಂದೊಂದು ಕ್ಲಾಸಿನಲ್ಲಿ ಮೇಷ್ಟ್ರುಮೇಲೆ ಇಷ್ಟವೋ, ಇಲ್ಲಾ ಓದಿದ ಪುಸ್ತಕಗಳಮೇಲೆ ಇಷ್ಟವೋ....ಎರಡೆರಡು ಮೂರು ಮೂರು ಸರತಿ ಓದಿದಾ. ಕೊನೇಗೆ ಆರನೆ ಫಾರ್ಮು....matriculation ಅನ್ಕ್ತಾರಲ್ಲ ಅಲ್ಲಿಗೆ ಬಂದ. ಅಷ್ಟು ಹೊತ್ತಿಗೆ, ಡಾಕ್ಟರು ಕೈಯೆತ್ತಿದರು; "ಇದು ಸಾಧಾರಣ (Brain) ಬ್ರೇನಲ್ಲ,....ಮಿದಳು ಅಂತಾರಲ್ಲ ಬುದ್ಧಿ, ಅದು ಜಾಸ್ತಿ ಈ ಮಗೂಗೆ, ಆಪ್ರೆ ದೇಹ ಸಾಜೋಕೂ. ಆದ್ದರಿಂದ ಒಂದೆರಡು ವರ್ಷ ವಿಶ್ರಾಂತಿ ತಗೋಬೇಕು", ಅಂತ ಅವರು ಹೇಳಿದ ಪ್ರಕಾರ ಒಂದೆರಡು ವರ್ಷನಿಲ್ಲಿಸಿದ ಹೊತ್ತಿಗೇನೆ **ಮೆಟ್ರಿಕ್ಯುಲೇಷನ್** ಬರೋದರಲ್ಲಿ ಇಷ್ಟು ವಯಸ್ಸಾಗಿ ಹೋಯಿತು. ಇನ್ನಿವನ್ಯಾವಾಗ ಬಿ.ಎ. ಪ್ಯಾಸ್ ಮಾಡೋದು ಅಂತ ಕೇಳಿದ ಪ್ರಶ್ನೇಗೆ, "ಬಿ.ಎ. ಯಾಕೆ ಇವನಿಗೆ? ಏನು, ಕೆಲಸಕ್ಕೆ ಸೇರಬೇಕೆ? ಮಕ್ಕಳಿಲ್ಲದ, ನಮ್ಮ ಸೋದರಮಾವನ ಕಾಫಿ ತೋಟಾ, ಅಜ್ಜಿ ಬಿಟ್ಟ್ ಹೋಗೋಸ್ವತ್ತು, ಇನ್ನು ನಾವು ಬಿಟ್ಟು ಹೋಗೋ ಅಲ್ಪ ಸ್ವಲ್ಪ ಆಸ್ತಿ, ಎಲ್ಲ ಇಟ್ಕೊಂಡು ಅನುಭವಿಸೋದು ಬಿ.ಎ ಇಲ್ದಿದ್ರಾಗೋದಿಲ್ವೆ" ಅಂತಾರೆ ಅವನ ತಂದೆ. ಇಷ್ಟದಲ್ಲೆ ಅಲ್ಪ ಸ್ವಲ್ಪ ಒಡವೆಗ್ಳು; ........ ಹಯ್ಯೋ ಜ್ಞಾಪಕಕ್ಕೆ ಬಂತು, .... ಒಡವೆಗಳೆಲ್ಲ ಹಳೇಕಟ್ಟಡ, ಒಂದೆರಡಾದ್ರೂ ಹೊಸ ನಮೂನೆಯಾಗಿ ಮದುವೆ ಹೆಣ್ಣಿಗೆ ಸರಿಯಾಗಿ ಚಿಕ್ಕದು ಮಾಡಬೇಕೂ ಅಂತಾ ನಮ್ಮ ಅತ್ತೇವ್ರು ಹೇಳಿದ್ದು ಈಗ ಜ್ಞಾಪಕಕ್ಕೆ ಬರುತ್ತೆ....

(ಘಟ್ಟಿಯಾಗಿ) **ಯಾಕೂಬ್** !

**ಯಾಕೂಬ್:** (ಬಂದು) ಅಮ್ಮಾ!

**ಲಕ್ಷ್ಮೀ:** ಆ ಒಡವೆ ಬೀರೂ ಎತ್ತಿಕೊಂಬಾರೊ ಹುಷಾರಾಗಿ!

(ಯಾಕೂಬನ ನಿಷ್ಕ್ರಮಣ)

ರತ್ನಗಳ ಪರೀಕ್ಷೆ ನಿಮಗೆ ಗೊತ್ತೆ .... ಹಳೇಕಾಲದ ಕಲ್ಲುಗಳು. ವಜ್ರಗಳೇನೂ ಸೀಮೆ ಕಮಲಗಳಲ್ಲ ........ (Cutting) ಕಟ್ಟಿಂಗ್ ಹಳೇದು. ಆದ್ರೆ .... ಕೆಂಪುಗಳು ರಕ್ತ ವರ್ಣ. ಪಚ್ಚೆ ಕಲ್ಲಿಗೆ, ಎಮರಾಳ್ಡು ಅಂತಾರಲ್ಲ ............ ಅವಕ್ಕೆ ಹೆಸರುವಾಸಿ ನಮ್ಮ ಯಜಮಾನರ ಕುಟುಂಬ!

[ಯಾಕೂಬ್ ಪೆಟ್ಟಿಗೆಯನ್ನು ಲಕ್ಷ್ಮೀದೇವಮ್ಮನ ಪಕ್ಕದಲ್ಲಿ ತಂದಿಟ್ಟು ಹೋಗುವನು. ಮುಚ್ಚಳವನ್ನು ತೆಗೆದು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಸರಗಳು, ಪದಕಗಳು, ಒಂಕಿ, ಬಾಜಿಬಂದು, ನಾಗರಮುರವು, ಜಿಮಿಕಿ, ಜಡೆಬಂಗಾರ, ಜೋಮಾಲೆ, ಮುಖರ, ಪಾಟ್ಲಿ, ಬೇಸರಿ, ಚಂದ್ರ ಮುರುವು ಇತ್ಯಾದಿಗಳನ್ನು ಪಾರ್ವತಮ್ಮನ ಮುಂದೆ ವಿಂಗಡಿಸಿಡುತ್ತಾ, ಆಕೆಯು ಇವುಗಳನ್ನೆಲ್ಲ ನೋಡಿ ಬೆಚ್ಚಿಬಿದ್ದು ಬೆರಗಾಗುವುದನ್ನು ಸೂಕ್ಷ್ಮವಾಗಿ ಗಮನಿಸಿ, ತನಗೆ ಬರುವ ನಸುನಗುವನ್ನು ಅಡಗಿಸಿಕೊಂಡು]

ನಾನ್ಹೇಳಿದ್ದಾಗೆಲ್ಲ ಹಳೇಕಾಲದ ಒಡವೆಗಳೂ, ಆದ್ರೆ ಈ ಕೆಂಪಿನ ಸರ, ಈ ವಜ್ರದ ಪದಕ, ಈ ಜೋಮಾಲೆ, ಈ ಪಚ್ಚೆ ಕೆತ್ತಿದ ಡಾಬು, ಸಧ್ಯ ಉಪಯೋಗವಾಗುತ್ತೆ ಮದುವೇಗೆ. ಆಮೇಲೆ ಮಿಕ್ಕದ್ದೆಲ್ಲ ಸಮಯೋಚಿತವಾಗಿ ಚಿಕ್ಕದುಮಾಡಿಕೋಬಹುದು. ಇದೆಲ್ಲ ನಮ್ಮ ಅತ್ತೇವ್ರು 'ನಮ್ಮ ಪಾತು ಕೂಡ ಮುಟ್ಟಬಾರದು, ಎಲ್ಲ ಕಿಟ್ಟೆ ಹೆಂಡ್ತೀಗೇ'ಂತ ಇಟ್ಟಿದ್ಧಾರೆ. ಅದೊಂದು ದೊಡ್ಡ ಕೋಪಾ ನಮ್ಮ ಪಾತೂಗೆ. ಆದ್ರೆ ಹೆಂಗ್ಸು ಪಾಪ ಅವ್ರು, ಚಿಕ್ಕ ವಯಸ್ಸು, ಆಶೆ! "ಕುಟುಂಬದ ಒಡವೆಗಳು ಮನೇಗೆ ಬಂದು ಸಂಸಾರ ಮಾಡೋ ಸೊಸೆಗಳಿಗೇ ಹೊರ್ತು ಮನೆ ಬಿಟ್ಟು ಮಾವನ ಮನೆಗೆ ಓಡೋ ಮಗಳಿಗಲ್ಲ" ಅಂತಾ ಅವಳ ಅಜ್ಜಿ ಹಟ. ಈ ಪಾಟ್ಲಿ ನೋಡಿ!

( ಪಚ್ಚೆ ಕಲ್ಲುಗಳು ಕೆತ್ತಿದ ಪಾಟಲಿಯೊಂದನ್ನು ಪಾರ್ವತಮ್ಮನ ಕೈಗಿಟ್ಟು )
ನಮ್ಮ ಹುಡುಗನ್ನ ನೋಡಿಧೀರಲ್ವೇ? ನಿಮ್ಮ ಮನಸ್ಸಿಗೆ ಒಪ್ಪಿತೇ?

**ಪಾರ್ವ :** (ಆ ಪಾಟಲಿಯ ಪ್ರಭೆಯಲ್ಲಿ ಮುಗ್ಧಳಾಗಿ) ಚೆನ್ನಾಗಿಧಾನೆ ........ ಹೌದೂ! ಈ ಭೋಗ್ಯ ಅಂದ್ರಲ್ಲ ಎಷ್ಟು ರೂಪಾಯಿಗ್ಗೂ?

**ಲಕ್ಷ್ಮೀ :** ಪೂರ್ತಿಯಾಗಿ ಭೋಗ್ಯವಲ್ಲ. ಮನೆ ಹನ್ನೆರಡು ಸಾವಿರ ರೂಪಾಯಿ ಬಾಳುತ್ತೆ. ಕನಿಷ್ಟಪಕ್ಷ ನಾವು ಮಾಡಿರೋದು ೨,೭೦೦ ಊನು ಚಿಲ್ಲರೆ, ಲೆಖ್ಖ ಗಂಡಸ್ರಿಗೆ ಗೊತ್ತು ........ ಹಯ್ಯೋ ಹೀಗೇ ಕೂತಿದ್ರೆ, ಮನೆಯಲ್ಲಿ ಅತಿಥಿಗಳು ಬಂದಾಗ .... ಊಟದ ಏರ್ಪಾಡು ಮಾಡಿಬಿಟ್ಟು ಬರ್ತೀನೆ. (ಎದ್ದು ನಿಲ್ಲುವಳು)

**ಪಾರ್ವ :** ಊಟದ ತೊಂದ್ರೆ ಬೇಡೀ ಅಂದ್ರೆ. ಮನೇಲಿ ಎಸರಿಗಿಟ್ಟು ಬಂದಿದೇನೆ ನಾನು ....

**ಲಕ್ಷ್ಮೀ :** ಹಾಗಾದ್ರೆ ಅಡಿಗೇ ಅವನಿಗೆ ಹೇಳಿಬಿಟ್ಟು ಬರ್ತೀನೆ.

(ನಿಷ್ಕ್ರಮಣ)

**ಪಾರ್ವ :** ಅಬ್ಬಬ್ಬ! ಏನು ಘಾಟಿ ಅಂತೇನೆ ಈಕೆ! ........ ವರದಕ್ಷಿಣೆ ಮಾತು ಈ ಮನೇಲೆತ್ತೋದು ತಪ್ಪು ಅಂದ್‌ಬಿಟ್ರೂ ಕೊನೇಗೂನೂ ಮುಟ್ಟಿಸಿಬಿಟ್ಟಳಲ್ಲ, ಎರಡು ಸಾವಿರದೇಳ್ನೂರಿಗೆ! ಈಗ ನಾವು ಲೆಕ್ಕ ಹಾಕೋದು ಮದುವೆ ಖರ್ಚಿಗೊಂದು ಸಾವಿರ, ವರದಕ್ಷಿಣೆ ಬಾಬತ್ತೊಂದೆರಡು ಸಾವಿರ, ಜ್ಯೇಷ್ಟಪಕ್ಷ, ಒಟ್ಟು ಮೂಸಾರ್ವಿರಾ ಅಂತ .... ಈ ಲೆಖ್ಖಾನ್ನೋಡಿದ್ರೆ.... ಇನ್ನೊಂದೇಳ್ನೂರ್ ರೂಪಾಯಿ ಎಲ್ಲಿಂದ ತರೋದು? .... ಬಲು ದುಬಾರಿ, .... ಆಗೋಹಾಗಿಲ್ಲ .... ಆದರೆ ಈ ಒಡವೆಗಳು !!

(ನಿಟ್ಟುಸಿರು ಬಿಡುತ್ತಾ ವಜ್ರದ ಸರವೊಂದನ್ನೆತ್ತಿ ಅಲಗಿಸುತ್ತಾ)

................ನಮ್ಮ ವೆಂಕೂ ಕುತ್ತಿಗೆಗೂ ಇದಕ್ಕೂ ...............
( ಸರವನ್ನಿಟ್ಟು ಕೆಂಪು ಕಲ್ಲಿನಲ್ಲಿ ಕಟ್ಟಿದ ಒಂದು ಬಾಜಿಬಂದನ್ನು ತೆಗೆದು )
........ ನಮ್ಮ ವೆಂಕೂ ಬಣ್ಣಕ್ಕೂ ಈ ಕೆಂಪುಗಳ ಜ್ವಾಲೇಗೂ........

(ಒಡವೆಯನ್ನು ಕೆಳಗಿಟ್ಟು).... ಏಳ್ನೂರು ರೂಪಾಯಿತಾನೆ .... ಇವರ ಇನ್‌ಷ್ಯೂರೆನ್ಸಿನಮೇಲೆ ಒಂದು ಸಾವಿರ ರೂಪಾಯಿ ಹೊರಡದೆ ಏನು ........ ಈ ಒಡವೆಗ್ಳು, ಈ ಮನೆ, ಅಜ್ಜೀ ಅಸ್ತಿ, ಅಲ್ದೆ ಕಾಫಿ ತೋಟಾಂತೆ .... ಇಲ್ಲ, ಬಿಡಬಾರದು ಈ ಅವಕಾಶ, ಆಕೆ ಹೇಳಿದ ಹಾಗೆ 'ಶುಭಸ್ಯ ಶೀಘ್ರಂ' ಎಂಬೋದ್ನ ಇವರ ಮನಸ್ಸಿಗೆ ಮನದಟ್ಮಾಡಿ ಒಪ್ಪಿಸಿ, ಮುಂದಿನ ಕಾರ್ಯ ಬೇಗ ಪ್ರಾರಂಭಿಸಿ ಬಿಡಬೇಕು .... ಅಕೋ ಬಂದ್ಲು !

(ಒಡವೆಗಳನ್ನೆಲ್ಲ ಪೆಟ್ಟಿಗೆಯಲ್ಲಿ ತಿರುಗಿ ಇಡುವಳು. ಬಂದ ಲಕ್ಷ್ಮೀದೇವಮ್ಮನಿಗೆ)

ಒಳಗಿಟ್‌ಬಿಟ್ಟಿಧೇನೆ, ಭಾರಿ ಒಡವೆಗಳು ........... ಒಂದು ಸರತಿ ನೋಡಿಕೊಂಡ್‌ಬಿಡಿ.

**ಲಕ್ಷ್ಮೀ::** (ನಗುತ್ತಾ) ಇನ್ನೊಂದ್ ತಿಂಗಳಲ್ಲಿ ನಿಮ್ಮದೇ ಆಗುವ ಒಡವೆಗಳನ್ನ ನಾನೇನು ನೋಡಿಕೊಳ್ಳೋದು. ಬನ್ನಿ, ಮನೇ ನೋಡಿ. ಭಾವೀಗೆ ಪಂಪು; ನೀರು ಸೇದೋ ಕಷ್ಟಾನೂ ಇಲ್ಲ.

(ಎಂದು ತೋಟದಲ್ಲಿರುವ ಭಾವಿಯನ್ನು ತೋರಿಸಲು ಆಕೆಯ ಕೈಯನ್ನು ಹಿಡಿದು ಕೊಂಡು ಒಳಕ್ಕೆ ಕರೆದುಕೊಂಡು ಹೋಗುವಳು.)

[ಆಫೀಸಿನ ಬಾಗಿಲಿನಿಂದ ಪ್ರವೇಶ, ರಾಮಣ್ಣ ಮತ್ತು ನರಸಿಂಹಯ್ಯ]

**ರಾಮಣ್ಣ :** (ಕೈಯನ್ನು ನರಸಿಂಹಯ್ಯನ ಮೇಲೆ ಹಾಕಿ ಕರೆದುಕೊಂಡು ಬರುತ್ತಾ) ಕ್ಷಮಿಸು dear boy. ನಾನು use ಮಾಡಿದ strong languageಉ ಎಷ್ಟೋ control ಮಾಡೋಕೆ ನೋಡಿದೆ; ಆದ್ರೆ ನಾನು educatedಉ, man of culture, broad mindedಉ ಅಂಬೋದ್ನೆಲ್ಲಾ ಮರ್ತುಬಿಟ್ಟು ನನ್ನೇನೋ ಹಳ್ಳಿಕಡೆಯಲ್ಲಿ ಹುಟ್ಟಿದ commercial minded ಗಮಾರ ಅಂತ ತಿಳ್‌ಕೊಂಡು...........holy alliance of marriage arrange ಮಾಡೋ sacred occasion ನಲ್ಲಿ dowry ಎಷ್ಟು ಅಂತ ಕೇಳಿದೆಯಲ್ಲಾ? ನನ್ನ ರಕ್ತಮಾಂಸ ತಡೆದೀತೆ?! ನನ್ನ bloodಉ boiling pointಗೆ ಬರದೆ ಇದ್ದೀತೆ ? ! ........... ಕೂತ್ಕೊಂಡು cool ಆಗಿ consider ಮಾಡಿ ನೋಡು.

ನರ: I am sorry. ಆದ್ರೆ ಎಂಥ most educated familiesಉ ಈ dowry ಬಾಬತ್ತಿನಿಂದ immune ಆಗಿ ಇಲ್ದೆ ಇರೋಹೊತ್ತಿಗೇನೆ ಮುಂದಕ್ಕೆ misunderstandings ಏನೂ ಬರಬಾರದೂ ಅಂತಾ plain ಆಗಿ ನಾನ್ ಕೇಳಿಬಿಟ್ಟೆದ್ದು. Forgive ಮಾಡೋದು ನಿಮ್ಮ ಭಾರ. ನನ್ನ honest bluntnessಏ ನನ್ನ excuseಉ.

ರಾಮಣ್ಣ: (ನರಸಿಂಹಯ್ಯನ ಬೆನ್ನನ್ನು ತಟ್ಟುತ್ತಾ)
I understand dear boy, I understand. ನೀನ್ ಹೇಳೋ ಹಾಗೆ 'Matrimony' ಈಗಿನ ಕಾಲದಲ್ಲಿ 'matter o' money' ಆಗ್ಹೋಗಿದೆ....'Matrimony—matter of money—Joke ಉ!

(ನಗುತ್ತಾ ನರಸಿಂಹಯ್ಯನ ಪಕ್ಕೆಯನ್ನು ಬೆಟ್ಟಿನಿಂದ ಚುಚ್ಚುವನು)

ಇಲ್ಲಿ ನೋಡು dear boy, God has given you health - wealth - prosperity, and your beautiful daughterಉ. God has also given me everything in the shape of a sonನ್ನು...your daughter is after all your daughterಉ and my son is my sonnoo. But though your daughter is your daughterಉ and my son is my sonnoo, their children will be (ನರಸಿಂಹಯ್ಯನ ಕುತ್ತಿಗೆಯನ್ನು ಬಲಬಾಹುವಿನಿಂದ ತಬ್ಬಿ ಅಪ್ಪಿಕೊಳ್ಳುತ್ತಾ) OUR grandchildrenಉ dear boy. They will send us pindas (ಪಿಂಡ) my boy, when we are both in heaven! ಅರ್ಥವೇ? Heavenನಲ್ಲಿ—as our ancients and elders assure us according to our Vedas and shastras ಪಿತೃಗಳು,.. .. ಪೌತ್ರರು ವರ್ಷ ತಪ್ಪದೆ ಪಿಂಡಗಳನ್ನ ಮೇಲ್‌ಲೋಕಕ್ಕೆ ಮುಟ್ಟಿಸ್ತಿರೋವರಿಗೂ ವಾಸಮಾಡಬಹುದೂ....ಆ annual instalments of pindas ತುಂಡಾಯಿತೋ, precipitate ಆಗ್ತೇವಂತೆ ನರಕಕ್ಕೆ. Therefore dear boy, ನಾವು ಸ್ವರ್ಗದಲ್ಲಿರೋದಕ್ಕೆ ಇಲ್ಲಿ ನಮ್ಮ ಪೌತ್ರರು ಕಳ್‌ಸಬೇಕಾದ ಪಿಂಡಕ್ಕೆ proper arrangementsಉ ಮಾಡಿಬಿಟ್ಟು ಹೋಗೋದೆ sensible ಅಲ್ವೆ?

(ನರಸಿಂಹಯ್ಯನು ವಿಸ್ಮಿತನಾಗಿ ರಾಮಣ್ಣನನ್ನು ನೋಡುವನು.)

Therefore dear boy! our grandchildrenಉ prosperous circumstanceನಲ್ಲಿ ಇರೋಕೆ obstacles ಆಗಿರೋ ಕೆಲವು difficultiesನ ನೀನು consider ಮಾಡಬೇಕು. You are my friendಉ, I am your friend in needಉ. ಇನ್ನ್ deed ಎಲ್ಲ ನಿನ್ನದೆ....you must unlock all prosperity for us because you are my ಬೀಗ.... **ಬೀಗ—lock ಉ—Joke ಉ!**

(ಎಂದು ನರಸಿಂಹಯ್ಯನ ಪಕ್ಕೆಯನ್ನು ಪುನಃ ಬೆಟ್ಟಿನಿಂದ ಚುಚ್ಚುವನು.)

**ನರ:** (ಸವರಿಕೊಳ್ಳುತ್ತಾ ವಿಸ್ಮಿತನಾಗಿ) ಅದೇನು difficultiesಓ?!

**ರಾಮಣ್ಣ:** Difficultiesಗಳಿಗೆಲ್ಲ root cause ಏನೂ?........filthy lucreಉ. You see dear boy! family difficulties, commitments, through circumstances over which no body could have any control;....ನಿನಗೆ ಗೊತ್ತಿಲ್ವೆ, Lawyerಉ ನೀನು family fundsಉ, cousinly black guardsu, partition ತಕ್ರಾರುಗಳು,............ಏತನ್ಮಧ್ಯೆ ನನ್ನ official positionನ್ನು, all precipitating in my present difficulties,—which you must dissolve by liquidating my aforesaid commitments; **Precipitate—dissolve,—liquid—Joke ಉ**

(ನಗುತ್ತಾ ನರಸಿಂಹಯ್ಯನ ಪಕ್ಕೆಯನ್ನು ಬೆಟ್ಟಿನಿಂದ ಚುಚ್ಚುವನು.)

**ನರ:** (ಪುನಃ ಸವರಿಕೊಳ್ಳುತ್ತಾ grimly)ಎಷ್ಟು amountಉ?

**ರಾಮು:** ಛೀಛೀಛೀ!!! Forgive me dear boy, ಇಷ್ಟು serious ಆಗಿ ತಕೋ ಕೂಡದು ಈ simple matterನ ........ ಸಧ್ಯ worth speaking ಆದ ಬಾಧೆ ಏನೂ ಇಲ್ಲ ನನಗೆ. ಆದರೆ future ನೋಡಿ ಹೇಳ್ತೀನೆ....money market tightಉ. World wide financial depressionನ್ನು....ಎಲ್ಲೆಲ್ಲಿ ನೋಡಿದರೂ unemploymentಉ ....

seasons ಎಲ್ಲ ತಲೆ ಕೆಳಕಾಗಿ ಬರ್‌ತಿವೆ. ಇನ್ನೀಗ್ಲೆ ಹೀಗಿಧೆಯಲ್ಲ portending disasterಉ, ................ಇನ್ನು ನಮ್ಮ................

(ಬಾಹುವಿನಿಂದ ನರಸಿಂಹಯ್ಯನ ಕಂಠವನ್ನು ಬಿಗಿಯುತ್ತಾ)

unborn sweet little grand childrenನು born ಆಗಿ ಬೆಳಿಯೋ ಹೊತ್ತಿಗೆ financial outlookಉ imagineಮಾಡಿದರೆ shudder ಆಗುತ್ತೆ ನನ್ನ being ಎಲ್ಲ. ಅದಕ್ಕೇ ನಾನು ಕೇಳೋದು ನೀನು ಸ್ವಲ್ಪ interest ತಕೋಬೇಕು ಈ ವಿಷಯದಲ್ಲಿ ಅಂತ; I am asking on principle; capital idea ಅಲ್ಲವೆ ? ................
**Interest —principle — Capital— JOKEಉ !**

(ಎಂದು ಬೆಟ್ಟಿನಿಂದ ಪುನಃ ನರಸಿಂಹಯ್ಯನ ಪಕ್ಕೆಯನ್ನು ಚುಚ್ಚಿ ನಗುವನು)

**ನರ:** (ರೇಗಿ) ಹಾಗಾದರೆ ಎಷ್ಟು ನಿಮ್ಮ liabilitiesಉ ?
**Lie — abilities — JOKEಉ !**

(ಇದುವರೆಗೂ ರಾಮಣ್ಣನು ಚುಚ್ಚಿ ಆದ ನೋವೆಲ್ಲವನ್ನೂ ಜ್ಞಾಪಿಸಿಕೊಳ್ಳುತ್ತಾ ದೇಹದಲ್ಲಿರುವ ಶಕ್ತಿಯೆಲ್ಲಕ್ಕೂ ತನ್ನ ಬೆಟ್ಟನ್ನು ಕೇಂದ್ರಸ್ಥಾನವನ್ನಾಗಿ ಮಾಡಿ ರಾಮಣ್ಣನ ಪಕ್ಕೆಯಮೇಲೆ ಪ್ರಯೋಗಿಸುವನು.)

**ರಾಮಣ್ಣ :** (ಪಕ್ಕೆಯನ್ನು ಸವರಿಕೊಳ್ಳುತ್ತಾ) ಕ್ಷಮಿಸು dear boy! ನಿನಗೆ ಇಷ್ಟು sharp sense of humour ಇರೋದು ನನಗೆ ಗೊತ್ತಿರಲಿಲ್ಲ. But joking apart (ದೂರ ಸರಿದು ಕೂತು) ನೀನ್‌ಕೇಳಿದ amountಉ only a meagre sum of ಮೂರು ಸಾವಿರದ ಮುನ್ನೂರು. ನಾನು assets ಹೇಳಬೇಕಾದದ್ದಿಲ್ಲ. ಈ house ಉ plus expectations from many quarters — ನಮ್ಮ family ಬಲು widely distributedಉ — plus ನಮ್ಮ ಕಿಟ್ಟಿ prospectsಉ slow but **sureಉ !**

**ನರ:** ಈ 3,300 ಒಂದೇ sumಮ್ಮೋ? ಇಲ್ಲ, ಇದೂನೂ ನಿಮ್ಮ family ಹಾಗೇನೆ widely distributedಡೋ ?

**ರಾಮಣ್ಣ :** **You will have your joke ಉ dear boy** ........ ಆ ತೊಂದರೆ ಏನ್ ಇರೋದಿಲ್ಲ ನಿನಗೆ. ನನ್ನ creditors ಎಲ್ಲಾ unfortunately for me and fortunately for you, — are all local ಉ .... ನಮ್ಮೂರಿನವ್ರೇ. I mean ನಿಮ್ಮೂರಿನವ್ರು. ........ ಬಂದೆ, ಒಂದುನಿಮಿಷ ........ list of the various amounts ತಂದುಬಿಡ್ತೇನೆ (ಆಫೀಸ್ ರೂಮಿನೊಳಕ್ಕೆ ನಿಷ್ಕ್ರಮಣ)

[ಪಾರ್ವತಮ್ಮನು ಪ್ರವೇಶಿಸಿ ಬಾಗಿಲಿನ ಹೊಸಲಿನಿಂದೀಚೆಗೆ ಕಾಲಿಡುತ್ತಿರುವಲ್ಲಿ ಆಕೆಯ ಹಿಂದೆ ಲಕ್ಷ್ಮೀದೇವಮ್ಮನು "ಕೂತುಕೊಳ್ಳಿ ಎಲೆ ಅಡಿಕೆ ಕುಂಕುಮ ತರ್ತೇನೆ" ಎಂದು ಹೇಳುವುದು ಕೇಳಿ ಬರುವುದು.]

**ಪಾರ್ವ :** (ಪತಿಯು ಏಕಾಂಗಿಯಾಗಿ ಇರುವುದನ್ನು ಗಮನಿಸಿ ಸಮೀಪಿಸಿ) ಏನೋ ........ ನಾವೇನೊ ಹೆದರಿಕೊಂಡದ್ದಕ್ಕೆ ........... ಹೆಚ್ಚು ಕಡಿಮೆ ನಾವು ಹಾಕಿದ ಲೆಖ್ಖದ ಪ್ರಕಾರಾನೆ ಲಗ್ನ ತೀರೋ ಹಾಗಿದೆ. ಸದ್ಯ ಇಷ್ಟು ದಿನ ಮುಚ್ಚಿಕೊಂಡಿದ್ದ ಪೆಂಕೂ ಮದುವೆ ಯೋಚನೆ ತಪ್ಪಿತು.

**ನರ :** ಏನೇ ! ಎಲ್ಲಿಧೀಯೆ ........ನಾವು ಹಾಕಿದ ಲೆಖ್ಖವೆಲ್ಲೀ, ಇವರು ಸುಲಕೊಳ್ಳೋಕೆ ಹೊರಟಿರೋ ಲೆಖ್ಖವೆಲ್ಲೀ ....? !

**ಪಾರ್ವ :** (ಅಡ್ಡಮಾತಾಗಿ) ಹಯ್ಯೋ ಬಿಡೀ ಅಂದ್ರೆ ! ........ ನೀವ್ ಯಾವಾಗಲೂ ಹೀಗೇ. ಲಕ್ಷ ಲಕ್ಷಾಂತರ ಲಾಭವಾಗೋ ಕಡೆ ಒಂದು ನೂರು ಇನ್ನೂರು ರೂಪಾಯಿಗೆ ಗುದ್ದಾಡೋದೆ ?

**ನರ :** ನೂರಿನ್ನೂರು ? .... ಅವನು ಕೇಳೋದು (ರಾಮಣ್ಣನು ಬಚ್ಚಿಟ್ಟ ಸ್ಥಳವನ್ನು ಸವರಿಕೊಳ್ಳುತ್ತಾ) meagre sum of 3,300, ನಾವು ಹಾಕಿದ ಲೆಖ್ಖಕ್ ಮೇಲೆ 300 ಆಗೋದಲ್ದೆ ಮದುವೆ ಖರ್ಚಿಗೆಲ್ಲಿಂದ ತರೋದೆ?

**ಪಾರ್ವ :** ಚನ್ನಾಯಿತು, 2,700 ಅಂದ್ರೆ !

**ನರ :** 3,300 ಅಂತ ಬೊಗುಳಿ ಸಾಲಗಾರರ ಪಟ್ಟಿ ತರೋಕೆ ಹೋಗಿದಾನೇ .... ? !

**ಪಾರ್ವ :** ಸಾಲ ಅಲ್ಲಾಂದ್ರೆ, ಭೋಗ್ಯಕ್ಕೆ ಈ ಮನೇ ಬಿಟ್ಟಿರೋದು, 2,700 ರೂಪಾಯಿಗೆ; ಬಡ್ಡಿ ಸಮೇತ, ಈಕೆ ಹೇಳಿದಾಳೆ ಈಗತಾನೆ.

**ನರ :** ಎಲ ಎಲಾ, ಪಾಪಿದಂಪತಿಗಳಿರಾ ! ! !

**ಪಾರ್ವ :** ದಂಪತಿಗಳು !

**ನರ :** ಅಯ್ಯೋ ಚಿಪ್ಪೆ ! ನಿನಗಿನ್ನೂ ಅರ್ಥವಾಗಲಿಲ್ಲವೆ ? ........... **double ಡಕಾಯಿತಿ ಕಾಣೆ ! !** ಭೋಗ್ಯದ ಬಾಬತ್ತು ನಿನ್ನ ಮಂಡೇಗ್ ಹಾಕಿ, ನಾಲಗಾರರ ಪಟ್ಟಿ ನನ್ನ ಕಿಸೇಲಿ ಸೆಕ್ಕಿಸಿ, ಮಂಗಳಾರತಿಮಾಡಿ ಕಳ್ಸೋದು ಕಾಣೇ, ಅವರಿಬ್ಬರ ಪಿತೂರೀ. ಜುಂಲಾ ಎಷ್ಟಾಯಿತು ನೋಡು .... 6000 ... ನಮ್ಮಿಂದ ಆಗೋ ಕೆಲಸವಲ್ಲಇದೂ ! ಗುಮಾಸ್ತೆ ರಂಗಣ್ಣೋರ ಮನೇಗೆ ಹೋಗಿ ಅವರ ಮಗನ ವಿಷಯ ....

**ಪಾರ್ವ :** ಹಯ್ಯೋ ಆ ಹುಡುಗನ ಬಣ್ಣ ನಿದಾನ ಅಂದ್ರೆ !

**ನರ : ಬಣ್ಣ** ! ! ಈಗ ನಮ್ಮ ಕುಟುಂಬಾಏನೇ ಕೆಂಪು ಕೆಂಪಾಗಿ ತೇಲ್ತಿರೋದು ? ಆ ಹುಡುಗ ಬಿ,ಎ., ಪ್ಯಾಸ್ ಮಾಡಿದಾನೆ. ಈ ಮನೆ ಕೆಂಪು ಮುಖದ ಕಪೀಗೆ 19 ವಯಸ್ಸೂ ಆಗಿ Matriculation ನ್ನ ಮೋಚಿಕೊಂಡು ಹೋಗಿದೆ !

**ಪಾರ್ವ :** ಅದಕ್ಕೇನು ಮಾಡೋದು ? ದೊಡ್ಡ ಕುಟುಂಬಾ. ದೊಡ್ಡರ್ರಕ್ತಾ, ನಾಜೋಕು .... ಬಿ.ಎ., ಆಗ್ಲಿ ಎಂ.ಎ., ಆಗ್ಲಿ ಪ್ಯಾಸ್ ಮಾಡೋದು ದುಡ್ಡಿಗೆ ತಾನೇ ? .... .... ಲಕ್ಷಾಂತರ ರೂಪಾಯಿ ಸ್ವತ್ತು ಇರೋ ಇವರಿಗೆ, ಕೆಲಸಕ್ಕೆ ಯಾಕೆ ಸೇರಬೇಕೂ ಅಂದ್ರೆ ?

**ನಾಣಿ :** ಲಕ್ಷಾಂತರ ಯಾರಿಗಿಧಿಯೆ ?

**ಪಾರ್ವ :** ಯಾಕೆ ಇವರಿಗಿಧೆ ಅಂಧ್ರೆ .... ಆಕೆ ಹೇಳಿದ್ಲು .... .... ಅಜ್ಜಿ ಆಸ್ತಿ, ಕಾಫಿ ಎಸ್ಟೇಟು ಮತ್ತೆ ಒಡವೆಗಳು .... ? !

**ನರ** : ಸುಮ್ಮನೆ **ತೊದಲಬೇಡ**. ಇವರ ಅಜ್ಜಿ ಆಸ್ತಿ ಒಂದು ಜಪಮಾಲೆ. ಇವರಿಗಿರೋ ಕಾಫಿ ಎಸ್ಟೇಟಿಲ್ಲ ಅಡಿಗೆ ಮನೆಯಲ್ಲಿ ಡಬ್ಬೀಲಿ ಹಾಕಿಟ್ಟಿದ್ಧಾರೆ. ಇನ್‌ಬೇಡದ್ದಕ್ಕೆ ಒಡವೆಗಳು! ಆಕೆ ಏನೋ ಹೇಳಿದಳಂತೆ, ನೀನೇನೋ **ಕೇಳಿದೆಯಂತೆ** !

**ಪಾರ್ವ** : ನಾನೇನು ಕುರುಡೆ ; ಅಕ್ಕೊ ನೋಡಿ ! .... .... .... .... (ಒಡವೆ ಪೆಟ್ಟಿಗೆಯನ್ನು ತೋರಿಸಿ) ಆ ಪೆಟ್ಟಿಗೆ ತುಂಬಾ, ಲಕ್ಷ ಲಕ್ಷ ಬಾಳೋ ವಜ್ರಗಳು ಕೆಂಪುಗಳು ....

**ನರ** : ಆವಾದಮುಸ್ತಕ ಸಾಲ ತುಂಬಿದ ಇವರಿಗೆ ವಜ್ರ ಅಂದ್ರೇನೆ ವೈಢೂರ್ಯ ಅಂದ್ರೇನೆ .... ?

**ಪಾರ್ವ** : ಹಯ್ಯೋ ನಾನ್ನೋಡಿದೆ! ಕಣ್ಣಾರ ನೋಡಿದೆ ಅಂದ್ರೆ.... ! ?

**ನರ**: ಯಾವ ಗಾಜೋ, .... ಕನಡೀನೋ ನಿನಗೆ ತೋರ್ಸಿ .... .. . ಪುಸಲಾಯಿಸಿದಾರ ನಿನಗೇನು ಗೊತ್ತೇ ವಡವೆಗಳ ಪರೀಕ್ಷೇ.... ?

**ಪಾರ್ವ**: ಹಯ್ಯೋ! ನಿಮ್ಮ ಹಾಳುಕುಟುಂಬದಲ್ಲಿ ಒಂದು ಒಡವೆ ನೋಡ್‌ದಿದ್ರೂನೂವೆ....ನಾನು ಭಾರಿ ಒಡವೆಗಳು ನೋಡ್‌ಲಿಲ್ಲ, ತೊಟ್‌ಕೊಳ್ಳಿಲ್ಲ....ಅಂತ ತಿಳಕೋಬೇಡಿ.

**ನರ**: **ಒಪ್ಪೆ**, ಒಪ್ಪೆ, ಒಪ್ಪೆ! ವಜ್ರ ಪರೀಕ್ಷೇಲಿ ನೀನು ಫಸ್ಟು! ದಮ್ಮಯ್ಯ, ಒಪ್ಪೆ! ನಿನ್ನ ತೌರ್ಮನೆಮಾತಿಗೆ ದಯವಿಟ್ಟು ತುಂಡು ಹಾಕು....ಪರಸ್ಥಳ ಇದು..ಬಂದಕಡೆ ನನ್ನ ರೇಗಿಸಿ ಮಾನಮರ್ಯಾದೆ ಫಾಳಿ ಪಾಲು ಮಾಡಬೇಡ.... ! ಅಕೋ ಆಕೆ ಬರ್ತಿದ್ಧಾಳೆ !

[ರಾಮಣ್ಣನು ಅಫೀಸ್‌ಬಾಗಿಲಿನಿಂದಲೂ, ಲಕ್ಷ್ಮೀ ದೇವಮ್ಮನು, ಬೆಳ್ಳಿಯ ತಟ್ಟೆಯಲ್ಲಿ ಎಲೆ ಅಡಿಕೆಯನ್ನು ಹಿಡಿದುಕೊಂಡು ಮತ್ತೊಂದು ಬಾಗಿಲಿನಿಂದಲೂ ಪ್ರವೇಶಿಸುವರು.]

**ರಾಮು :** ............Here you are dear boy ... listಉ

(ಒಂದು ಲಕೋಟೆಯನ್ನು ನರಸಿಂಹಯ್ಯನ ಜೇಬಿನಲ್ಲಿ ಇಳೀಬಿಟ್ಟು)

ಮನೆ ಸೇರಿ............ at your leisure, peruse ಮಾಡು ;............ [ ಇಷ್ಟರಲ್ಲಿ ಲಕ್ಷ್ಮೀದೇವಮ್ಮನು ಬಂದಾಕೆಗೆ ಕುಂಕುಮವನ್ನಿಟ್ಟು ತಾಂಬೂಲವನ್ನು ಕೊಟ್ಟಾಗಿರುವದು] with your permision dear boy ! (ಸ್ವಲ್ಪ ಮುಂದಕ್ಕೆ ಬಂದು ಮುಖವನ್ನು ಸೂರಿಗೆತ್ತಿ ಉಚ್ಚ ಧ್ವನಿಯಿಂದ) ಏನೋ ನಮ್ಮ ಕಿಟ್ಟೀಗೆ ಎಷ್ಟೆಷ್ಟು ಕಡೆಯಿಂದಲೋ ವಧುಗಳ ಮಾತು ಬಂದುವು. ಆದರೆ ಇಂಥ ಅಮೋಘವಾದ ಸ್ಥಳದಿಂದ ನಮಗೆ ಸಂಬಂಧ ಒದಗೋ ಲಭ್ಯ ನನಗೂ ನನ್ನ ಗೃಹಿಣೀಗೂ ಸಂಭವಿಸುತ್ತೆ ಅಂತಾ ಈ ಪಾಪಿ, ನಮ್ಮ ಸ್ವಪ್ನದಲ್ಲೂ ಎದುರು ನೋಡ್ತಿರಲಿಲ್ಲ. ಇದೆಲ್ಲ ಪರಮಾತ್ಮನ ಕೃಪೆ. ನಮ್ಮಗಳ ಶಕ್ತಿ ಅಂತಸ್ತುಗಳ್ನ ಎಷ್ಟು ಹೊಗಳಿಕೊಂಡರೂ, ಮುಖ್ಯ ... ದೈವಸಂಕಲ್ಪ ಪ್ರಕಾರವೆ ಪ್ರಕೃತಿ ಕಾರ್ಯಗಳೆಲ್ಲ ಆಗತ್ತೆ, ಅಂಬೋದನ್ನ ಈ ಮೂಢ ಹೇಳಬೇಕಾದ್ದೇನೂ ಇಲ್ಲ. ಮುಖ್ಯ...ನಮ್ಮ ಸಂಬಂಧದಿಂದ ಸರ್ವ ಜನರಿಗೂ ಶಾಂತಿ ಸುಖಗಳು ಉತ್ಪನ್ನವಾಗಬೇಕೂಂತ ನಾನೂ ನನ್ನ ಸಹಧರ್ಮಿಣಿಯೂ ಹಾರೈಸ್ತೇವೆ (ನರಸಿಂಹಯ್ಯನಿಗೆ) Thank you, dear boy !

**ನರ :** (ರಾಮಣ್ಣನಿಗೆ) ನಾನು ಬರ್ತೇನೆ.

**ಲಕ್ಷ್ಮೀ :** (ಪಾರ್ವತಮ್ಮನಿಗೆ) ಬರ್ತೀರಾ !

(ಪಾರ್ವತಮ್ಮನು ತಲೆಯನ್ನು ಆಡಿಸುವಳು)

[ನರಸಿಂಹಯ್ಯ ಪಾರ್ವತಮ್ಮ ಇವರು ವೆರಾಂಡಾ ಮೆಟ್ಟಿಲಿಳಿದು ನಿಷ್ಕ್ರಮಣ]

**ರಾಮು :** (ಮೆಟ್ಟಿಲಿಳಿದು ಬಂದು ದಂಪತಿಗಳು ಹೋದ ದಾರಿಯನ್ನು ಇಣಿಕಿನೋಡಿ ಮತ್ತೆ ತಿರುಗಿ ಮೆಟ್ಟಲನ್ನು ಹತ್ತಿ) ಏನೇ, ಭೋಗ್ಯದ ಮಾತು .... ?

**ಲಕ್ಷ್ಮೀ :** ಹೇಳ್ದೆ ! ........ ಸಾಲದ ಬಾಬ್ತು .... ?

**ರಾಮು :** complete list ಕೊಟ್ಟಿಧೇನೆ ........ ನಿನಗೆ ಹ್ಯಾಗೆ ಕಾಣುತ್ತೆ, ಒಪ್ಯಾರೆ ?

**ಲಕ್ಷ್ಮೀ:** ನೀವೇ ನೋಡಿ. ಒಬ್ಬ ಹುಡುಗನ್ನ ಬಿ.ಎ. ಓದಿಸ್ತಿದಾರೆ ........ಏನೋ ಅಲ್ಪ ಸ್ವಲ್ಪ ಸ್ವತ್ತು ಸ್ವಯಾರ್ಜಿತ........ಆಕೇನೆ ವರ ದಕ್ಷಿಣೆ ಮಾತು ಎತ್ತಿದ್ರಿಂದ........ ಅದಕ್ಕೆ ಇಷ್ಟು ಅಂತಾ ಲೆಕ್ಕ ಹಾಕಿಟ್ಟಿರೋ ಹಾಗೆ ತೋಚಿತು ನನಗೆ. ಎಷ್ಟಾದ್ರೂನೂವೆ ಒಂದು ಮೂರು-ನಾಲ್ಕು ಸಾವಿರ ರೂಪಾಯಿ ಅಂದಾಜು ಹಾಕಿದ್ದಿರಬಹುದು.

**ರಾಮು:** 3-4000 ಅಂದ್ರೆ! ....... ನಮ್ಮೆರಡು itemಉ 6000ಕ್ಕೆ ಬರುತ್ತಲ್ವೇ?! ಇನ್ನು ಮದುವೆ ಖರ್ಚು?! ಎಲ್ಲ, ವಿಷಹತ್ತಿದ ಹಾಗೆ ಏಳೋ ಎಂಟೋ ಆಗತ್ತೇ ಅಂತ ಬೆದರಿಕೊಂಡು ಅವನು give up ಮಾಡಿಬಿಟ್ರೂ ಮಾಡಿಬಿಡಬಹುದು. ಬೇಡದ್ದಕ್ಕೆ ಈ ಮಂಕುಮುಚ್ಚಿದ ಮಂಗನಿಗೆ ಎರಡನೇ once moreಉ ........... matriculationನಲ್ಲಿ ........ ಇನ್ನು ಸಾಲಗಾರರ ತಗಾದೇನ ನನ್ನ official ಜಬರ್‌ದಸ್ತಿನಲ್ಲಿ ಎಷ್ಟು ದಿನಾ ಅಂತಾ postpone ಮಾಡೋದೇ? ಬೇಕಾದರೆ ನರಸಿಂಹಯ್ಯನನ್ನೇ ನಾನು ನೋಡಿ, ಸ್ವಲ್ಪ ಹೆಚ್ಚುಕಮ್ಮಿ ಆದ್ರೂನೂವೆ........

**ಲಕ್ಷ್ಮೀ:** ಬೇಡಿ ಅಂದ್ರೆ. ಎಲ್ಲ ಸರಿಹೋಗುತ್ತೆ.

**ರಾಮು:** "ಸರಿಹೋಗುತ್ತೆ"? ಯಾವ ಅಸ್ತಿಭಾರದಮೇಲೇ ............ ಮಾತಾಡತೀಯಾ?

**ಲಕ್ಷ್ಮೀ:** "ರುಚಿ ಕಂಡ ಬೆಕ್ಕು" ಅಂಬೋ ಲೆಖ್ಖಾಚಾರದ ಪ್ರಕಾರ

**ರಾಮು:** ಅರ್ಥವಾಗಲಿಲ್ಲ... .... ?!

**ಲಕ್ಷ್ಮೀ:** ಇತ್ಯರ್ಥಮಾಡತೇನೆ. ಅಕೋ ನೋಡಿ! ನೆನ್ನೆ ಪೋಲೀಸಿನವರು ತಂದಿಟ್ಟಿರಲ್ಲಾ ಒಡವೆಪೆಟ್ಟಿಗೆ, ಅದನ್ನ ಬಿಚ್ಚಿ, ಅದರಲ್ಲಿದ್ದ ಒಡವೆಗಳನ್ನೆಲ್ಲ ಆಕೆಗೆ, ಮನೆ ಆಸ್ತಿ ಅಂತಾ...... ಸೊಸೇಗೇ ........!

**ರಾಮು :** (ಅತ್ಯಾನಂದದಿಂದ ಉಕ್ಕುತ್ತಾ) **Good work ಉ** ಕಾಣೆ Good workಉ ! ನೀನ್ ಹೇಳಿದಹಾಗೆ ಆ jewelsಉ ನೋಡಿದ ಮೇಲೆ ಹ್ಯಾಗಾದರೂ ಮಾಡಿ ಮದುವೇನ bring off ಮಾಡೇಬಿಡ್ತಾಳೆ ಆಕೆ. ದೇವರು ನಮ್ಮ ಭಾಗದಲ್ಲಿರೋ ಹೊತ್ತಿಗೆ, ತಾಲ್ಲೂಕ್ treasury ಮುಚ್ಚಿದಮೇಲೆ ಬಂದವು ಆ ಒಡವೆಗಳು

**ಲಕ್ಷ್ಮೀ :** ಯಾವ ಒಡವೆಗಳೂ ?...... treasuryಗೆ ಯಾಕೇ ?

**ರಾಮು :** ಜ್ಞಾಪಕವಿಲ್ವೇನೆ, ತಾವರೆಕೆರೇಲಿ ಸಾವಕಾರ ವೆಂಕಟಪ್ಪನ ಮನೇಲಿ ಆದ ಕಳವು ಎಂಟು ತಿಂಗಳ ಹಿಂದೇ ? ಪೋಲೀಸಿನವರು ಪತ್ತೇಮಾಡಿ, ಕಳ್ಳರನ್ನೂ propertyನ್ನೂ ನೆನ್ನೆ 5 ಘಂಟೆಗೆ ತಂದ್ರೂ ; ಕೈದಿಗಳಂತೂ Lock up ಆಯಿತೂ, ಖಜಾನೆ ಮುಚ್ಚಿತ್ತೂ, ಕಾಪಾಡೋ ಜವಾಬ್ದಾರಿ ನನ್ನದಲ್ಲವೇನೆ ? ರಾತ್ರಿಯೆಲ್ಲಾ ನನಗೂ ಯೋಚನೆಯಾಗಿತ್ತು ........ ಏನೊ ದೇವರ ದಯದಿಂದ ನಿನ್ನ ಬೀಗ್‌ತೀಗೆ ಬೆಪ್ಪುಹಿಡಿಸಿ ವರದಕ್ಷಿಣೆ ಒಪ್ಸಿಸಿ ನಮ್ಮ ಅನಾನುಕೂಲ ತೀರ್ಸೋ ಉಪಯೋಗಕ್ಕೆ ಈ ಒಡವೆಗಳು ಬಂದದ್ದು ನಮ್ಮ ಅದೃಷ್ಟ. ಆದರೂ whole creditಉ ನಿನ್ನ ingenious brainಗೆ ಕೊಡಬೇಕು. (ಘಟ್ಟಿಯಾಗಿ) ಯಾಕೂಬ್ !

**ಯಾಕೂಬ್ :** (ಬಂದು) ಸಾಮಿ

**ರಾಮು :** ಎಲ್ಲಿ ಹೋಗಿದ್ಯೋ ಬೆಳಿಗ್ಗೆ ಎಲ್ಲಾ .... ?

**ಯಾಕೂಬ್ :** ದೇವಲ್ ಪೂಜಾಕರನೇಕಾ ... ಬೊಮ್ಮನ್..... .. ಬಿರಾಮರು ... ಮನಿಗೆ ಹೋಗಿ ಇದ್ದೆ.

**ರಾಮು :** ಯಾರು ಜೋಯಿಸರೆ ? ಜೋಯಿಸರ ಮನೇಲಿ ನಿನಗೇನೋ ಕೆಲಸ ? . ....ತಲೆ ಬೋಳಿಸಿಕೊಳ್ಳೋಕೆ ದಿನಾ ನೋಡೋಕೇ ?

**ಯಾಕೂಬ್ :** ನನಗೆ ಇಲ್ಲ ಹುಝೂರ್, ಬಡಾ ಅಮ್ಮಾವರಿಗೆ........ ಕಾರ್ಯೋಂಕಾ ಕಿತಾಬ್ .... (ಆಕಾಶವನ್ನು ತೋರಿಸಿ) ಆಸ್ಮಾನ್........

ಬುಕ್ಕು .... ತಕ್ಕಂಡೀಬರಾಕೆ. ಬಡಾ ಅಮ್ಮಾ ಅವ್ರು ಕಳ್ಸಿದ್ರು ಹುರ್ಝೂರ್ !

**ರಾಮು :** ಏನು ಪಂಚಾಂಗವೆ? ಅಲ್ಕಾಣೋ ಪಂಚಾಂಗಾನ ನೀನು ಮುಟ್ಟಿಕೊಂಡು ಊರುದ್ದಕ್ಕೂ ತೋರಿಸ್ಕೊಂಡು ಬರ್ತಿದ್ದೆಯೇನೊ?

**ಯಾಕೊಬ್ :** ನಹಿ ಹುರ್ಝೂರ್! ಮೌಸ್ ಕೆ ಎಲೆ ಬಾಳೆ ಫತ್ತರ್ ದಲ್ಲಿ ಲಪಟ್ ಕಂಡೀ ತಕ್ಕಂಡೀ ಬಂದೆ .. ..

**ರಾಮು :** ಇಲ್ಲೀರ್ ! ಆ ಪೆಟ್ಟಿಗೆ ತುಂಬ ಒಡವೆ ಹುಷಾರಾಗಿ ಎತ್ತಿಕೊಂಡುಹೋಗಿ ನಮ್ಮ ಕೋರ್ಟಿನಲ್ಲಿ Inspectorಗೆ ಒಪ್ಪಿಸಿ ರಸೀದಿ ತಗೊಂಬಾ, ತಲ್ ಪಿಸಿದ್ದಕ್ಕೆ .... .. ಹುಷಾರು! ಆಜ್ ಬಾಬ್ ಎಲ್ಲ ಸರಕಾರದು .

**ಯಾಕೊಬ್ :** ಜೀ !

[ಪೆಟ್ಟಿಗೆಯನ್ನು ಎತ್ತಿ ತಲೆಯಮೇಲಿಟ್ಟುಕೊಂಡು ಮೆಟ್ಟಿಲಿಳಿದು ನಿಷ್ಕ್ರಮಣ]

**ರಾಮು :** ಸ್ನಾನಕ್ಕೆ ನೀರು ತಯಾರಿ ತಾನೆ? ಕೋರ್ಟಿಗೆ ........ ... ಹೊತ್ತಾಯಿತು ........!

**ಲಕ್ಷ್ಮೀ :** ಹೂಂ.

[ರಾಮಣ್ಣನು ಆಫೀಸ್ ಬಾಗಿಲಿನಿಂದಲೂ ಲಕ್ಷ್ಮೀದೇವಮ್ಮನು ತಾನು ಬಂದ ಬಾಗಿಲಿನಿಂದಲೂ ನಿಷ್ಕ್ರಮಣ]

[“ **ಬೋರಾ** ”! “ **ಬೋರಾ** ” ! ಎಂದು ಚೀತ್ಕರಿಸುತ್ತಾ ಟೋಪಿ ಕೋಟು ಕಾಲರ್ ಷರಾಯಿ ಕಾಲ್ ಚೀಲಗಳಿಂದ ಅಲಂಕೃತನಾದ ಕಿಟ್ಟು ವು ಒಳ ಬಾಗಿಲಿನಿಂದ ಪ್ರವೇಶಿಸುವನು.]

**ಕಿಟ್ಟು : ಬೋರಾ ! ಎಲ್ಲಿದೀಯೋ ಬೇಕೂಫಾ ?**

**ಪಾತು :** (ಪ್ರವೇಶಿಸಿ) ಇದೇನಿದು ಹೊಸ ಫ್ಯಾಷನ್ನು, (fashion) ಬೂಟ್ಸ್ ಇಲ್ಲದೆ ಬರೀ ಸ್ಸಾಕ್ಸ್ (Socks)......?

**ಕಿಟ್ಟು :** ನಿನ್ನ್ಯಾರೆ ಕೇಳಿದ್ದೂ ? Mind your own business I say ! ನೀನೆಲ್ಲಿಂದ ಧುಮುಕಿದೆಯೆ ? ............ ಗಲಾಟೆಯಿಲ್ಲದೆ peaceful ಆಗಿದ್ದ ಮನೇಗೆ ಯಾವ ಸುಂಟರಗಾಳಿ ಹೊತ್ತುಕೊಂಡು ಬಂದು ಹಾಕ್ತೇ ನಿನ್ನಾ ? (ಪ್ರವೇಶಿಸಿದ ಲಕ್ಷ್ಮೀದೇವಮ್ಮನನ್ನು ನೋಡಿ)............ ನೋಡಮ್ಮಾ ಇವಳನ್ನ ! insult ಮಾಡತಾಳೆ ನನ್ನ !

**ಪಾತು :** ನಿನ್ನ ಮೂತೀಗಿಂತಾ ದೊಡ್ಡ insultಉ ಬೇರೆ ಯಾರೂ ಮಾಡೋಹಾಗಿಲ್ಲ !

**ಕಿಟ್ಟು :** (ಕುಪಿತನಾಗಿ) ನನ್ನ ಮೂತೀಗೇನೆ ಕಮ್ಮೀ ? What is less for my face I say ?

**ಪಾತು :** What is lessಸೇ ?........ ನಿನ್ನ ಒಂದು ಮುಖವಾಡ lessಸು ! ಒಂದು Mask ಗಾನಾ ಹಾಕ್ಕೊಂಡುಬಿಟ್ಟೆ ಅಂದ್ರೆ ಮನ್ಮಥನ equal ಆಗಿ ಹೋಗ್ತಿ........! ಮನ್ಮಥ ಅಂದ್ರೆ ಜ್ಞಾಪಕಕ್ಕೆ ಬರುತ್ತೆ ನಮ್ಮ ನಾಗತ್ತೆ ನಿನ್ನ beautyಗೆ certificate ಕೊಟ್ಟಿದಾಳೆ ........ಮಾರನಿಗೆ ಸುಟ್ಟಮೋರೆ ನಿನಗೆ ಸೊಟ್ಟಮೋರೆ ಅಂತಾ !........

**ಕಿಟ್ಟು:** ನೋಡಮ್ಮಾ ........ !

**ಲಕ್ಷ್ಮೀ :** (ಮೇಜಿನಮೇಲಿನ ಬೆಳ್ಳಿ ತಟ್ಟೆಯನ್ನು ತೆಗೆದುಕೊಂಡು ಪಾತುವನ್ನು ಒಳಬಾಗಿಲಕಡೆ ದಬ್ಬುತ್ತಾ) ಅವನ್ನ ಯಾಕೆ tease ಮಾಡ್ತೀಯಾ?........ ನಡಿ, ನಿಮ್ಮ ತಂದೆ ಊಟಕ್ಕೆ ಬರೋ ಹೊತ್ತಾಯ್ತು.

[ಇಬ್ಬರೂ ನಿಷ್ಕ್ರಮಣ].

**ಕಿಟ್ಟು :** (ಘಟ್ಟಿಯಾಗಿ) **ಬೋರಾ !**

**ಬೋರ:** (ಪ್ರವೇಶಿಸಿ ಮೆಟ್ಟಿಲನ್ನು ರಭಸವಾಗಿ ಹತ್ತಿ) ಬಂದೆ ಬುದ್ಧೀ...... !

**ಕಿಟ್ಟು:** ಎಲ್ಲಿ ಹೋಗಿದ್ಯೋ....... ಇಷ್ಟು ಹೊತ್ತೂ ?

**ಬೋರ:** ಟೈಗರ್‌ನಾ ಕೆರೆಗೊಯ್ದು ವ್ಯೆತೊಳಕೊಂಬಂದೆ ಬುದ್ಧೀ.... !

**ಕಿಟ್ಟು:** ಅಲ್ಲಾಕಣೋ! ನಾಯೀಗೆ ವ್ಯೆತೊಳೆದು ಕುದುರೇಗೆ ಹಲ್ಲುಜ್ಜಿ ಕೋಣನಿಗೆ ರುಮಾಲುಕಟ್ಟತಾ ಕೂತಿದ್ರೆ ನನ್ನ ಬೂಟ್ಸಿಗೆ ಬ್ಲ್ಯಾಕ್ ಯಾವಾಗ್ಲೋ ಹಾಕೋದು ?

**ಬೋರ:** ಅಕ್ದೆ ಬುದ್ಧೀ ಬೂಟ್ಸಿಗೆ ಬ್ಲಾಕಾ, ಕರೇ ಬೂಟ್ಸಿಗೆ!

**ಕಿಟ್ಟು:** ನಾನ್ ಕೇಳೋದು ಕೆಂಪು ಬೂಟ್ಸಿಗೇ ಕಾಣೋ ?

**ಬೋರ:** ಕೆಂಪು ಬೂಟ್ಸಿಗೆ ಕೆಂಪು ಬ್ಲಾಕು ಆಗೋಯಿತು ಬುದ್ಧೀ. ಇನ್ನು ದೊಡ್ರಾಯರ ಬಿಳೀ ಬೂಟ್ಸಿಗೆ ಬಿಳೀ ಬ್ಲಾಕೂ ಇಲ್ಲ.

**ಲಕ್ಷ್ಮೀ:** (ಪ್ರವೇಶಿಸಿ) ಏನೋ ಇದು ಗಲಾಟೇ? ನಿನ್ನ ಧರ್ಮಕ್ಕೆ.... ನಿಮ್ಮ ತಂದೆ ಆಫೀಸಿಗೆ ಹೋಗೋವರೀಗಾದರೂ quiet ಆಗಿ ಇರಬಾರದೇನೋ ?

**ಕಿಟ್ಟು:** ಏನಮ್ಮಾ ಇದು ? ಟೈಗರಿಗೆ toilet soapಪು .... ನನ್ನ brown bootsಗೆ polish ಇಲ್ಲಾ, ಏನಮ್ಮಾ ಇದೂ . ....?

**ಲಕ್ಷ್ಮೀ:** ಮುಚ್ಕೋಬಾಯಿ! ........ ಅಳಬೇಡ. ಸಾಯಂಕಾಲ ತರಿಸಿದ್ರಾಯಿತು. [ಬೋರನ ನಿಷ್ಕ್ರಮಣ]

**ಕಿಟ್ಟು:** ಈ ಶನೀನ್ನೋಡಮ್ಮಾ.... !

**ಲಕ್ಷ್ಮೀ:** ಯಾವ ಶನಿಯೋ? ಮನೇಲಿ ಎಷ್ಟೋ ಶನಿಗಳು!

**ಕಿಟ್ಟು:** ಈ ನನ್ನ ಜುಟ್ಟು ನೋಡಮ್ಮಾ!

**ಲಕ್ಷ್ಮೀ:** ಅದಕ್ಕೇನು ಬಂತು ಕೇಡು?

**ಕಿಟ್ಟು:** ಕೇಡೇನೂ ಬರ್ಲಿಲ್ಲ. ಅದೇ ತಕ್ರಾರು. ಇಲ್ನೋಡಮ್ಮಾ! ನಾನೆಷ್ಟು ಜೋರಾಗಿ ಡ್ರೆಸ್ಸು ಮಾಡಿಕೊಂಡ್ರೂ — ಜುಟ್ less ಆಗೋವರಿಗೂ ಜೋರು ಕಂಡುಬರೋದಿಲ್ಲ. ಕ್ರಾಪಿಗೆ (Crop) ಯಾವಾಗ consent ಕೊಡತೀಯಾ ಅಮ್ಮಾ?

**ಲಕ್ಷ್ಮೀ**: ಚನ್ನಾಗಿಧೆ ನಿನ್ನ ಬುದ್ಧಿ ! ನಿಮ್ಮಜ್ಜಿ ಕೈಲಿರೋದು 2,000 ರೂಪಾಯಿ. ನಿನಗೇ ಅಂತ ಹೇಳಿಧಾಳೆ. ಇವತ್ತೋ ನಾಳೆಯೋ ಸಾಯೋ ಹಾಗೂ ಇಧಾಳೆ........ ಇಷ್ಟರಲ್ಲಿ ನೀನು ತಲೆ ಬೋಳಿಸಿ ಕೊಂಡು ನಿಲ್ಲೂ .. ಇದನ್ನೋಡಿ "ಈ ಕೂಂಗನ ಕೈಪಿಂಡ ನನಗೆಲ್ಲಿ ಮುಟ್ಟುತ್ತೆ ಮೇಲೆ ಲೋಕದಲ್ಲೀ" ಅಂತಾ . . .... . ಕಾಶೀನೋ ರಾಮೇಶ್ವರಾನೋ ಎದ್ದು ಬಿಡಲಿ ಅವಳು ... . .. ... ಕೈಗೆ ಬಂದ ರೂಪಾಯಿನೂ ಕಳಕೊಂಡು ........... ನಿನ್ನ ಕ್ರಾಪ್ ತಲೇನೂ ಸವರಿಕೊಳ್ಳುತಾ, ಕಣ್ಣುಕಣ್ಣು ಬಿಡೋ, ಕಪಿಯೇ !

**ಕಿಟ್ಟು**: ಅದಿರಲೀ ! What about my careerಉ ಅಮ್ಮಾ !

**ಲಕ್ಷ್ಮೀ**: ಸರಿ, ಕ್ರಾಪಾಯಿತೋ ಇನ್ನೀ careerರು. ಅಲ್ಲೋ Matriculationನ ಮೂರನೇ ದರ್ಶನಕ್ಕೆ ಎದುರುನೋಡ್ತಿರೋ ನಿನಗೆ career ಯೋಚ್ನೇಗೇನೋ ಇಷ್ಟು ಅವಸರ . !

**ಕಿಟ್ಟು**: ಅದೇ ನಾನೂ ಹೇಳೋದು. ಇಲ್ನೋಡಮ್ಮ ! ನನಗೋ ಎರಡು ವರ್ಷಾನೂ S. S. L. C. ಡುಮ್ಕಿ ಮೇಲೆ ಡುಮ್ಕಿ. ಇನ್ನು future prospectsನೋ ನನಗೆ ತಿಳಿದಮಟ್ಟಿಗೂ ಠೋಕರ್ ಮೇಲೆ ಠೋಕರು....unless ಇವರು curriculumನಾ change ಮಾಡಿ.... of course that is impossible—sense ಎಲ್ಲಿದೆ ಈ universityಗೆ —ಎಲ್ಲ ಹುಟ್ಟೋವಾಗ್ಲೆ specialise ಅಂತಾ ಅಭಿಮನ್ಯು ಬಾಬತ್ತು ಮಾಡಿಟ್ಟುಬಿಟ್ಟಿಧಾರೆ—Therefore ಅಮ್ಮಾ, ಇದಕ್ಕೆಲ್ಲಾ ಒಂದೇ ದಾರಿ....I must be England returnedಡೂ ಅಮ್ಮಾ! ಇದಕ್ಕೆಲ್ಲ ಯೋಚಿಸಿ careful ಆಗಿ ನಾನು ಹಾಕಿದ Budgetನಾ ಅಪ್ಪಾ approve ಮಾಡಿ, ಈ amountನ ನನ್ನ father-in-law ಕೈಯಿಂದಲೇ ಹೊರಡಿಸೋದು best thingಉ ಅಂತಾ opinion ಕೊಟ್ಟಿದಾನೆ. ಈಗ ಬಂದಿದ್ರಲ್ಲಮ್ಮ partiesಉ, ಏನು arrange ಮಾಡಿಧೀಯಾ ?

ಲಕ್ಷ್ಮೀ: Arrange ಏನು! ಮನೆ Mortgageನ 2700 ರೂಪಾಯಿ ನಾನು ಕೇಳಿಧೇನೆ. ನಿಮ್ಮ ತಂದೇಗಿರೋ 3000 ರೂಪಾಯಿ ಚಿಲ್ಲರೆ ಸಾಲದ ಮಾತು ಅವರೆತ್ತಿದಾರೆ.

ಕಿಟ್ಟು: ಮತ್ತೆ ನನಗೇನು ಬಂದ ಹಾಗಾಯಿತಮ್ಮ? ಕ್ರಾಫೂ put offಊ, careerಊ cut offಊ....ಏನ್ ಬಂದ ಹಾಗಾಯಿತಮ್ಮಾ.. ?

ಲಕ್ಷ್ಮೀ: ಬಂಗಾರದಂಥ ಹೆಂಡತಿ ಬಂದಹಾಗಾಯಿತು.

ಕಿಟ್ಟು: ಒಳ್ಳೇ ಬಂಗಾರದ ಹೆಂಡತಿ! ನನಗೆ ಆಗಾಗ ಆಗೋ expensesಗೆ ಮೂಗು ಕಿವೀನ ಗಿಲ್ಲಿಕೊಂಡು ತೀರಿಸಿಕೊಳ್ಳೋದೆ? What is this ಅಮ್ಮಾ? ನಾನೇ ಹೋಗಿ Mr. ನರಸಿಂಹಯ್ಯನ ಹತ್ತಿರ ನನ್ನ difficulties ವಿಷಯವಾಗಿ broach ಮಾಡ್ತೇನೆ!

ಲಕ್ಷ್ಮೀ: ಹಯ್ಯೋ ಮಂಕು! ಆಕೆ ಬರೀ 2700ಊ ಅಂತ ತಿಳಕೊಂಡ್ ಇಧಾಳೆ. ಇನ್ನು ಅತ್ಲೋ, ನಿಮ್ಮ ತಂದೆ ಹೇಳಿದ 3000 ಚಿಲ್ಲರೆ ಅಂತ ತಿಳಕೊಂಡಿಧಾನೆ. ಇನ್ನು ದಂಪತಿಗಳು notes compare ಮಾಡಿಕೊಂಡು 6000 ಅಂತ ಮನದಟ್ಟಾಗತ್ಲೊ, ಹುಚ್ಚು ಹಿಡೀದೆ ಇತ್ತೋ ...ನಮ್ಮ ಭಾಗ್ಯ! ಏತನ್ಮಧ್ಯೆ ನೀನು ಓಡಿಹೋಗಿ ನಿನ್ನ ಕೋತಿ ಮುಖಾನ ತೋರ್ಸಿ ಇಲ್ಲಿ ಪರೀಕ್ಷೆಗಳಲ್ಲಿ ಬರೋ once more ಗಳ ಜೊತೇಲಿ England ನಲ್ಲೇ?....ನಾನು ಹೇಳೋದು ಕೇಳೂ! Eldersಗೆ ಬಿಟ್ಟುಬಿಡು ನಿನ್ನ futureನಾ!

ಕಿಟ್ಟು: ಒಳ್ಳೇ ಬಿಟ್ಟುಬಿಡೂ ಅಮ್ಮಾ! ನಾನು desperateಊ ಅಮ್ಮಾ! ನೀವು ಗಾನ at once ನನ್ನ English tripಗೆ arrange ಮಾಡ್ದೆ ಹೋದ್ರೋ, Mesopotamiaಗೆ ಓಡಿಹೋಗಿಬಿಡತೇನೆ. ನಾನು desperateಊ . ನರಸಿಂಹಯ್ಯನೋರಿಗೆ ಒಂದು ಕಾಗದಬರದೂ....

ಲಕ್ಷ್ಮೀ: (ಹತ್ತಿರಕ್ಕೆ ಬಂದು ಕಿಟ್ಟಿಯ ಟೋಪಿಯನ್ನು ತೆಗೆದು ಮೇಜಿನಮೇಲಿಟ್ಟು ತಲೆಯನ್ನು ಸವರುತ್ತಾ ಮೃದುವಚನಗಳಿಂದ) ಇಲ್ಲಿ ನೋಡು ಮಗೂ!

ಈ 6000 ಅಲ್ದೆ ಮದುವೆ ಖರ್ಚು ಕನಿಷ್ಟಪಕ್ಷ 1000......ಇದು ತಿಳಿಯುತ್ಲೂನೂವೆ ಕೈಕೈ ಹಿಸಕತಾ, ನಿಂತಿರೋ ಅವರನ್ನು, ನಿನ್ನ England ಖರ್ಚುಗಳೂ ಈಗಲೇನೆ ಕೇಳಿದರೆ paralytic stroke ಬಂದೀತು ಅವರಿಗೇ! (ಕಿಟ್ಟಿಯನ್ನು ಪಕ್ಕಕ್ಕೆಳೆದು) ಮನೆ ಭೋಗ್ಯಾನೂ ಬಿಡಿಸಿಕೊಂಡು ನಿಮ್ಮ ತಂದೆ ಸಾಲಾನೂ ತೀರಿ ನಿನ್ನ ಖರ್ಚಿಗೂ ಆಗೋ ದುಡ್ಡಿಗೆ ದಾರಿ ಹೇಳತೇನೆ, ಕೇಳು ನನ್ನ planನ....!

**ಕಿಟ್ಟು:** (ಮುಖದಲ್ಲಿ ಜಿಗುಪ್ಸೆಯನ್ನು ತೋರಿಸುತ್ತಾ) ಏನು plan ಅಮ್ಮ ನಿನ್ದು.. ....? (ಕಿವಿಯನ್ನು ಕೊಡುವನು)

**ಲಕ್ಷ್ಮೀ:** Carefulಆಗಿ ಕೇಳು!

(ಎರಡು ನಿಮಿಷಗಳು ಕಿವಿಯಲ್ಲಿ ಹೇಳುತ್ತಾ ಹೇಳುತ್ತಾ ಕಿಟ್ಟಿಯ ಮುಖವು ಜಿಗುಪ್ಸೆಯಿಂದ ವಿಸ್ಮಯ, ವಿಸ್ಮಯದಿಂದ . ಆನಂದ ಮುದ್ರೆಗಳನ್ನು ಅವಲಂಬಿಸುವುದು).

**ಕಿಟ್ಟು:** (ನಗುತ್ತಾ) ಏನು scoundrelಲೇ ಅಮ್ಮಾ, ಅಲ್ಲಾ ಏನು cleverಉ ಅಮ್ಮ ನೀನು! ನೀನು ಹೇಳೋಹಾಗೆ, birds of passage ಅಲ್ಲ ಅವರು ನಮ್ಮ ಹಾಗೆ! ಈ ವೂರಿನವರು. Lot of relationsಉ respectable family... .....disgraceಗಿಂತ deathಏ ಮೇಲೂ ಅಂಬೋಬಾಬ್ತು. Besides, ನಾವು ಕೇಳೋ ಸಮಯ, ನಮ್ಮ Head master ಹೇಳೋಹಾಗೆ ಓಕ್ಳೀ ................................ "ಪಿ ಸ್ ಕ ಲಾ ಜಿ ಕ ಲ್ ಮೊ ಮೆ ಂ ಟು (Momentಉ) ಅಮ್ಮಾ....!

[ಪರದೆಯು ಬೀಳುವುದು]

# ತಾಳೀಕಟ್ಬೋಕ್ಕೋಲೀನೇ ?

೨

## ಸಾತೂ ತೌರ್ಮನೆ

# ಸಾತೂ ತೌರ್ಮನೆ

ಪಾತ್ರಗಳು

| | | |
|---|---|---|
| ನಾಗತ್ತೆ | ... | ಟೊಳ್ಳು ಗಟ್ಟಿಯು |
| ಸಾತೂ | ... | ,, |
| ರಂಗಣ್ಣ | .... | ಸಾತು ತಂದೆ |
| ನರಸಮ್ಮ | . | ಸಾತು ತಾಯಿ |
| ಶಾಮಿ | | |
| ಮಗು | .. | ಸಾತು ತಮ್ಮಂದಿರು |
| ಕೂಸು | ... | |
| ಪುಟ್ಟಾ | ... | ಸಾತು ತಂಗಿ |
| ನರಸಿಂಹಯ್ಯ | ... | ಸಾತೂ ತೌರ್ಮನೆಯು |
| ಪಾರ್ವತಮ್ಮ | .. | ,, |

| | | |
|---|---|---|
| ಕಾಲ | ... | ಆಧುನಿಕ |
| ಭಾಷಾ | ... | ತಥಾ |
| ಸ್ಥಳ | ... | ರಾಮಪುರ — ರಂಗಣ್ಣನ ಮನೆ |

## ಸೀನ್ ೧

### ರಂಗಣ್ಣನ ಮನೆ ಮುಂದಿನ ಕೋಣೆ

[ಜೋಲಿಯಲ್ಲಿರುವ ಕೂಸನ್ನು ಆಗಾಗ್ಗೆ ಆಡಿಸುತ್ತಾ ತನ್ನ ನಾಲಿಗೆಯನ್ನು ಅಲ್ಪದೂರ ಬಿಟ್ಟುಕೊಂಡು ಮಗುವು "ಕಾಪಿ"ಯನ್ನು ಬರೆಯುತ್ತಿರುವನು. ಹಿಂದಿನ ಬಾಗಿಲಿನಿಂದ ಪುಟ್ಟಾ, ಒಂದು ಕೈಯಲ್ಲಿ ಮುರಿದ ಗೊಂಬೆಯನ್ನು ಮತ್ತೊಂದು ಕೈಯಲ್ಲಿ ಆ ಗೊಂಬೆಯ ಮುರಿದ ಕೈಯನ್ನು ಹಿಡಿದುಕೊಂಡು ಮಗುವನ್ನು ಸಮೀಪಿಸುವಳು.]

**ಪುಟ್ಟಾ :** ಲೋ ! ಮಗು, ಈ ಗೊಂಬೆ ಸರಿಮಾಡಿಕೊಡೋ.

**ಮಗು :** ಲೇ ! ಏನೆ ಇದೂ ; ಅಣ್ಣಾನ್ನ, ಗಂಡಸಿನ್ನ, ಭೂಪತೀನ ಲೋ ಮಗು ಅಂತೀಯಾ.... .......? ನನಗೇನು ನಿನ್ನ ಗೊಂಬೆ ರಿಪೇರಿ ಮಾಡೋದೇ ಕೆಲ್ಸ ಅಂತ ತಿಳ್ಕೊಂಡೆಯಾ ?........ಈ ಭೂಪತಿ ಬರೀತಿರೋದು ಗೊತ್ತಿಲ್ವೆ .......?

**ಪುಟ್ಟಾ :** ಏನೋ ಸೀನ್ ಬರೀತಿರೋದು ಮಹಾ........?

**ಮಗು :** ಮಹಾ ಅಲ್ದೆ ಮತ್ತೇನೆ...............? ಕಾಪಿ ಬರೀತಿದೇನೆ ಇಂಗ್ಲಿಷಿನಲ್ಲಿ........"admire, good men" ಅಂತಾ .. ....

**ಪುಟ್ಟಾ :** ಹಾಗಂದ್ರೇನೋ .. ...?

**ಮಗು :** (ಬೆರಳಿನಿಂದ, ಮುಂದೆ ಬೆಳೆದರೆ ಮೀಸೆ ಇರಬೇಕಾದ ಸ್ಥಳವನ್ನು ಸವರುತ್ತಾ) Men ಅಂದರೆ ನಾವು ಭೂಪತಿಗಳು........ admire ಅಂದ್ರೆ ... . ........ಊಂ.........ಊಂ.........ಸಂಗಾತ ಇಟ್ಕೋ............good ಒಳ್ಳೇದು........ಅಂದ್ರೆ ಗಂಡಸರ ಸಹವಾಸ ಒಳ್ಳೇದು........ಹೆಂಗಸ್ರು ಸಹವಾಸ hopelessಊ. .. ... **ಹೊರಟ್ಹೋಗ್ತಿರು !!!**..... .. ...

(ಪುನಃ ಬರೆಯಲುಪಕ್ರಮಿಸುವನು.)

**ಪುಟ್ಟಾ :** (ಖಿನ್ನಳಾಗಿ) ಏನೋ ಇದೂ.........ಹೆಂಗಸರು ಹೆಂಗಸರು ಅಂತಾ ಸುಮ್ಮನೆ ಬೈತೀಯಾ........ನಾವೇನುಮಾಡಿದ್ವೋ ನಿನಗೆ ?

**ಮಗು** : ಮಾಡಬೇಕಾದದ್ದೇನಿಧೆಯ್ಯೆ...........? ಮೊದಲೇ ನೀವೆಲ್ಲಾ hopelessಊ ಕಾಣ್ರೈಲ್ರೀ........!

**ಪುಟ್ಟಾ** : ಹೋಪ್‌ಲೆಸ್ಸು ಅಂದ್ರೇನೊ ?

**ಮಗು** : Hopelessಉ ಅಂದ್ರೆ ಊಂ ಯಾವ ಬಾಬತ್ಲೂ hopelessoo ಅಂತ........!

**ಪುಟ್ಟಾ** : ಮತ್ತಿರಿಗಿ ಹೋಪ್‌ಲೆಸ್ ........ ಅಂದ್ರೇನೊ........?

**ಮಗು** : ಹೇಳ್ತೀನೆ....ಇರೀ....hopelessoo ಅಂದ್ರೆ....ನೀವೆಲ್ಲ....ಬರೀ ಅಡಿಗೇ ಬಾಬತ್ತಿಗೆ ಲಾಯಖ್ಖು! ಮಿಕ್ಕ ಸಮಾಚಾರದಲ್ಲೆಲ್ಲಾ ಸೊನ್ನೇ ಅಂತ ಅರ್ಥ.

**ಪುಟ್ಟಾ** : ನೀವು ಮಟ್ಟೆಗೇನೊ ಮಹಾ........! ?

**ಮಗು** : ನಾವೇ ? ಭೂಪತಿಗಳೀ....! ಒಳ್ಳೇ ಕಾಪಿ ಗೀಪಿ ಬರಕೊಂಡು ಹೋಗಿ ಮಾಸ್ಟರಿಗೆ ತೋರಿಸಿ, ಮಾರ್ಕ್ಸ್ ತಕ್ಕೊಂಡು, ಪ್ಯಾಸು ಮಾಡಿ, ಕೆಲಸಕ್ಕೆ ಸೇರಿ, ದುಡ್ಡು ಸಂಪಾದ್ಸಿ, ಅಂಗಡೀಗೆ ಹೋಗಿ ಅಕ್ಕಿ ಬೇಳೆ ತರಕಾರಿ ವಗೈರೆ ತಕ್ಕೊಂಡ್ ಬಂದು, ಕಿತ್ತುಎರಚೋದು ನಿಮ್ಮೆದುರಿಗೇ........ಅದನ್ನೆಲ್ಲ ನೀವು, ಹೆಂಗಸರು, ಜೋಪಾನವಾಗಿ ಒಲೆ ಮುಂದೆತ್ತಿಕೊಂಡ್‌ಹೋಗಿ ಹುಷಾರಾಗಿ ಅಡಿಗೆ ಮಾಡಿ, ಬಡಿಸ ಬೇಕ್ರೈಲ್ರೀ ನೀವೂ............ನಮಗೆ, ಭೂಪತಿಗಳಿಗೆ, ಬಡಿಸಬೇಕು ನೀವು!

**ಪುಟ್ಟಾ** : ನಾವುಗಾನ ಅಡಿಗೆ ಮಾಡಿ ಬಡಿಸದೆ ಇದ್ದರೆ ಬರೀ ಅಕ್ಕಿ ಹಸಿ ತರಕಾರೀನ ತಿನ್ನಬೇಕಲ್ಲ ನೀವೂ.... ..?

**ಮಗು** : ನೀವು ಬಡಿಸದಿದ್ರೆ ಅಷ್ಟೇಹೋಯಿತೇ? ಪರಿಚಾರಕರನ್ನ ಇಟ್ಕೊಕೋತೇವೇ ಭೂಪತಿಗಳೂ, ಪರಿಚಾರಕರನ್ನಾ........

**ಪುಟ್ಟಾ :** ಯಾವ ಹೆಸರಿಟ್ಟರೇನು ? ಮತ್ತೆ ತಿರುಗೂ ನಾವೇ ಅಡಿಗೆ ಮಾಡಬೇಕಲ್ಲವೇ........?

**ಮಗು :** ಪರಿಚಾರಕರು ಅಂದ್ರೆ ಹೆಂಗಸರಲ್ಲ ಕಾಣೇ........ಗಂಡಸರು !

**ಪುಟ್ಟಾ :** ಹಾಗಾರೆ........ಗಂಡಸರು........ಭೂಪತಿಗಳು, ಅಡಿಗೇನೂ ಮಾಡತಾರೋ ?

**ಮಗು :** (ಒಂದು ಕ್ಷಣ ತಂಗಿಯನ್ನು ದುರುಗುಟ್ಟಿ ನೋಡಿ) ಅದಕ್ಕೇನು ಮಾಡೋದು ? ಕಾಪಿ ಗೀಪಿ ಬರಿಯೋದನ್ನ ಬಿಟ್ಟುಬಿಟ್ಟೂ ಹೆಂಗಸರ ಮುರುಕಲ ಗೊಂಬೆಗಳ್ನ ರಿಪೇರಿಮಾಡ್ತಾ ಕೂತಿದ್ರೆ ಪ್ಯಾಸೂಆಗದೆ ಕೆಲಸಾನೂ ಮಾಡದೆ ಹೊಟ್ಟೆಪಾಡಿಗೆ ಅಡಿಗೆ ಮಾಡೋದು ತಿಳೀಲೇ ಬೇಕು.

**ಪುಟ್ಟಾ :** ಪ್ಯಾಸೂ ಅಂದ್ರೆ ಜ್ಞಾಪಕ ಬರುತ್ತೆ. ನಮ್ಮ ಮಿಸ್ಟ್ರೆಸ್ಸು ಪ್ಯಾಸ್ ಮಾಡಿದಾಳಲ್ವೇನೋ ?

**ಮಗು :** ಇಲ್ಲದಿದ್ರೆ teacher ಕೆಲಸ ಕೊಡತಿದ್ರೇನೆ ?

**ಪುಟ್ಟಾ :** ಹಾಗಾರೆ ಅವಳಿಗೂ ಸಂಬಳ ಉಂಟಲ್ವೇ ?

**ಮಗು :** ಮತ್ತೇನು ಬಿಟ್ಟೀಕೆಲಸ ಮಾಡ್ತ್ಯಾಳೇ....... ?

**ಪುಟ್ಟಾ :** ಹಾಗಾರೆ ಕೆಲವು ಗಂಡಸರು ಪ್ಯಾಸ್‌ಗೀಸ್ ಮಾಡಿ ಸಂಬಳ ಬಂದ್ರೆ ಅವರಿಗೆ ಪ್ಯಾಸ್ ಆಗದ ಹೆಂಗಸರು ಅಡಿಗೆ ಮಾಡಬೇಕು. ಮತ್ತೆ, ಕೆಲವು ಹೆಂಗಸರು ಪ್ಯಾಸ್ ಮಾಡಿದರೆ, ಅವರಿಗೆ ಪ್ಯಾಸಾಗದ ಭೂಪತಿಗಳು ಅಡಿಗೆ ಮಾಡಬೇಕು, ಅಲ್ವೇ........?

**ಮಗು :** (ರೇಗಿ) ಎಷ್ಟೆ ನಿನ್ನ ನಾಲಿಗೆ........ಗಂಡಸರನ್ನ ಬೈತೀಯಾ.... ಹಾಗಾದರೆ ನಿನ್ನ ಗೊಂಬೆ ನೀನೇ ರಿಪೇರಿ ಮಾಡಿಕೋ........!

**ಪುಟ್ಟಾ :** ಇಲ್ಲಾ....ಕಣೋ....ಬಯ್ಯೋದಿಲ್ಲ... ನೀವೆಲ್ಲ ಭೂಪತಿಗಳು ........ನಾವೆಲ್ಲ ಹೋಪ್‌ಲೆಸ್ಸೂ........ಇದು ಸರಿಮಾಡಿಕೊಡೋ ಗೊಂಬೇನಾ........(ಹತ್ತಿರ ಬಂದು ಗೊಂಬೆಯನ್ನು ನೀಡುವಾಗ್ಗೆ ಮಗುವಿನ ಕಾಪೀ ಪುಸ್ತಕವನ್ನು ಗಮನಿಸಿ) ನನಗ್‌ಕೊಡೋ ನವಿಲಗರೀ........

**ಮಗು :** ಇಲ್ಲಾ ಕಾಣೇ........ಅದು ಹಾಗೇ ಇಟ್ಟದ್ರೆ ಮರೀಹಾಕುತ್ತೇ ........ಆಮೇಲೆ ಮರೀನ ಕೊಡ್‌ತೇನೇ........

[ಈ ಸಂವಾದ ಸಂಭ್ರಮದಲ್ಲಿ ಜೋಲಿಯನ್ನು ಆಡಿಸದೆ ಕೂಸು ರೋದಿಸುವುದು]

**ನರಸಮ್ಮ :** (ಒಳಗಿಸಿಂದ) ಏನುಮಾಡ್‌ತಿಧೀಯೋ ಮಗೂ........ ..? ಅಳಸ್ತಿದೀಯಾ ಕೂಸ್‌ನಾ? ಒಂದು ಕೈಲಿ ಬರೀತಿದ್ರೆ ಇನ್ನೊಂದು ಕೈಯಿಂದ ಆ ಜೋಲೀನ ಆಡಸ್‌ಬಾರದ್ಯಾಕೋ ?

**ಮಗು :** ಇಕೋ ಆಡಸ್ತೇನಮ್ಮ.

**ಪುಟ್ಟಾ :** ಜೋಲೀ ಆಡ್ಸೋ ಭೂಪತೀ ! ಜೋಲೀ ಆಡ್ಸೋ ಭೂಪತೀ !

(ಕಿಸೆಯಿಂದ ಒಂದು ಕಲ್ಲುಸಕ್ಕರೆ ತುಂಡನ್ನು ತೆಗೆದು ತಿನ್ನಲುಪಕ್ರಮಿಸುವಳು.)

**ಮಗು :** (ಜೋಲಿಯನ್ನು ಆಡಿಸುತ್ತಾ) ನನಗೊಂದು ತುಂಡು ಕೊಡೇ.

**ಪುಟ್ಟಾ :** (ಸಕ್ಕರೆಕಲ್ಲನ್ನು ತತ್‌ಕ್ಷಣವೇ ಕಿಸೆಗೆ ಹಾಕಿ) ಜೋಬಿನಲ್ಲಿರಲೀ........ ಮರೀಹಾಕುತ್ತೇ. ಹಾಕಿದಮೇಲೆ, ನೀನ್ ನವಲ್‌ಗರೀ ಮರೀ ಕೊಟ್ಟಾಗ, ನನ್ನ ಕಲ್‌ಸಕ್ರೆ ಮರಿ ಕೊಡತೇನೆ ನಿನಗೆ ... . ಮರಿ ಹಾಕತ್ತಂತೆ ನವಲ್‌ಗರಿ ...... . !

**ಮಗು :** ಏನು ಮೀನೇ (Mean) ನೀನು !

**ಪುಟ್ಟಾ :** ಏನೋ ನನ್ನ ಮೀನು ಅಂತೀಯಾ (ರೋದಿಸಲುಪಕ್ರಮಿಸುತ್ತಾ) ನೀನೇನೊ ಮಹಾ .... ಮೊಸಳೇ........ !

**ಮಗು :** ಹಯ್ಯಯ್ಯೋ ! ಮೀನು ಅಂದ್ರೆ ಕನ್ನಡ ಮೀನಲ್ಲ ಕಾಣೆ ಇಂಗ್ಲೀಷ್ ಮೀನು (mean).

**ಪುಟ್ಟಾ :** ಹಾಗಂದ್ರೆ ತಾನೆ ಏನೋ ........ ?

**ಮುಗು**: ಮೀನು ಅಂದ್ರೆ ರೋತೀ ಅಂತಾ.

**ಪುಟ್ಟಾ**: (ಅಳುತ್ತಾ) ರೋತೀ ಅಂತೀಯಾ ನನ್ನ...... ಅಮ್ಮಾ !

(ಒಳಗೆ ಹೋಗಲು ಪ್ರಾರಂಭಿಸುವಳು).

**ಮುಗು**: (ಹೆದರಿ) ಅಲ್ಲಿ ಹೋಗಬೇಡವೇ ! ದಮ್ಮಯ್ಯ ! ಇಲ್ಲಿ ಬಾರೇ ! ........ರೋತಿ ಅಂದ್ರೆ ಬೈಗಳಲ್ಲಕಾಣೇ ...... ರೋತೀ ಅಂದ್ರೆ ರಾಣೀ ಅಂತ. ನೀನು ಮಹಾರೋತಿ ; ಅಂದ್ರೆ ಮಹಾರಾಣೀ ಅಂತ........ಇಲ್ಲಿ ಬಾ, ಆ ಗೊಂಬೇನೂ ರಿಪೇರಿ ಮಾಡಿಕೊಡತೇನೆ.

**ನರಸಮ್ಮ**: (ಒಳಗಿನಿಂದ) ಕೂಸನ್ನ, ಪುಟ್ಟಾನ ಆಡ್ಸು ಅಂತ ಹೇಳಿ........ ಇಲ್ಲಿ ಬಂದು ಈ ಬದನೇಕಾಯಿನ್ ತೊಟ್ಟು ಆರಿಸಿ ಕೊಡು.

**ಪುಟ್ಟಾ**: (ಕಲ್ಲುಸಕ್ಕರೆಯನ್ನು ಹೊರತೆಗೆದು ಆನಂದದಿಂದ ಹೀರುತ್ತಾ)

ಹೇಳೋ ಅಮ್ಮನಿಗೇ !

(ಕಲ್ಲುಸಕ್ಕರೆಯನ್ನು ಹಿಡಿಯದ ಕೈಯಿಂದ ಮೇಲುತುಟಿಯನ್ನು ಸವರಿಕೊಳ್ಳುತ್ತಾ) ನಾವು ಗಂಡಸ್ರೂ, ಭೂಪತಿಗ್ಳೂ, ಬದನೆಕಾಯಿ ತೊಟ್ಟಾರ್ಸೋದಿಲ್ಲಾ, ಅಂತ ಹೇಳೋ . !

**ನರಸಮ್ಮ**: (ಒಳಗಿನಿಂದ) ಏನೋ ಇದು, ಕಿವುಡೇನೋ ?

**ಮುಗು**: ಇದೋ ಬಂದೇ ಅಮ್ಮಾ! ಲೇ, ನನ್ನ ಕೈಮುರಿದ್ರೂನೂ ನಿನ್ನ ಗೊಂಬೆ ರಿಪೇರಿ ಮಾಡೋದಿಲ್ಲ ................ ಇರ್ಲಿ! ಇರ್ಲಿ!

(ಎಂದು ಗೊಣಗುತ್ತಾ ಒಳಕ್ಕೆ ನಿಷ್ಕ್ರಮಣ).

**ಪುಟ್ಟಾ**: (ಒಳಬಾಗಿಲಿನಿಂದ ಮುಗುವನ್ನು ಇಣಿಕಿ ನೋಡಿ) ಬದನೇಕಾಯಿ ತೊಟ್ಟು ಆರಿಸೋ ಭೂಪತೀ! ಬದನೇಕಾಯಿ ತೊಟ್ಟು ಆರಿಸೋ ! ........ ಅಲ್ಲಾ ಮತ್ತೆ (ಜೋಲಿಯನ್ನು ಸಮೀಪಿಸುತ್ತ)........ ಅಲ್ಲಾ ಮತ್ತೆ, ಹೆಂಗಸ್ರು ! ಹೆಂಗಸ್ರು ! ಅಂತ ಯಾವಾಗಲೂ ಬೈತಿರ್ತಾನೆ ! ನೀವೇನೋ ........ ಮಹಾ ........ ಭೂಪತಿಗಳು !

(ಒಂದು ಕೈಯಲ್ಲಿ ಹಿಡಿದ ಕಲ್ಲುಸಕ್ಕರೆಯನ್ನು ಹೀರುತ್ತಾ ಮತ್ತೊಂದು ಕೈಯಿಂದ ಜೋಲಿಯನ್ನು ಆಡಿಸುತ್ತಿರುವಳು).

[ರಂಗಣ್ಣ ಪ್ರವೇಶ]

**ರಂಗಣ್ಣ** : (ಒಳಗೆ ಬಂದು ಎದುರು ಗೋಡೆಯಲ್ಲಿರುವ ಗೂಟಕ್ಕೆ ರುಮಾಲನ್ನು ತಗುಲಿಸಿ ಅಂಗಿಯನ್ನು ಬಿಚ್ಚುತ್ತಾ) ಇದೇನು ಪುಟ್ಟಾ, ಮಗೂನ ಸುದಾರಿಸೋ ಜವಾಬ್ದಾರಿ ನಿನ್ನಮೇಲೆ ಬಿತ್ತು? ಅವರೆಲ್ಲ ಎಲ್ಲಿ, ಅಶ್ವತ್ಥ, ಶಾಮಿ, ಮಗೂ........?

**ಪುಟ್ಟಾ** : ಅಪ್ಪಾ!.... (ಬೆಟ್ಟನ್ನು ಮೋಲ್ತುಟಿಯ ಮೇಲೆ ಸವರುತ್ತಾ ಸವರುತ್ತಾ) ಭೂಪತಿಗ್ಳು ಅಂದ್ರೇನಪ್ಪಾ........

**ರಂಗಣ್ಣ** : (ಪುಟ್ಟಾನನ್ನು ಎತ್ತಿಕೊಂಡು ಕೆನ್ನೆಯನ್ನು ಹಿಂಡುತ್ತಾ) ಇದೆಲ್ಲ ಏನು ಕಲೀತೀಯೆ ಘಟಿಂಗಿ? (ಜೋಲಿಯನ್ನು ತಾನೇ ಆಡಿಸುತ್ತಾ ಘಟ್ಟಿಯಾಗಿ) ಇಧೀಯಾ?

**ನರಸಮ್ಮ** : (ಒಳಗಿನಿಂದ) ನಿಮ್ಮ ತಂದೆ ಕೂಗುತಾರೇನೋ ನೋಡೋ ಮಗೂ........ಅರ್ಧ ತೊಟ್ಟಾರ್ಸಿ ಅರ್ಧ ತೊಟ್ಟಿನ ಸಮೇತ ಹಾಗೇ ಬಿಡು! ನಿನ್ ಸಹಾಯ ಸಾಕು! ಓಡು.

[ಮಗುವು ಒಳಬಾಗಿಲಿನಿಂದ ಪ್ರವೇಶಿಸಿದಹಾಗೆಯೇ ಶಾಮಿಯು ಬೀದಿ ಬಾಗಿಲಿನಿಂದ ಎಡ ಕಂಕುಳಲ್ಲಿ ಮೂರು ಪುಸ್ತಕಗಳನ್ನು ಜೋಡಿಸಿಕೊಂಡು, ಬಲಗೈಯಲ್ಲಿ ಹೂವಿನ ಬುಟ್ಟಿಯನ್ನು ಹಿಡಿದುಕೊಂಡು, ಪ್ರವೇಶಿಸುವನು.]

**ಶಾಮಿ** : (ಬುಟ್ಟಿಯನ್ನು ಒಳಬಾಗಿಲಿನ ಹೊಸಲಾಚೆ ಮಂದಾಸನದ ಮುಂದೆ ಇಟ್ಟು ಹೊರಗೆ ಬಂದು) ಅಪ್ಪಾ, ನಿನ್ನ booksಉ. (ಮೂಲೆಯಲ್ಲಿರುವ ಮೇಜಿನ ಮೇಲಿಡುವನು) ಇನ್ನೊಂದು ಪುಸ್ತಕ libraryಯಲ್ಲಿ ಇಲ್ಲ ... Out ಅಂತೆ.

**ಪುಟ್ಟಾ** : (ತಂದೆಯಿಂದ ಬಿಡಿಸಿಕೊಂಡು ಇಳಿದುಬಂದು) ಶಾಮೀ! ರೋತೀ ಅಂದ್ರೇನೋ, ರಾಣೀನೇ........?

**ಶಾಮಿ** : ರಾಣಿ!! ಎಲ್ಲಿಧೆ?! ರೋತಿ ಅಂದ್ರೆ ಗೊಳ್ಳೋ ಅಂತ ಅಳೋ ಬಾಬ್ತು.

**ರಂಗಣ್ಣ :** ದರ್ಜಿ ಹತ್ತಿರ ಹೋಗಿ ನಿನ್ನ ಖಾಕಿ ಸೂಟಿಗೆ ಅಳತೆ ಕೊಟ್ಯಾ ?

**ಶಾಮಿ :** ಹೂಂ.

**ಮಗು :** ಇಲ್ನೋಡಮ್ಮ... (ಒಳಗೆ ನುಗ್ಗಿ) ಏನಮ್ಮ? (ರೋಧನ ಧ್ವನಿಯಿಂದ) ಶಾಮೀಗೆ ಮಟ್ಟಿಗೆ ಹೊಸ ಸೂಟು, ನನಗೆ ಹರಕಲು ಪಂಚೆ, ಏನಮ್ಮ ಇದು ...... ? (ರೋದಿಸುವನು)

**ಪುಟ್ಟಾ :** (ಒಳ ಬಾಗಿಲ ಹತ್ತಿರ ಇಣಿಕಿನೋಡಿ)ರೋತೀ, ರೋತೀ, ರೋತೀ!

**ಮಗು :** (ಹೊರಕ್ಕೋಡಿಬಂದು) ಯಾರನ್ನೇ ರೋತಿ ಅಂತೀಯಾ ?

**ಪುಟ್ಟಾ :** (ಅಟ್ಟಿಬರುವ ಮಗುವಿನ ಕೈತಪ್ಪಿಸಿಕೊಂಡು ತಂದೆಯ ಹಿಂದೆ ಅವಿತು ಕೊಂಡು) ರೋತಿ ಅಂದ್ರೆ ಬೈಗಳಲ್ಲಾ ಕಾಣೋ! ರೋತೀ ಅಂದ್ರೆ ರಾಜ........! ನೀನು ಮಹಾ ರೋತಿ, ಅಂದ್ರೆ ಮಹಾರಾಜಾ!

**ಮಗು :** (ಹಲ್ಲುಗಳನ್ನು ಕಚ್ಚುತ್ತಾ) ನನ್ನ ಕೈಗೆ ಸಿಕ್ಕು ನೀನೂ . . . .

**ರಂಗಣ್ಣ :** ಏನು ಗಂಡಸೋ ನೀನೂ, ಸೂಟಿಲ್ಲದಾಕ್ಷಣವೆ ಗಂಡಸು ಅಂಬೋದು ಮರ್ತುಬಿಟ್ಟು ಹೆಂಗ್ಸಿನ್ಹಾಗೆ ಅಳೋದಲ್ದೆ ಚಿಕ್ಕ ಹುಡುಗೀರ ಜೊತೆಗೆ ಜಗಳ ಆಡತೀಯಾ? ಶಾಮೀ scoutಉ, ಅವನಿಗೆ uniformಉ ....... ನೀನೂ ಸ್ಕೌಟ್ ಆದಾಗ . ...

**ಮಗು :** ನಾನೂ ಕಬ್ಬಾಗತೇನೇಂದ್ರೆ ಸೇರ್ಸೋದಿಲ್ಲಾಪ್ಪ, ಶಾಮಿ.

**ಶಾಮಿ :** ಪುಟ್ಟಾನ್ನ ಬೆದರಿಸೋದು, ಅಮ್ಮನ್ನ ರೇಗಿಸೋದು ಈ ಹೆಣ್ಣಕ್ಸ್‌ತನ ಇರೋವರಿಗೂನೂ ಕಬ್ಬಾಗೋದು ತುಂಡು.

**ನರಸಮ್ಮ :** (ಒಳಗಿನಿಂದ) ಯಾರದು ಶಾಮೀನೇ? ........ ಶಾಸ್ತ್ರಿಗಳ ಮನೆಗೆ ಹೋಗಿದ್ದೆಯಾ ....... ಏನು ಹೇಳಿದ್ರೂ? ಬರ್ತಾರೆಯೋ ನಾಳೆ ........ ?

**ಶಾಮಿ :** (ಒಳಬಾಗಿಲನ್ನು ಸಮೀಪಿಸಿ ಅಂಗಿಯನ್ನು ಬಿಚ್ಚುತ್ತಾ) ಹೋಗಿದ್ದೆ ಅಮ್ಮಾ, ಕಂಡಿದ್ದೆ ಶಾಸ್ತ್ರಿಗಳನ್ನ .... ಬೇರೊಂದುಕಡೆ ನಿಮಂತ್ರಣಕ್ಕೆ ಒಪ್ಕೊಂಡುಬಿಟ್ಟಿದಾರಂತೆ ........ ಬೇಕಾದ್ರೆ ಅವರ ಭಾವಪ್ಮೈದನ್ ತಮ್ಮನ್ನ .... ಕಳಿಸ್ತಾರಂತೆ.

**ನರಸಮ್ಮ :** (ಒಳಗಿನಿಂದ) ಆ ಹುಡುಗನ ಕೈಲೇನಾದೀತೂ .... ?

**ಶಾಮಿ :** ಅದೂ ಕೇಳ್ದೆ. ಆಯುಷ್ಯಹೋಮಕ್ಕೂ ಆಶೀರ್ವಾದಕ್ಕೂ ಎಷ್ಟು ಬೇಕೋ ಅಷ್ಟು ಮಂತ್ರ ಅವನಿಗೆ ಗೊತ್ತು ಅಂದ್ರು.. ... ಬರೋದಕ್ಕೂ ಬೇಡದ್ದಕ್ಕೂ ಸಾಯಂಕಾಲ ಬಂದು ತಿಳಿಸು ಅಂದ್ರು. ಏನು ಮಾಡೋದು ?

[ರಂಗಣ್ಣನು ಕೋಟು ಷರ್ಟನ್ನು ಬಿಚ್ಚಿ ಗೋಡೆಗೆ ತಗುಲಿಸಿ ಒಂದು ಚೌಕವನ್ನು ಹೊದ್ದುಕೊಂಡು ಒಳಕ್ಕೆ ನಿಷ್ಕ್ರಮಿಸುವನು]

**ನರಸಮ್ಮ :** (ಒಳಗಿನಿಂದ) ಮಾಡೋದೇನು, ಬರಲಿ ಅನ್ನೋದೇ....... ಸಾಯಂಕಾಲ ಹೋಗಿ ಹೇಳಿಬಿಡು.

**ಪುಟ್ಟಾ :** (ಜೋಲಿಯನ್ನಾಡಿಸುತ್ತಾ) ಆಯುಷ್ಯಹೋಮ ಅಂದ್ರೇನೊ?

**ಮಗು :** ಅದೊಂದು ಹಬ್ಬಕಾಣೆ. .... ಗಂಡಸ್ರಿಗೆ....ಭೂಪತಿಗಳಿಗೆ.... ನಾಳೆ ಹುಟ್ಟಿದ ಹಬ್ಬಕಾಣೆ .... ಕೂಸಿಗೆ, ಭೂಪತೀಗೆ .... ಶಾಸ್ತ್ರಿಗಳ್ನ ಕರೆಸಿ, ಹೋಮಗೀಮ ಮಾಡ್ಸಿ, ಕೂಸಿಗೆ ........ ಮಗುಟಾ ಗಿಗಟಾ ಸುತ್ತಿ ಮಣೆಮೇಲೆ ಕೂಡ್ಸಿ, ಆರತಿ ಎತ್ತಿ, ಒಬ್ಬಟ್ಟು, ಲಾಡು, ಫೇಣಿ ಬಾಬ್ತೆಲ್ಲ ಬಡ್ಸಿ ಎಲ್ಲ್ರಿಗೂ ಔತನ ಮಾಡಿ ತಿರುಗೂ ರಾತ್ರಿ ಹಸೆ ಮೇಲಿಟ್ಟು ದೀಪಗೀಪ ಹಚ್ಚಿ, ಒಳ್ಗೆ ಜಗಜ್ಯೋತಿ ಮಾಡ್‌ಹಾಕ್ ಬಿಡ್ತೇವೇ ........... ಹುಟ್ಟಿದ ಹಬ್ಬ ಕಾಣೆ ಕೂಸು ಭೂಪತೀಗೆ! ನಿನ್ನ ಹಾಗೆ ಹೆಂಗ್ಸು ಅಂತ ತಿಳಕೊಂಡ್ಯಾ ಅವನು....?

**ಪುಟ್ಟಾ :** ಯಾಕೋ ನನಗ್ ಹುಟ್ಟಿದ ಹಬ್ಬಾ ....?

**ಮಗು :** ಹೆ ಹೆ ಹೆ .... ನಗೂ ಬರುತ್ತೆ .... ನೀವು ಹೆಂಗಸರು ........ ಹುಟ್ಟಿದ ದಿನಾನೇ ಹಾಳ್ ಹೆಣ್ಣು ಹುಟ್ಟಿತಲ್ಲಾ ........ ಗಂಡು ಹುಟ್‌ಲಿಲ್ಲವಲ್ಲಾಂತ ಗೋಳಾಟ. ಆಮೇಲೆ ಮುರುಕ್ಲು ಗೊಂಬೆ ಕೈಯಲ್ಲಿ ಕೊಟ್ಟು ಹರಕ್ಲು ಲಂಗಾಗಿಂಗ ಉಡ್ಸಿ ಗಿಲೀಟಾಗಿ ಸಾಕಿಬಿಟ್ಟು ಮೆಲ್ಲಗೆ ಬೀದೀಲಿ ಹೋಗುವ ಯಾರಾದ್ರೂ ಒಬ್ಬನ ಕೈಲಿ ತಾಳೀ ಕಟ್ಟಿಸಿ ಒದ್ದು ಓಡಿಸ್‌ಬಿಡೋದು ಮಾವನ ಮನೇಗೆ....! ಭೂಪತಿಗಳೇ ಮನೇಗೆ ಖಾಯಂಕಾಣೆ .... ನೀವೆಲ್ಲ ಟೆಂಪರವರಿ ಕಾಣ್ರೇಲ್ರೇ .... ! ಟೆಂಪರ್‌ವರೀ !

**ಪುಟ್ಟಾ:** (ಕಣ್ಣೀರುಕ್ಕುತ್ತಾ) ನನ್ಯಾಕೋ ಮನೆಯಿಂದೊದ್ದು ಓಡಿಸೋದೂ? ಅಮ್ಮಾ ! (ಎಂದು ಒಳಬಾಗಿಲನ್ನು ಸಮಿೂಪಿಸುವಳು)

**ಮಗು :** (ಸ್ವಲ್ಪ ಬೆದರಿ) ಇಲ್ಲಾ ಕಣೆ! ದಮ್ಮಯ್ಯ ಬಾರೇ ! ಮಾವನ ಮನೆಗೆ ಒದ್ದೋಡಿಸೋದಿಲ್ಲಕಾಣೇ ನಿನ್ನ : ಪೀತಾಂಬರ ಕಟ್ಟಿ ನೀರಾಜಿ ನಿನ್ನ ತಲೇಗೆ ಸುತ್ತಿ ಮಂದಾಸನಕ್ಕೆ ನಿನ್ನ ಬಿಗಿದು ಹಗಲೂ ರಾತ್ರಿ ನಿನ್ನ ಮೂತೀಗೆ ಮಂಗಳಾರತಿ ಎತ್‌ತಾ ನಿನ್ನ ಮನೇಲಿಟ್ಟುಕೊಳ್ತೀವೇ .... ಇಲ್ಲಿ ಬಾರೇ ಅಳಬೇಡ .... ಲೇ....ರೋತಿ....ಅಲ್ಲ ರಾಣೀ .... !

**ಪುಟ್ಟಾ:** ಏನೋ ಇದು, ತಿರುಗೂ ರೋತಿ ............................
[ಬೀದಿಯ ಬಾಗಿಲನ್ನು ಗಮನಿಸಿ ಮುಖದಲ್ಲಿ ಆಶ್ಚ್ಯಾರ್ಯವನ್ನೂ ಆನಂದವನ್ನೂ ಥಟ್ಟನೆ ತಳೆದು] **ಅಕ್ಕಾ !**
(ಒಂದು ಹಾರು ಹಾರಿ ಆಗತಾನೇ ಪ್ರವೇಶಿಸಿದ ಸಾತುವನ್ನು ತಬ್ಬಿಕೊಂಡು ಗಟ್ಟಿಯಾಗಿ)
ಅಮ್ಮಾ! ಅಕ್ಕ ಬಂದಿದಾಳೆ! ಶಾಮೀ! ಅಕ್ಕ !

**ಮಗು :** (ಥಟ್ಟನೆ ತಿರುಗಿ ತಾನೂ ಸಾತುವನ್ನು ಸಮೀಪಿಸಿ, ಸಾತು ಕೈಯನ್ನು ಹಿಡಿದು ಒಳಕ್ಕೆಳೆಯುತ್ತಾ) ಶಾಮೀ ಲೇ, ಅಕ್ಕ! ಅಕ್ಕಾ, ಅಣ್ಣ ಬಿ.ಎ., ಪ್ಯಾಸು IInd Classಉ .... ಅಪ್ಪಾ ! ಅಕ್ಕ ಬಂದಿದಾಳೆ ....

[ಸಾತುವು ಜೋಲಿಯಲ್ಲಿರುವ ಮಗುವನ್ನು ಎತ್ತಿಕೊಂಡು ಮುದ್ದಿಡುತ್ತಾ "ಏನು ಬೆಳೆದುಬಿಟ್ಟಿಧಾನೆ ಆರು ತಿಂಗಳಲ್ಲಿ" ಎಂದು, ಬೀದಿಬಾಗಿಲನ್ನು ಸಮೀಪಿಸಿ "ಬನ್ನೀ ನಾಗತ್ತೆ ಬೇರೆ ಯಾರೂ ಇಲ್ಲ, ನಾವು ನಾವೇ, ಅಮ್ಮ ಅಡಿಗೇಮನೇಲಿ, ಈಗ ಬಂದ್ಲು" ಎಂದು ಹೇಳಿ ಒಳಬಾಗಿಲನ್ನು ಸಮೀಪಿಸುವಳು]

**ನರಸಮ್ಮ :** (ಪ್ರವೇಶಿಸಿ, ತನ್ನ ಕೈಯಲ್ಲಿ ಕೂಸನ್ನು ಕೊಟ್ಟು ಕಾಲಿಗೆರಗುವ ಸಾತುವನ್ನು ಹರಸುವಳು. ಕೂಸನ್ನು ಪುನಃ ಸಾತುವಿನ ಕೈಯಲ್ಲಿ ಕೊಟ್ಟು ಬೀದಿ ಬಾಗಿಲಕಡೆ ಬಂದು)

ಬನ್ನೀ ಅಮ್ಮಾ ! ಅದೇಕೆ ಅಲ್ಲೇ ನಿಂತಿಧೀರಾ ?

**ನಾಗತ್ತೆ :** (ಪ್ರವೇಶಿಸಿ) ಬೀದಿ ಉದ್ದಕ್ಕೂ ನಡಕೊಂಡು ಬಂದಿವಿ .... .
[ ನಮಸ್ಕಾರ ಮಾಡುವ - ಶಾಮಿ — ಮಗು— ಪುಟ್ಟಾ ಇವರಿಗೆ ]
....ಕಾಲೆಲ್ಲ ಧೂಳು ........ ದೂರದಿಂದ ನಮಸ್ಕಾರ ಮಾಡ್ರಿ ನನ್ನ ಕಂದಗ್ಳಾ .... ಸಾವಿರ ವರ್ಷ ಆಯಸ್ಸೂ .... !

**ನರಸಮ್ಮ :** ಊರಲ್ಲೆಲ್ಲಾ ಸೌಖ್ಯವೆ ?

**ನಾಗತ್ತೆ :** ಏನೋ ದೊಡ್ಡೋರ ಆಶೀರ್ವಾದ. ಆದ್ರೆ ಅತ್ತಿಗೆ ಮಟ್ಟಿಗೆ ಸ್ವಲ್ಪ ದುರ್ಬಲ. ಇನ್ನು ಕೈಕೂಸೊಂದು....ನೋಡಿಕೊಳ್ಳೋರಿಲ್ಲ.... ಆದ್ರೂ ಪಾತು ಅವರ ಅಜ್ಜಿ ಉದ್ಯಾಪ್ನೇಗೆ ಬರಬೇಕೂಂತ ಅವರಪ್ಪ ಬರಕೊಂಡ್ಮೇಲೆ, ಸಾತೂನೂ ಆರ್‌ತಿಂಗ್ಳಾಯ್ತು, ನಿಮ್ಮನ್ನೆಲ್ಲಾ ನೋಡೀ ಅಂತಾ, ಇಬ್ಬರನ್ನೂ ತಲ್ಪಿಸೋಕ್‌ಬಂದದ್ದು ನಾನು ; ಮನೇಲಿ ನೋಡಿಕೊಳ್ಳೋಕೆ ಯಾರೂ ಇಲ್ಲ. ತಿರಿಗೂ ಈ ಮಧ್ಯಾಹ್ನದ ಗಾಡೀಗೆ ಹೊರಟೇಬಿಡಬೇಕು. ಆದ್ರೆ ಏಕಾದಶಿ........ನಿಮ್ಮೂರು ವಿರೂಪಾಕ್ಷ ದೇವರನ್ನ ದರ್ಶನಮಾಡೊ ಪುಣ್ಯ ನನಗಿತ್ತು. ಗುಡೀಗೀಗ್ಲೆ ಹೊರಟರೆ ದೇವಗೆರೆಯಲ್ಲಿ ಸ್ನಾನಾಮಾಡಿ ದರ್ಶನ ಮಾಡಿಕೊಂಡು ಬರೋಕೆ ಆಗತ್ತಲ್ವೆ, ರೈಲು ಹೊರಡೋಷ್ಟುರಲ್ಲೀ?

**ಶಾಮಿ :** ಆಗದೆ ಏನ್ ಅತ್ತೆ....ಈಗಲೇ ಹೊರಟ್ರೆ .

**ನರಸಮ್ಮ :** ಹಯ್ಯೋ, ಬಂದದ್ದಕ್ಕೆ ಒಂದೆರಡುದಿನ ಇರಬಾರದಾಗಿತ್ತೆ! ಆದ್ರೆ ನೀವ್ ಹೇಳೋಹಾಗೆ ನಮ್ಮ ಬೀಗಿತ್ತೀಗೆ ಸ್ವಸ್ಥವಿಲ್ದೇ ಇರೋವಾಗ ನೀವಿಲ್ಲದ್ದು ಅನಾನುಕೂಲವೆ....ಶಾಮೀ! ನಿಮ್ಮ ತಂದೇಗೆ ಹೇಳಿಕೋತೇನೆ, ಅತ್ತೆ ಜೊತೇಗೆ ಹೋಗಿ ಗುಡಿ ತೋರಿಸ್ಕೊಂಡು ಬಂದು ಸೇರು....(ಮೆಲ್ಲಗೆ)....**ಕೊಳದಲ್ಲಿ ನೀನೇನಾದ್ರೂ ಈಜೋದಕ್ ಗೀಜೋದಕ್ ಇಳಿದೀಯಾ, ಹುಷಾರು!**

**ನಾಗತ್ತೆ** : ಹಾಗಾರೆ ಬೇಗ ಹೋಗಿ ಬರ್ತೇನೆ.

**ನರಸವ್ಮ** : ಊಟಕ್ಕೆ........

**ನಾಗತ್ತೆ** : ಊಟವೆಲ್ಲೀದು ನನ್ನ ಹಣೇಬರಹಕ್ಕೆ ? ಏಕಾದಶೀ ಅಂದೆನೆಲ್ಲಾ........ !

**ನರಸವ್ಮ** : ಹಾಗಾದರೆ ಫಲಹಾರಕ್ಕೆ ........

**ನಾಗತ್ತೆ** : ಫಲಾರವೇನು ಪಂಚಾಮೃತವೇನು! ಎರಡು ಬಾಳೆ ಹಣ್ಣು ; .... ಇದ್ರೆ .... ಒಂದು ಬಾಯಿ....

**ಸಾತೂ** : ಹಾಲೂ, ಅಮ್ಮ.. .!

**ನರಸವ್ಮ** : ಅಯ್ಯೋ, ಹಾಲಿಗೇನು ಕಮ್ಮಿ .... ?!

**ನಾಗತ್ತೆ** : ಹಾಗಾರೆ ಬೇಗ ಹೋಗಿ ಬರ್ತೇನೆ....(ಶಾಮಿಗೆ)ಬಾ ಕಂದ!....

(ಶಾಮಿಯೂ ನಾಗತ್ತೆಯೂ ನಿಷ್ಕ್ರಮಣ)

**ಸಾತೂ** : ಅಯ್ಯಯ್ಯೋ, ಹೆಗಲು ಕಚ್ಚಿಬಿಟ್ಟ ! ಹಾಳಾಗ್ಹೋಗಾ .... ಹಲ್ಲೆಲ್ಲಿ ಬಂತು ಇವನಿಗೆ .... ?

**ನರಸವ್ಮ** : ಹೌದೇ ........ ಹೇಳೋಕೆ ಮರ್ತ್ಬಿಟ್ಟೆ, ........ ಅವನ್ನ ಮೊಗುಚಿ ಎತ್ತಿಕೊಳ್ಳೋದರ ಅಪಾಯಾನ. ಹಲ್ಲು ಬರದೇ ಏನು ? ನಾಳೀಗೆ ತುಂಬುತ್ತೆ ಒಂದು ವರ್ಷ .... ನಾಲಕ್ ಹಲ್ಲು ಬಂದಿದೆ!

(ಒಳಕ್ಕೆ ನಿಷ್ಕ್ರಮಿಸುವಳು)

**ಮಗು** : ಒಂದೇ ವರಸೆಯಲ್ಲ, ಎದುರುಬದುರು.... ಭೂಪತಿ ಬಾಯಿಗೆ ಸಿಕ್ಕಿದ್ದೆಲ್ಲ ಕಟಾಯಿಸಿಬಿಡ್ತಾನೆ....ಏಕ್ ಮಾರ್ ದೋ ತುಕ್ಡಾ, ಬಾಯಿಗೆ ಬೆಟ್ಟು ಕೊಟ್ಟು ನೋಡು ಗೊತ್ತಾಗುತ್ತೆ ........ ಅಕೋ ಅಣ್ಣ ಬಂದ ... ....... (ಬೀದಿ ಬಾಗಿಲಿಗೆ ನೆಗೆಯುತ್ತಾ) ಅಣ್ಣಾ ! ಅಕ್ಕ ಬಂದಿದಾಳೆ .... ಏನದು ಕೈಲಿ .... ಗೊತ್ತು ! ಕೂಸಿನ ಅಂಗೀಗೆ .... ಹುಟ್ಟಿದ ಹಬ್ಬ ....ವೆಲ್ವೆಟ್ಟು (Velvet).

[ನಿಷ್ಕ್ರಮಿಸಿದ ಒಂದು ಕ್ಷಣದಲ್ಲಿಯೇ ಅಶ್ವತ್ಥನನ್ನು ಎಳೆದುಕೊಂಡು ಪುನಃ ಪ್ರವೇಶಿಸುವನು]

**ಅಶ್ವತ್ಥ :** ಮೈಲಿನಲ್ಲಿ ಬಂದೆಯಾ ಸಾತೂ .... ?

**ಸಾತೂ:** ಹೂಂ.

**ಅಶ್ವತ್ಥ :** ಜೊತೆ .... ?

**ಸಾತೂ :** ನಾಗತ್ತೆ....ತಿರುಗಿ ಹನ್ನೆರಡು ಘಂಟೆ ರೈಲಿಗೆ ಹೋರ್ಗ್ತಾರೆ. ....ಏಕಾದಶಿ .... ಬಂದದ್ದಕ್ಕೆ ದೇವಗೆರೆಯಲ್ಲಿ ಸ್ನಾನ ಮಾಡಿ ದೇವರ ದರ್ಶನ ಮಾಡಿಕೊಂಡು ಇದೇ ರೈಲಲ್ಲಿ ಹೋರ್ಗ್ತಾರೆ!

**ಅಶ್ವತ್ಥ :** ಅಲ್ವಾಣೆ, ಮಂಕೂ! ನಿಮ್ಮನೇಲಿ ಎಲ್ಲರಿಗೂ ಹುಲಿ ಅಂತೀಯಾ ........ ? ಬಂದದ್ದು ಬಂದಿಧಾಳೆ. ಒಂದೆರಡು ದಿನ ಇಟ್ಕೊಂಡೂ ಊರುಗೀರೆಲ್ಲ ತೋರ್ಸಿ, ಗಿಲೀಟಾಗಿ ಕಳಿಸಿದ್ರೇ ಮುಂದಕ್ಕೆ ಉಪಯೋಗ ಅಲ್ವೆ .... ?

**ಸಾತೂ:** ಅತ್ತೆ ಮೈ ಚೆನ್ನಾಗಿಲ್ಲ. ಕೈಲಿ ಕೂಸು.

**ಅಶ್ವತ್ಥ :** ಮತ್ತೆ ನೀನು ಬಂದದ್ದೇನು....?

**ಸಾತೂ :** ಪಾತೂ ಮನೇಲಿ ಉದ್ಯಾಪ್ನೇಂತ ಬರೆದಿದ್ರು ............... ಮಾಮಲೇದಾರ್ರು....ನೀ ಹೇಳಿದ ಮುಂದಕ್ಕುಪಯೋಗದ ನ್ಯಾಯದ ಮೇಲೆ....ಪಾತೂನ ಕಳಿಸಿದ್ದು. ನನ್ನೋಡಿಸಿದ್ದು ಬೇರೆ ಲೆಕ್ಕಾಚಾರ ....ಪಾತೂ ಯಜಮಾನರು ಫಸ್ಟ್‌ಕ್ಲಾಸ್. ಮುಂದಕ್ಕೆ ಬಂದು ಕುಟುಂಬಕ್ಕೆ ಯಶಸ್ಸು ತರೋದು ಘಟ್ಟ....ಇವರು ಫೇಲು.

**ಅಶ್ವತ್ಥ :** ಯಾಕೇ....?! ನಿನ್ನ ಗಂಡ ಒಳ್ಳೆ bright fellowಓ....? ಯಾಕೆ lazyನೇ? ಓದೋದಿಲ್ವೇ?

**ಸಾತೂ:** (ಖಿನ್ನ ಧ್ವನಿಯಿಂದ) ಓದೋಕೆಲ್ಲಿ ಅವಕಾಶ? ಬೆಳಗಿನಿಂದ ಸಂಜೆ ವರಿಗೂ ಹೂ ತರ್ರೋದು, ಹಾಲ್ ತರೋದು, ಆಸ್ಪತ್ರೆ ಮಾರ್ಕೆಟ್ಟು ಈ ಬಾಬತ್ತುಗಳಿಗೆಲ್ಲ ಓಡಿಸ್ತಿರ್ತಾರೆ. ಬಿಡುವಿದ್ರೆ ಹಂಡೆ

ತುಂಬೋದು, ಬಾವೀ ನೀರು ತಂದು! ಇನ್ನೋದೋದ್ ಯಾವಾಗ ....? ಮುಂದಕ್ಕೇನೂ ಪ್ರಯೋಜನ ಇಲ್ಲ ; ಇನ್ನು ಸೊಸೆಯೊಬ್ಬಳು ಯಾಕೆ ಸುಮ್ಮನೆ ತಿಂದುಕೊಂಡು ಇರಬೇಕೂಂತಾ........ಅದೆಲ್ಲಾ ದೊಡ್ಡ ಕಥೆ ಅಣ್ಣಾ........ಆದರೆ ನೀನು ಗಿಲೀಟ್ ಅನ್ನು ತ್ಲೊ ಜ್ಞಾಪಕಕ್ಕೆ ಬರುತ್ತೇ....ಅದರ ಬೆಲೆ ಜಾಸ್ತಿಯಾಗುತ್ತೋ ಏನೋ ಕಾಣೆ........ಅದೇನು Velvetಉ ಅಂದನಲ್ಲ ಮಗೂ........?

**ಅಶ್ವತ್ಥ :** (ಕೈಯಲ್ಲಿರುವ ಕಟ್ಟನ್ನು ಬಿಚ್ಚಿ ಚಮುಕಿ ಹಾಕಿದ ಒಂದು ಮಖಮಲ್ ಕುಲಾನಿಯನ್ನೂ ರೇಷ್ಮೆಯ ಅಂಗಿಯ ಷರಾಯಿಯನ್ನೂ ಸಾತು ಕೈಗೆ ಕೊಡುತ್ತ) ಜಾಕೆಟ್ ಗೀಕೆಟ್ ನಿನಗೇನಾದ್ರೂ ಬೇಕಾದ್ರೆ ಈಗ್ಲೆ ಮಾಡಿಸ್ಕೊ.... ರೇಷ್ಮೆ ಗೀಷ್ಮೆ ಬಟ್ಟೆಯೆಲ್ಲಾ ಸ್ಟಾಕ್ ಹೆಚ್ಚಾಗಿ, ಬಲು ಅಗ್ಗ! ಬೆಲೆ ಅನ್ಯಾಯ ಇಳಿದುಹೋಗಿದೆ !

**ಸಾತೂ :** ಹಾಗಾರೆ ನನ್ಗ್ಯೇಚ್ಕೆ........

**ಅಶ್ವತ್ಥ :** ಏನದು ಹೇಳು........ರೇಷ್ಮೆ........

**ಸಾತೂ :** ರೇಷ್ಮೆ ಅಂತೀಯಲ್ಲ! ನಾಗತ್ತೆ........ಪಾಪ........ನಾರ್‌ಮಡಿ ನಾರ್‌ಮಡಿ ಅಂತ ಬಡುಕೊಳ್ಳತಾಳೆ. ಅವರ್‌ಮನೇಲಿ ಕಿವೀಗೆ ಹಾಕ್ಕೊಳ್ಳೋದಿಲ್ಲ. ಇಲ್ಲಿ... ನೀ ಹೇಳೋಹಾಗೆ ಬಲು ಅಗ್ಗವಾಗಿದ್ರೆ, ಅಮ್ಮನೂ ಅಪ್ಪನೂ ಒಪ್ಪೋಪಕ್ಷಕ್ಕೆ, ಹದ್ನಾರುಮೊಳವಾದ್ರೂ ಇದ್ದೇ ಇರಬೇಕು....ಹದ್ನೆಂಟು ಉತ್ತಮ.. .ಏನು ಬೆಲೆಯಾಗುತ್ತೋ....?

**ಅಶ್ವತ್ಥ :** Brilliant idea ಸಾತೂ! Bribery.........Corruptionಉ ................ಹೆದರಬೇಡ ಹತ್ತು ಹನ್ನೆರಡು ರೂಪಾಯಲ್ಲಿ ಅಡಗಿ ಹೋಗುತ್ತೆ. ಅಪ್ಪನಿಗೆ ಹೇಳಿ ಹೇಗಾದರೂ ಒಡಂಬಡಿಸ್‌ತೇನೆ.... ನೀನ್ ಹೇಳೋಹಾಗೆ ಮಧ್ಯಾಹ್ನದ ಗಾಡೀಲೆ ತಿರಿಗಿ ಹೊರ್ಡೋ ದಾದ್ರೆ........ಈಗಲೇ ಹೋಗಿಬರಬೇಕು ಅಂಗಡೀಗೆ........

[ಕೂಸಿನ ಹೊಸ ಬಟ್ಟೆಗಳನ್ನೆಲ್ಲಾ ಸಾತುವಿನ ಕೈಯಲ್ಲಿಟ್ಟು ಒಳಗೆ ನಿಷ್ಕ್ರಮಿಸುವನು.]

**ಸಾತೂ:** ಅವ್ಮಾ! ಕೂಸಿಗೆ ಹೊಸದಾಗಿ ಕುಲಾವಿ ಬಂದಿದೆ. ಎಲ್ಲಿ ಇಡೋದು?

**ಮಗು:** ಇಲ್‌ಕೊಡಕ್ಕಾ, ನನ್‌ಪೆಟ್ಟಿಗೇಲಿಡ್‌ತೀನಿ.

**ಪುಟ್ಟಾ:** ಬೇಡಕ್ಕಾ! ನಾನ್ ಇಟ್ಕೊಂಡಿರ್ತೀನಿ........ಯಾವುದಕ್ಕೂ ಇವನೇ.. . ಮಹಾ........!

**ಸಾತೂ:** ಜಗಳ ಆಡಬೇಡಿ!

**ನರಸಮ್ಮ:** ಇಲ್ಲಿ ತಗೊಂಬಾ ಸಾತೂ...........ಅಲ್ಲೆಲ್ಲಾದ್ರೂ ಇಟ್ಟರೆ ಇಬ್ಬರು ಫಟಿಂಗ್ರೂ ಕಿತ್ತಾಡಿ ಚಿಂದಿ ಮಾಡಿ ಇಟ್‌ಬಿಡ್ತಾರೆ.

(ಸಾತೂ ಕೂಸನ್ನು ಜೋಲಿಯಲ್ಲಿ ಹಾಕಿ "ಸ್ವಲ್ಪ ಆಡಸ್ತಿರೋ ಮಗೂ" ಎಂದು ಹೇಳಿ ಒಳಕ್ಕೆ ನಿಷ್ಕ್ರಮಣ)

**ಅಶ್ವತ್ಥ:** (ಪ್ರವೇಶಿಸುತ್ತಾ) ಎಲ್ಲಾ ಸರ್‌ಹೋಯ್ತು ಸಾತೂ........... ತಂದ್‌ಬಿಡ್‌ತೀನಿ.

**ಮಗು:** ಎಲ್ಲಿ ಹೋಗ್ತೀಯ ಅಣ್ಣಾ ..?

**ಪುಟ್ಟಾ:** ಹಾಗ್ ಕೇಳ್ಬಾರ್ದೂ ಅಂತ ಎಷ್ಟು ಸರ್ತಿ ಹೇಳಿದ್ಲಮ್ಮ! ನಾನ್ಕೇಳೋದಿಲ್ಲ ಎಲ್ಲಿಹೋಗ್ತೀಯಾಂತ; ನೀನೇ ಹೇಳಣ್ಣ ........

**ಅಶ್ವತ್ಥ:** ತಿರುಗಿ ಬಂದ್ಮೇಲೆ ಗೊತ್ತಾಗುತ್ತೆ.

(ಬೀದಿ ಬಾಗಿಲಿನಿಂದ ನಿಷ್ಕ್ರಮಣ)

**ನರಸಮ್ಮ:** (ಒಳಗಿನಿಂದ) ಏನ್‌ಮಾಡ್‌ತಿದೀಯೋ ಮಗೂ........?

**ಮಗು:** ಜೋಲೀ ತೂಗ್‌ತಿದೇನಮ್ಮ.

**ನರಸಮ್ಮ:** ನಿನ್ನ ಜವಾಬ್ದಾರಿ ಪುಟ್ಟಾಗೊಪ್ಪಿಸಿಬಿಟ್ಟು ............... ನಿವ್ ತಂದೇಗೇನ್‌ಬೇಕ್ ಕೇಳು. ಶಾಮಿಯಾನೂ ಇಲ್ಲ ಮನೇಲಿ.

(ಮಗು ನಿಷ್ಕ್ರಮಣ; ಪುಟ್ಟಾ ಜೋಲಿಯನ್ನಾಡಿಸುತ್ತಿರುವಳು)

**ಪುಟ್ಟಾ:** (ಹಳೆಯ ಒಂದು ಜೋಗುಳವನ್ನು ಹಾಡುತ್ತಾ, ಬೀದಿ ಬಾಗಿಲಕಡೆ ತಿರುಗಿ)

ಹಯ್ಯೊ, ಇಷ್ಟುಭೇಗ ಬಂದ್‌ಬಿಟ್ರೀ ಗುಡೀಗೆ ಹೋದವ್ರು !

[ಪ್ರವೇಶ: ನರಸಿಂಹಯ್ಯ ಪಾರ್ವತಮ್ಮ ಹೊರಬಾಗಿಲಿಸಿಂದ]

ಅಯ್ಯಯ್ಯೋ ಯಾರೋ ಹೊಸಬ್ರು! (ಗಟ್ಟಿಯಾಗಿ) ಅಮ್ಮಾ, ಯಾರೋ ಬಂದಿದಾರೆ!

**ನರಸಮ್ಮ:** (ಪ್ರವೇಶಿಸಿ) ನಿಮ್ಮ ತಂದೇನ ಕೂಗ್‌ಹೋಗೆ. ಬನ್ನೀಮ್ಮಾ ಒಳಗೆ! (ಪಾರ್ವತಮ್ಮನು ನರಸಮ್ಮನನ್ನು ಸಮೀಪಿಸುವಳು)

**ನರಸಿಂಹಯ್ಯನು:** ("ನಾನು ಜಗ್ಲೀಮೇಲೆ ಕೂತಿರ್ತೇನೆ" ಎಂದು ಪತ್ನಿಗೆ ಹೇಳಿ ಬೀದಿ ಬಾಗಿಲಿನ ಹೊರಗೆ ನಿಷ್ಕ್ರಮಿಸುವನು)

[ಒಳಗಿನಿಂದ ಬಂದ ಪತಿಗೆ ನರಸಮ್ಮನು, ನರಸಿಂಹಯ್ಯನು ಹೊರಗೆ ಕಾದಿರುವುದನ್ನು ವಿವರಿಸುತ್ತಲೆ ರಂಗಣ್ಣನು ಬೀದಿ ಬಾಗಿಲಿನಿಂದ ನಿಷ್ಕ್ರಮಿಸುವನು.]

**ನರಸಮ್ಮ:** ಆ ಚಾಪೆ ಇಲ್ಲಿ ತಾರೆ ಪುಟ್ಟಾ........! (ಪುಟ್ಟಾ ತಂದ ಚಾಪೆಯನ್ನು ಹಾಸಿ) ಕೂತ್ಕೊಳ್ಳೀ ಅಮ್ಮಾ.

**ಪಾರ್ವತಮ್ಮ:** ಹುಡುಗನ ಬಿ.ಎ., ಆಯಿತಂತೇ........?

**ನರಸಮ್ಮ:** ಏನೋ ದೊಡ್ಡೋರ ಕೃಪೆಯಿಂದ ತಪ್ಪಿಸ್ಕೊಂಡ.

**ಪಾರ್ವತಮ್ಮ:** ಮುಂದಿನ ಯೋಚ್ನೆ?

**ನರಸಮ್ಮ:** ಯೋಚ್ನೆಯೇನು...............ಯಾವದಾದ್ರೂ ಕೆಲಸಕ್ಕೆ ಸೇರಿಕೊಳ್ಳೋದೆ. ಆದರೆ ಬಿ.ಎ.ಗಳಿಗೆ ಈ ಕಾಲ್ದಲ್ಲಿ ಬೆಲೆಕಮ್ಮಿ, ಕೆಲಸ ಸಿಕ್ಕೋದ್‌ಕಷ್ಟ, ಅಂತಾರೆ ಇವರು. ಅವನೇನೋ ಲಾಯರಿಗೆ ಮದ್ರಾಸಲ್ಲಿ ಓದಬೇಕೂಂತಾನೆ....ಆದ್ರೆ ಅಷ್ಟರಮಟ್ಟಿಗೂ ಸಲ್ಲಿಸೋಕೆ ಇಲ್ಲಿ ಚೈತನ್ಯವಿಲ್ಲ....ಅದೇಯೋಚ್ನೆ....ನಿಮ್ಮ ಹುಡುಗ ಬಿ.ಎ.,ಗೆ ಓದ್‌ತಿಥಾನಂತೆ. ನಮ್ಮ ಹುಡುಗ ಕಂಡಿದ್ದನಂತೆ, ಕಾಲೇಜಿನಲ್ಲಿ ....ಘಟ್ಟಿಗಾ ಅಂತಾನೆ.

**ಪಾರ್ವತಮ್ಮ**: ಜೋಯಿಸ್ರು ನಮ್ಮ ವೆಂಕೂ ಮದ್ವೆ ವಿಷಯದಲ್ಲಿ ನಿಮ್ ಹುಡುಗನ ಜಾತಕದ ಮಾತು ಎತ್ತಿದ್ರೂ....ಆದ್ರೆ ನಿಮ್ಮ ಅಭಿಪ್ರಾಯ.... ?

**ನರಸಮ್ಮ**: ನನ್ನ ಅಭಿಪ್ರಾಯವೇನು!....ಯಾವ ವಿಷಯದಲ್ಲೂ ಮನೆ ಗಂಡಸರು ಹ್ಯಾಗೆ ನಿಶ್ಚಯಿಸ್ತಾರೋ ಹಾಗೆ.

**ಪಾರ್ವತಮ್ಮ**: (ಕೋಣೆಯನ್ನು ಮೇಲೂ ಕೆಳಗೂ ನೋಡಿ) ಮನೆ ಸ್ವಂತ.... ಅಲ್ವೇ.... ?

**ನರಸಮ್ಮ**: ಹೂಂ! ಪುರಾತನಕಾಲದ್ದು. ಚಳಿಗಾಲಕ್ಕೆ ಸರಿ. ಬೇಸಿಗೇಗೆ ಸ್ವಲ್ಪ ಕಷ್ಟ.

**ಪಾರ್ವತಮ್ಮ**: ಸ್ವಂತ ಅಂದ್ರೇನು, ಭೋಗ್ಯದ ಗಲಾಟೆ ಏನೂ ಇಲ್ಲವಲ್ಲ ?

**ನರಸಮ್ಮ**: (ಮುಖದಲ್ಲಿ ಮೊದಲು ಹೊಳೆದ ವಿಸ್ಮಯವನ್ನು ಅಡಗಿಸಿಕೊಂಡು) ನನಗೆ ತಿಳಿದ ಮಟ್ಟಿಗೆ ಹಾಗೇನೂ ಇಲ್ಲ.

**ಪಾರ್ವತಮ್ಮ**: (ಮಗುವನ್ನು ಸೂಚಿಸಿ) ಎರಡನೇ ಮಗನೋ ?

**ನರಸಮ್ಮ**: ಅಲ್ಲ! ಇವನಿಗೂ ಮೂರು ವರ್ಷ ದೊಡ್ಡೋನು ಇಧಾನೆ ಒಬ್ಬ...

**ಪಾರ್ವತಮ್ಮ**: (ಜೋಲಿಯನ್ನು ಸೂಚಿಸಿ) ಇವಳಿಗೆಷ್ಟು ತಿಂಗಳು.... ?

**ನರಸಮ್ಮ**: (ಮುಗುಳುನಗೆಯಿಂದ ಕೂಸನ್ನೆತ್ತಿಕೊಂಡು) **ಇವಳಲ್ಲ**....... ಇವನು ! ನಾಳೆಗೆ ಒಂದುವರ್ಷ ತುಂಬುತ್ತೆ....

• • •

**ಪಾರ್ವತಮ್ಮ**: ಇದೂ ಗಂಡೇ!........ಹಾಗಾರ್ ನಾಲಕ್ಕ್ ಗಂಡು ಮಕ್ಕಳೂ.... ! ? ಮನೇಗೆ ನಲ್ಲೀ ಇಧೆಯೇ ನೀರಿಗೆ.... ?

**ನರಸಮ್ಮ** : ಇಲ್ಲ. ಸೇದೋ ಭಾವಿ....ಸೀ ಸೀರು. ಆದರೆ ಸೀರು ಬಹಳ ಕೆಳಗೆ.

**ಪಾರ್ವತಮ್ಮ** : (ಅರ್ಧ ಆತ್ಮಗತ) ಪಂಪು....ಪರವಾ ಇಲ್ಲ (ಪಳುತ್ತಾ) ಮನೆ ನೋಡಬಹುದೇ ?

**ನರಸಮ್ಮ** : ಅದಕ್ಕೇನು! ಲೋ! ಮಗೂ! ಒಳಗೆ ಬರಬಹುದು ಅಂತ ನಿಮ್ ತಂದೇಗೆ ಹೇಳೋ! ಈಗಲೇ ಅರ್ಧ ಮನೇನೋಡಿದಹಾಗೇ! ಇನ್ನೆರಡು ಕೋಣೆ, ಚಿಕ್ಕದೊಂದು ಹಜಾರ....ಸೀರ್ ಮನೆ....ಹಿತ್ತಲ ಕಡೆ ಒಂದಿಷ್ಟು ತೋಟ ... ತರಕಾರಿ, ಪೂಜೆ ಹೂವಿಗೆ. ಬನ್ನಿ, (ಒಳಬಾಗಿಲನ್ನು ಸಮೀಪಿಸಿ) ಬನ್ನಿ.

[ಪಾರ್ವತಮ್ಮನೂ, ಕೂಸನ್ನೆತ್ತಿಕೊಂಡು ನರಸಮ್ಮನೂ ಒಳಬಾಗಿಲಿಸಿಂದ ನಿಷ್ಕ್ರಮಣ. ಪುಟ್ಟಾನೂ ಹಿಂಬಾಲಿಸುವಳು. ಮಗೂ ಬೀದಿಬಾಗಿಲಿಸಿಂದ ನಿಷ್ಕ್ರಮಣ. ರಂಗಣ್ಣ, ನರಸಿಂಹಯ್ಯನವರ ಪ್ರವೇಶ.]

**ರಂಗಣ್ಣ** : ಕೂತುಕೊಳ್ಳಿ. ನಿಮ್ಮ ವೆಂಕು ಏನು ನಮಗೆ ಗೊತ್ತಿಲ್ಲದ್ದಲ್ಲ. (ಕುರ್ಚಿಯನ್ನು ಸೂಚಿಸಿ, ನರಸಿಂಹಯ್ಯನು ಕೂಡುತ್ತಲೆ, ತಾನೊಂದು ಬೆಂಚಿನ ಮೇಲೆ ಕೂಡುವನು)

ನಮ್ಮ ಸಾತೂ ಸ್ಕೂಲಿಗೆ ಹೋಗ್ ತಿದ್ದಾಗ—ಆಗ ನಿಮ್ಮ ಹುಡುಗಿ ಚಿಕ್ಕ ಕ್ಲಾಸೂ. ನಮ್ಮ ಮನೇಗೆ ಬರ್ತಿದ್ಲು. ನಮ್ಮನೇಲಿ ಎಲ್ಲರಿಗೂ ಇಷ್ಟ. ಆದರೆ, ನೋಡಿ! ಆಗಾಗ್ಗೆ ಬರೋದಕ್ಕೂ ಮನೇಗೆ ಬಂದು ಖಾಯಂ ಆಗಿರೋದಕ್ಕೂ ಅಷ್ಟಿಷ್ಟಲ್ಲ ವ್ಯತ್ಯಾಸ! ನಮ್ಮ ಸಾತೂನ ಕೊಟ್ಟಿರೋ ಮನೇಗೇ ಮಾಮುಲೆ ರಾಮಣ್ಣೋರ ಮಗಳ್ನೂ ಕೊಟ್ಟಿರೋದು. ಆದ್ರೆ ನಮ್ಮ ಬೀಗರು, ಹಿರಿಯಣ್ಣಯ್ಯನೋರ ಸಂಸಾರ, ಸಾಧಾರಣ. ಆದರೆ ಸೊಸೆ ಬಂಗಲೇಲಿ ಬೆಳೆದ ಮೊಗೂ! ಐಶ್ವರ್ಯವಂತರ ಮನೇಲಿ ಹುಟ್ಟಿಬೆಳೆದ ಹುಡಿಗೀರು....ಚಿಕ್ಕ ಅಂತಸ್ತಿನೋರ ಮನೇಲಿ ಸಂಸಾರ ಅಂದ್ರೆ....ಮನಸ್ಸಿಗೆ ಆಲಸ್ಯವಾಗುತ್ತೆ. ನಮ್ ಹುಡುಗೀಗೇನೋ ಸರಿಹೋಗುತ್ತೆ. ಆದ್ರೆ ರಾಮಣ್ಣೋರ ಮಗಳು ಬಹಳ ನೊಂದುಕೋತಾಳೆ ಅಂಬೋದು ತಿಳಿದೇ ನಾನು ನಿಮ್ಮ ಹುಡುಗೀ ವಿಷಯದಲ್ಲಿ ಹಿಂಜರಿಯೋದು. ಇದುವರಿಗೂನೂ

ನಮ್ಮ ಮನೆ ಲಗ್ನಗಳ್ನೆಲ್ಲ ನಮ್ಮ ನಮ್ಮ ನೆಂಟರಲ್ಲೇ ಸರಿಪಡಿಸಿಕೊಳ್ತಾ ಬಂದದ್ದರಿಂದ್ಲೋ ಏನೋ ಕಾಣೆ, ವರದಕ್ಷಿಣೆ ನಮ್ಮ ಹುಡುಗೀರ ಮದುವೇಗೆ ಯಥಾಶಕ್ತಿ **ಕೊಟ್ಟಿದ್ದೇವೇಹೊರ್ತು ತಗೊಂಡದ್ದಿಲ್ಲ.** ನಮ್ಮ ಹುಡುಗನಿಗೂ ಬಿ.ಎ., ಆಗಿಹೋಯಿತು. B.L.,ಗೆ ಆಶೇಪಡ್ತಿದ್ದಾನೆ. ನೀವೂ ಲಾ (Law)ನೇ ಉತ್ತಮ ಅಂತ ಉತ್ಸಾಹಿಸ್ತೀರಾ... ? ಮದುವೆ ಆದ್ಮೇಲೆ ನಿಮ್ಮ ಅಳಿಯನ ವಿಷಯದಲ್ಲಿ ನೀವು ಮಾಡೋ ಯೋಚನೇಗೆ—ನಿಮಗೊಂದು ಹಕ್ಕಿರುತ್ತೆ. ಆ ವಿಷಯಾನ ಮದುವೆ ಮುಂಚೆ ಒಂದು conditionಆಗಿ ಮಾಡೋದಕ್ಕೆ ನನಗೆ ಇಷ್ಟವಿಲ್ಲ. ಅವನು ಕೆಲಸಕ್ಕೆ ಸೇರಿದರೇನೆ ಆಗ್ಲಿ, ಇಲ್ಲ ಮುಂದಕ್ ಲಾಯರಿ ಆದ್ರೆತಾನೆ ಆಗ್ಲಿ, ಬೇರೆ ಸಂಸಾರ ಬೇರೆ ಇಡೋದಿಲ್ಲ ಅವ್ನು. ನಮ್ಮೊಂದಿಗೇ ಇರ್ತಾನೆ; ಅವ್ನು, ಮುಂದಕ್ಕೆ ಅವನ ಹೆಂಡತೀನೂ ; ನನಗೋ Pensionಗೆ ವಯಸ್ಸಾಗತಾ ಬಂತು. ಅಲ್ಪಸ್ವಲ್ಪ ಭೂಮಿ ಕಾಣೀನೂ ಇಧೆ. . ನನ್ನ ವಾರ್ಧಕ್ಯದಲ್ಲಿ ನಾನೂ ನನ್ನ ಹೆಂಡತೀನೂ, ಇರೋ ಅಲ್ಪಸ್ವಲ್ಪ ಆಯಸ್ಸನ್ನ ಮಕ್ಕಳೊಂದಿಗೆ ಸಂತೋಷವಾಗಿ ಕಳೀಬೇಕೆಂಬೂದೇನೆ ನಮ್ಮ ಇಚ್ಛೆ. ಭಾಗ್ಯವಂತರ ಮನೇಲಿ ಬೆಳೆದು....ಥಟ್ಟನೆ ನಮ್ಮ ಮನೇಗೆ ಬರೋದು ಅಂದರೆ, ಮನಸ್ಸು ಬೇಸರವಾಗಬಹುದು....ನಿಮ್ಮ ಹುಡುಗೀಗೆ. ಮತ್ತ್ಯಾವ ವಿಷಯದಲ್ಲೂ ನನಗೆ ಅಭ್ಯಂತರವಿಲ್ಲ—ಈ ಮದುವೆ ವಿಷಯದಲ್ಲಿ. ಆದರೆ ಒಂದು condition-ಉ ! ನಿಮ್ಮ ವೆಂಕೂ ನಮ್ಮ ಮನೇಲಿ ಹದಿನೈದು ದಿವಸವಾದರೂ ನಮ್ಮೊಂದಿಗೆ ಇದ್ದೇ ಬಿಡಬೇಕು....ಇದ್ದು ನಮ್ಮೊಂದಿಗೆ, ನಮ್ಮ ಸಂಸಾರದ ಸುಖದುಃಖಗಳ್ನ ಗಮನಿಸಿ ಅನುಭವಿಸಿ, ಆಮೇಲೆ ಅವಳೇ ಒಪ್ಪಿದಳು ಅಂದ್ರೆ, ಮುಂದಕ್ಕೆ ಅವಳಿಗೂ ಬೇಸರ ಬಾರದೆ ಇರೋದ್ರಲ್ಲಿ ಸಂದೇಹವಿಲ್ಲ. ಇದೊಂದೇ ನನ್ನ ಕೋರಿಕೆ. ಮಿಕ್ಕ ಅಂಶಗಳೆಲ್ಲಾ ನಿಮ್ಮ ಚಿತ್ತ. ಈ ವಿಷಯದಲ್ಲಿ ನನ್ನ ಗೃಹಿಣಿಯ ಅಭಿಪ್ರಾಯವೂ, ನಮ್ಮ ಹುಡುಗನ ಅಭಿಪ್ರಾಯವೂ, ಇದೇ. ಜೋಯಿಸರು ನಮ್ಮ ಹುಡುಗನ ಜಾತಕ ಕೇಳೋವಾಗ್ಲೆ ನಾವು ಮಾತಾಡಿ ತೀರ್ಮಾನಿಸಿ ಇಧೇವೆ.

**ನರಸಿಂಹಯ್ಯ** : ನೀವ್ ಹೇಳಿದ್ದ್ ಒಪ್ದೆ ! (ಕಿಸೆಯಲ್ಲಿದ್ದ ವಾಚನ್ನು ತೆಗೆದು ನೋಡಿ) ಕೋರ್ಟಿಗೆ ಹೊತ್ತಾಯಿತು. ಇನ್ ಮನೇಗೆಹೋಗಿ ಊಟಾವಾಡಿ ಹೊರಡಬೇಕು....ನಮ್ಮಾಕೆ ...

**ರಂಗಣ್ಣ** : (ಗಟ್ಟಿಯಾಗಿ) ಪುಟ್ಟಾ !...(ಬರುತ್ತಲೂ) ಕಾದಿದಾರೆ ಅಂತ ಹೇಳು, ನಿಮ್ಮಮ್ಮನಿಗೆ.... (ಪುಟ್ಟಾ ನಿಷ್ಕ್ರಮಣ)....

[ಪಾರ್ವತಮ್ಮನೂ, ನರಸಮ್ಮನೂ ಒಳಗಿನಿಂದ ಪ್ರವೇಶಿಸುತ್ತಿರುವಾಗ ಹೊರಕ್ಕೆ ರಂಗಣ್ಣ, ನರಸಿಂಹಯ್ಯ ನಿಷ್ಕ್ರಮಿಸುವರು]

**ನರಸಮ್ಮ** : ಸಾತೂ ! ಭರಣಿ ತಕ್ಕೊಂಬಾ.

(ಸಾತೂ ಬಂದು ಭರಣಿಮುಚ್ಚಳವನ್ನು ತೆಗೆದು ತಾಯಿಯ ಕೈಗೆ ಕೊಡುವಳು.)

**ನರಸಮ್ಮ** : ( ಭರಣಿಯನ್ನು ಪಾರ್ವತಮ್ಮನಿಗೆ ನೀಡುತ್ತಾ ) ಮಗಳು ! ಈವತ್ತು ತಾನೆ ಬಂದಳು, ಗಂಡನಮನೆಯಿಂದ.

**ಪಾರ್ವತಮ್ಮ** : (ಕುಂಕುಮನ್ನಿಟ್ಟುಕೊಳ್ಳುತ್ತಾ) ಮಾಮಲೆ ರಾಮಣ್ಣೋರ ಮಗಳ್ನೂ ನಿಮ್ಮಗಳ್ನೂ ಒಂದೇ ಕಡೆ ಅಲ್ವೇ ಕೊಟ್ಟಿರೋದು ?

**ನರಸಮ್ಮ** : ಹೌದು. . ಇವಳ ವಾರಗಿತ್ತೀನೂ ಬಂದಿದಾಳೆ ತೌರ್ಮನೆಗೆ.

**ಪಾರ್ವತಮ್ಮ** : ಹೌದು, ಹೇಳಿಕೊಂಡ್ರು ಯಾರೋ........ ನಾನು ಬರ್ತೇನಮ್ಮ. ಯಾವ ವಿಷಯಕ್ಕೂ ಯೋಚಿಸಿ ಹೇಳ್ತೇನೆ ನಿಮಗೆ.

**ನರಸಮ್ಮ** : ಹಯ್ಯೋ ಬಿಡಿ ಅಂದ್ರೆ ! ಮನೆ ಗಂಡಸರಿಗೆ ತಿಳಿದರೆ ಸಾಕು....[ಪಾರ್ವತಮ್ಮನ ನಿಷ್ಕ್ರಮಣ]....ಇದೇನ್ ಇಷ್ಟು ಧೋರಣೆ ಈಕೇಗೆ ಇವ್ರೊತ್ತೂ .....ಆಗಾಗ್ಗೆ ಅಲ್ಲಲ್ಲೇ, ಅರಶಿನಕುಂಕುಮಕ್ಕೆ, ಅದಕ್ಕೆ ಇದಕ್ಕೆ, ಕಂಡಿದೇನೆ ಈಕೇನ !....ಎಷ್ಟು ನಯ,...ಎಷ್ಟು ಗಂಭೀರ, ಅಂತ ತಿಳುಕೊಂಡಿದ್ದೆ ! ಈಗ ಯಾವತ್ತೂ ಇಲ್ಲದ ಬಿಂಕ ಈವತ್ತೇನುಬಂತೂ... ? ಮನೆ ಸ್ವಂತಾನೆ, ಅನ್ತಾಳೆ... ಭೋಗ್ಯದ ಗಲಾಟೆ ಉಂಟೆ ಅಂತ ಕೇಳಿದ್ದು....ಒಂದು ಇಂಗ್ಲೀಷ್ ಮಾತು

ಹಿಂದೆ ಆಡಿದ್ದಿಲ್ಲ. ಈಗ, ಭಾವೀಗೆ ಪಂಪು ಗಿಂಪು ಅಂದ್ಲು! ಇನ್ನ್ನಾಲದ್ದಕ್ಕೆ ಪಿತ್ರಾರ್ಜಿತ ಆಸ್ತಿ ಏನಿಥೆ ಅಂತ ಕೇಳಿದ್ಲು! ಇನ್ನುಕೊನೇಗೆ ನಾಲಕ್ಕ್ ಗಂಡು ಮಕ್ಕಳೆ ನಿಮಗೇ ಅಂದ್ಲಲ್ಲ ... ? ಅರ್ಥವಾಗಲಿಲ್ಲ ನನಗೆ.... !

**ಸಾತೂ :** ನನಗರ್ಥವಾಗುತ್ತೆ ಅಮ್ಮ! ಇದೆಲ್ಲ ಸಹವಾಸ ದೋಷ. ಇವರೇನ್ ಮನೇ ಬಿಟ್ಟು ನೆಟ್ಟಗೆ ಇಲ್ಲಿಗೆ ಬಂದ ಹಾಗಿಲ್ಲ. ಇವರ ಮನೆ ಕೃಷ್ಣರಾಜ ಪೇಟೇಲಿ. ನಾವೂ ಪಾತೂ ಮನೆ ಬಿಟ್ಟುಬರ್‍ತ್ತಿದ್ದಾಗ extension ಕಡೇನೇ ಹೋಗ್‍ತಿದ್ರು; ನೋಡಿದ್ವಿ! ಅಲ್ ಪಾತೂ ಮನೇಗೆ ಹೋಗಿ ಪಾತೂ ಅಣ್ಣ ಕಿಟ್ಟೀನ ವಿಚಾರ್ಸಿ ತಿಳಕೊಳ್ಳೋ ಸಂಭ್ರಮದಲ್ಲಿ, ಪಾತೂ ತಾಯಿ ಧೋರಣೆ-ಬಿಂಕ ಸೋಕಿದೆ, .... ಅಂತ ಕಾಣುತ್ತೆ........ ಆದರೆ ........

**ನರಸಮ್ಮ :** ಸಾತೂ ದೊಡ್ಡೋರ ಮಾತು **ನಿನ್**ಗ್ಯಾಕೆ .... .... .... (ಬೀದೀ ಬಾಗಿಲ ಕಡೆ ಕಿವಿಗೊಟ್ಟು) ಆಕೋ! ಗುಡಿಯಿಂದ ಅವರು ಬಂದ ಹಾಗಿದೆ.

**ರಂಗಣ್ಣ :** (ಹೊರಗಿನಿಂದ ಪ್ರವೇಶಿಸಿ) ಬನ್ನಿ! (ನಾಗತ್ತೆಯೂ ಶಾಮಿಯೂ ಪ್ರವೇಶಿಸುವರು) ಅವಸರವೇನೂ ಇಲ್ಲ. ರೈಲಿಗಿನ್ನೂ ಅರ್ಧ ಗಂಟೆ ಇಥೆ. ಬಂದದ್ದಕ್ಕೆರಡು ದಿನ ಇರಬಹುದಾಗಿತ್ತೊ, ಅದರೆ ಅಲ್ಲಿ ಮನೆಯಲ್ಲಿರೋ ಅನಾನುಕೂಲ ಇವಳು ಹೇಳಿದ್ಲು. ಈ ಸಮಯದಲ್ಲಿ ಸಾತೂನ ಅಲ್ಲೇ ಇಟ್ಕೋಬಹುದಾಗಿತ್ತೊ .... ಕೆಲಸಗಿಲ್ಸಕ್ಕೆ ....

**ನಾಗತ್ತೆ :** ಏನು ಮಹಾ ಕೆಲಸ! ಒಬ್ಬಳು ನೋಡಿಕೊಳ್ಳೋ ಕೆಲಸ.... ನನ್ನ ಕೈಲಿ ಆಗದ ಕೆಲಸಾ .... ? ಸಾತೂನೂ ನಿಮ್ಮನ್ನೆಲ್ಲಾ ನೋಡಿ ಆರ್ ಏಳ್ ತಿಂಗಳಾಗಿತ್ತೊ. ಸ್ವಲ್ಪದಿನ ಇಲ್ಲೇ ಇರ್ಲಿ ಅಂತ ಕರಕೊಂಡು ಬಂದದ್ದು. ನಿಮ್ಮ ಅಳಿಯನಿಗೆ ಪಾಪ ಈ ಸಾರ್‍ತಿ ಪ್ಯಾಸಾಗಲಿಲ್ಲ. ಆದರೇನು, ಚಿಕ್ಕವಯಸ್ಸು. ಒಂದು ವರ್ಷ ಹಿಂದು ಮುಂದಾದ್ರೇನೂ ಪರವಾ ಇಲ್ಲ, ಅಂದ, ನಮ್ಮ ಅಣ್ಣ .... ರೈಲಿಗೆ ಅವಸರವಿಲ್ಲವೆ ?

**ನರಸಮ್ಮ :** ಅವಸರವಿಲ್ಲದಿದ್ರೂ ಫಲಾರ ಮಾಡಿಬಿಟ್ರೆ ಆಮೇಲೆ ಸಿಧಾನವಾಗಿ ; .... ಶಾಮಿ ! ಒಂದು ಜಟ್ಕಾ ಹಿಡಕೊಂಡು ಬಾ.

**ನಾಗತ್ತೆ :** ಹಯ್ಯೊ ಬೇಡಿ ಅಂದ್ರೆ ! ಏಕಾದಶಿ, ಸ್ವಾಮಿ ದರ್ಶನ ಮಾಡಿಕೊಂಡು, ಜಟ್ಕಾಲಿ ! ? .... ರೈಲಿನಲ್ಲಿ ....... ಹೋಗೋದೇ ಮನಸ್ಸಿಗೆ ಹ್ಯಾಗೋ ಇಧೆ.....ಟೇಸನ್ನೂ ಹತ್ತಿರ....ದಾರಿ ಉದ್ದಕ್ಕೂ ಸಾಲು ಮರಗಳು .... ನೆರಳಿನಲ್ಲಿ ತಾನೇ ನಡಕೊಂಡು ಹೋಗ ಬೇಕು .... (ಶಾಮೀಗೆ) ಜಟ್ಕಾ ಏನೂ ಬೇಡ ನನ್ ಕಂದಾ .... ! ಅವನೆಲ್ಲಿ ದೊಡ್ಡವ್ನು .... ಬಿ. ಯ್ಯೆ. ಪ್ಯಾಸಾಗಿಧೆಯಂತೆ ? ಏನೋ ದೇವರು ಕಣ್ಣಿಟ್ಟು ಅವನ್ನ ಮುಂದಕ್ಕೆ ತಂದು ಕುಟುಂಬಕ್ಕೆ ಯಶಸ್ಸು ತರಬೇಕು.

**ನರಸಮ್ಮ :** ಈಗೆಲ್ಲೋ ಅಂಗಡಿ ಬೀದಿ ಕಡೆ ಹೋದ. ಬಂದು ಬಿಡ್ತಾನೆ ತಿರ್ಗಿ .... ಬನ್ನಿ ! ....

(ನರಸಮ್ಮನೂ ನಾಗತ್ತೆಯೂ ಸಾತೂವೂ ಒಳಕ್ಕೆ ನಿಷ್ಕ್ರಮಣ)

**ಶಾಮಿ :** (ಬಾಗಿಲ ಕಡೆ ತಿರುಗಿ) ಇಕೋ ! ಅಣ್ಣ ....
(ಅಶ್ವತ್ಥನು ಪ್ರವೇಶಿಸುವನು) ಎಲ್ಲಿ ಹೋಗಿದ್ದೆ, ಅಣ್ಣಾ ! .... ನಾಗತ್ತೆ ಕೇಳಿದ್ಲು ನಿನ್ನ. ಏನದು ಕೈಯಲ್ಲಿ ಪಾರ್ಸಲ್ಲು .... ?

**ಅಶ್ವತ್ಥ :** (ತುಟಿಯ ಮೇಲೆ ಬೆರಳನ್ನಿಟ್ಟು ... ... ಮೆಲ್ಲನೆ) ಶ್ಯ್ ! .... ಕಿರ್ಲ್‌ ಬೇಡವೋ ಕೋತಿ ! ಅಕ್ಕನ್ನ ಕರಿ, .... ಅತ್ತೇಗೆ ತಿಳೀದ ಹಾಗೆ !

(ಶಾಮಿ ಒಳಕ್ಕೆ ನಿಷ್ಕ್ರಮಣ)

**ರಂಗಣ್ಣ :** ಸಿಕ್ಕಿತೇ ಒಳ್ಳೇದು .... ಎಷ್ಟು ಮೊಳ ?

**ಅಶ್ವತ್ಥ :** ಹದಿನೆಂಟು ಮೊಳ, ಅಪ್ಪ .... ಒಂದೇ ಇದ್ದದ್ದು. ಚೆನ್ನಾಗಿಧೆ! ಆದರೆ ನಾವು ಹಾಕಿದ ಅಂದಾಜಿಗಿಂತ ಸ್ವಲ್ಪ ಜಾಸ್ತಿ .... ಆದರೆ ಮಾಲು ಒಳ್ಳೇದಂತೆ .... ತಂದ್ಬಿಟ್ಟೆ .... ಬೇಕಾದ್ರೆ ....

**ರಂಗಣ್ಣ :** ಒಳ್ಳೇ ಕೆಲಸ ಮಾಡಿದೆ !....ನನಗೇನು ತೋರಸ್ತೀಯಾ.... ಸಾತು ಒಪ್ಪಿದರೆ ಸರಿ. ಅಕೋ ಬಂದ್ಲು !

**ಸಾತು :** (ಪ್ರವೇಶಿಸಿ ರಭಸದಿಂದ ಅಶ್ವತ್ಥನನ್ನು ಸಮೀಪಿಸಿ) ಎಲ್ಲಿ ನೋಡೋಣ ?

**ಅಶ್ವತ್ಥ :** (ಕೈಯ್ಯಲ್ಲಿದ್ದ ಕಟ್ಟನ್ನು ಬಿಚ್ಚಿ ಕೆಂಪುರೇಷ್ಮೆ ಅಂಚುಹಾಕಿದ ಬಿಳಿಯ ನಾರುಮಡಿ ಸೀರೆಯನ್ನು ಸಾತುವಿನ ಕೈಯ್ಯಲ್ಲಿಟ್ಟು) ಇನ್ನಿದಕ್ಕಿಂತ ಭಾರಿ ಇಹ ಲೋಕದಲ್ಲಿಲ್ಲಾ ..........ಇನ್ನುಮೇಲೆ ನಿಮ್ಮನೇಗೆ ನೀನೇ ಯಜಮಾನಿ ! ಹ್ಯಾಗಿದೆ.... ?

**ಸಾತೂ :** (ಸೀರೆಯನ್ನು ಜೋಲುಹಾಕಿಹಿಡಿದು) ಅಗಲ, ಬೇಕಾದಷ್ಟಿದೆ.... (ಬಟ್ಟೆಯನ್ನು ಪರೀಕ್ಷಿಸುತ್ತಾ) ಅಯ್ಯೋ, ಬಲುಚೆನ್ನಾಗಿದೆ ಅಂದ್ರೆ....ಬಲು ಸಂತೋಷಪಟ್ಟುಬಿಡ್ತಾಳೆ ........ ಯಾರೂ ಏನೂ ಹೇಳಬೇಡಿ! ಅಮ್ಮನೇ ಕೊಡ್ಲಿ.

(ಮೂಲೆಯಲ್ಲಿ ಮೇಜಿನ ಮೇಲಿರುವ ಪುಸ್ತಕಗಳ ಕೆಳಗೆ ಸೀರೆಯನ್ನು ಬಚ್ಚಿಡುವಳು.)

**ನರಸಮ್ಮ :** (ಪ್ರವೇಶಿಸಿ) ಅಶ್ವತ್ಥಾ ! ಬಂದೆಯಾ, ?....ತಂದೆಯಾ ?

**ಸಾತೂ :** ಇಲ್ಲಿಧೆ, ಅಮ್ಮ !....

(ನರಸಮ್ಮನನ್ನು ಮೇಜಿನ ಬಳಿಗೆ ಕರೆದುಕೊಂಡು ಹೋಗಿ ಸೀರೆಯನ್ನು ತೋರಿಸುವಳು. ನರಸಮ್ಮನು ಪರೀಕ್ಷಿಸಿ, ತನ್ನ ಸಮ್ಮತವನ್ನು ತಲೆಯಾಡಿಸಿ, ಸೂಚಿಸಿ " ಇಲ್ಲೇ ಇರ್ಲಿ " ಎಂದು ಪುನಃ ಪುಸ್ತಕಗಳ ಕೆಳಗೆ ಇಡುವಳು. ನಾಗತ್ತೆಯು ತನ್ನ ಕೃಷ್ಣಾಜಿನದ ಚೀಲ — ತಾಮ್ರದ ಚೊಂಬಿನೊಂದಿಗೆ ಪ್ರವೇಶಿಸುವಳು.)

**ನರಸಮ್ಮ :** (ಮುಂದಕ್ಕೆಬಂದು) ಮಡೀ ಚೀಲ ಸ್ವಲ್ಪ ಇಲ್ಲಿ ಕೊಡಿ !

**ನಾಗತ್ತೆ :** ಯಾಕೇ.... ?

**ನರಸಮ್ಮ :** ಪರವಾ ಇಲ್ಲ. ನಾನಿನ್ನೂ ಮಡಿ (ಎಂದು ನಾಗತ್ತೆಯ ಕೈಯಿಂದ ಚೀಲವನ್ನು ತೆಗೆದುಕೊಂಡು ಮೇಜನ್ನು ಸಮೀಪಿಸಿ ಚೀಲವನ್ನು ಬಿಚ್ಚಿ ಚೀಲದ ಬಾಯಿಗೆ ಸರಿಯಾಗಿ ಹೊಸಸೀರೆಯನ್ನು ಹಿಡಿಯುತ್ತಾ) ನೀವು ಮನಸ್ಸಿಗೇನೂ ತಿಳಕೋಬಾರ್ದು.

**ನಾಗತ್ತೆ :** (ರಭಸದಿಂದ ಹತ್ತಿರಬಂದು) ಹಯ್ಯಯ್ಯೋ ಇದೇನು ಹುಚ್ಚು ಅಂದ್ರೆ....!?

**ನರಸಮ್ಮ :** ಕೋಪಿಸಿಕೋಬೇಡಿ........ಅದೇನು ಹಾಳ್‌ಬಿತ್ತೋ ಕಾಣೆ ವ್ಯಾಪಾರಕ್ಕೆ ; ಬಟ್ಟೆಬರೆಯೆಲ್ಲ ಅನ್ಯಾಯ ಅಗ್ಗ ಈ ಊರ್ನಲ್ಲಿ........ ............ಅದಕ್ಕೇನಿಮಗೆ ಉಪಯೋಗವಾದೀತೂ ಅಂತಾ........... (ಸೀರೆಯನ್ನು ನಾಗತ್ತೆಯ ಕೈಯ್ಯಲ್ಲಿ ಕೊಟ್ಟು) ನೋಡಿಬಿಟ್ಟು ಕೊಡಿ.

**ನಾಗತ್ತೆ :** ಚಕಿತಳಾಗಿ, ಅತ್ಯಂತ ಸಂತೋಷವನ್ನು ಅತಿಶಯದಿಂದ ಅಡಗಿಸಿ ಕೊಳ್ಳುತ್ತಾ, ಕೋಪವನ್ನು ಅರ್ಧನಟಿಸುತ್ತಾ...ಓರೆಗಣ್ಣಿನಿಂದ ಸೀರೆಯ ಹೆಣೆ, ಅಂಚು, ಅಗಲ ಇತ್ಯಾದಿಗಳನ್ನು ಪರೀಕ್ಷಿಸುತ್ತಾ) ಇದೆಲ್ಲ ಶುದ್ಧತಪ್ಪು ಅಂದ್ರೆ ....ತಪ್ಪು....ನನ್ನ ಹಾಳು ಯೋಗ್ಯತೇಗೆ....ಇಷ್ಟು ದುಡ್ನ ಅನ್ಯಾಯ ಮಾಡಿ....ಶುದ್ಧ ಹುಚ್ಚು ...ತಪ್ಪು !

**ನರಸಮ್ಮ :** (ಸೀರೆಯನ್ನು ನಾಗತ್ತೆಯ ಕೈಯಿಂದ ತೆಗೆದುಕೊಂಡು ಚೀಲದಲ್ಲಿಟ್ಟು ಬಾಯನ್ನು ಕಟ್ಟುತ್ತಾ) ಹುಚ್ಚು ಅಂತ ಬೇಕಾದರೆ ಅನ್ನಿ....ತಪ್ಪೇನು....? ದೊಡ್ಡವರು ಅಂಬೋವಾಗ, ಮರ್ಯಾದೆ, ಯೋಗ್ಯತೆ, ಆಶೆ, ಸ್ನೇಹ ಈ ವಿಷಯಗಳಲ್ಲೆಲ್ಲಾ... .. ರೂಪಾಯಿ ಲೆಕ್ಕಾಚಾರಾ ಹಾಕೋ ಕಾಗುತ್ಯೇ ?....ಆದ್ರೂ, ನೀವು ಬರೋದು ಬಹಳ ಅಪರೂಪ........ ನಿಮಗೆ ಅಲ್ಪ ಸ್ವಲ್ಪ ಮನಸ್ಸು ಅಸಮಾಧಾನವಾದರೂ ನಮ್ಮ ಸಂತೋಷಕ್ಕಾದರೂ....

[ಸಾತುವು, ಕೂಸನ್ನು ಬೆನ್ನು ಹಿಡಿದು ನಾಗತ್ತೆಯ ಕಾಲಿಗೆ ಸೋಕಿಸುವಳು]

**ನಾಗತ್ತೆ :** ಅಯ್ಯೋ ಭದ್ರಾನೇ ! .... (ಬಗ್ಗಿ ಮಗುವಿನ ತಲೆಯನ್ನು ಸವರಿ) ಸಾವಿರ ವರ್ಷ ಆಯಸ್ಸಿಟ್ಟುಕೊಂಡು ದೊಡ್ಡದೊಡ್ಡ ಪ್ಯಾಸುಗಳೆಲ್ಲಾ ಮಾಡಿ ಲಕ್ಷಾಂತರ ಸಂಪಾದಿಸಿ ಕುಟುಂಬಕ್ಕೆ ಯಶಸ್ಸು ತಗೊಂಬಾ ನನ್ನ ರಾಜ! ನನ್ನ ಕಂದ! (ಕೂಸನ್ನು ಸಾತುವಿನ ಕೈಯಿಂದ ಬಿಡಿಸಿ ತಾನೆತ್ತಿ ಕೊಂಡು ತಲೆಯನ್ನು ಆಘ್ರಾಣಿಸುತ್ತಾ) ಏನ್ನ್ ನಗ್‌ತೀಯಾ ನನ್ನ ಚಿನ್ನದ

ಪ್ರತಿಮೇ....? ಅದೇನು ಪುರಾಕೃತ ಪುಣ್ಯಾನ ಜ್ಞಾಪಿಸಿಕೊಂಡು ನಗುತ್ತ್ರೋ ಏನೋ!....ನನ್ನಂಥಾ ಪಾಪಿಗಳಿಗೆ ಹ್ಯಾಗೆ ಗೊತ್ತಾಗ ಬೇಕು....? (ಕೂಸನ್ನು ಕೆನ್ನೆಯಮೇಲೆ ಮುದ್ದಿಟ್ಟು) **ಇದು ಬೇಕಾದರೆ ಪುಷ್ಪ!!**...........ಪುಷ್ಪಗಳನ್ನ ಬೆಳಸ್‌ಬೇಕೂಂತ ಲೆಕ್‌ಚರ್ ಕೊಡತಾಳಂತೆ....!

**ನರಸಮ್ಮ :** ಯಾರು....?

**ನಾಗತ್ತೆ :** ಯಾರೇನು? ಪಾತೂನ ಹೆತ್ತವಳು! ಯಕ್ಕದ ಹೂ ಹಾಗೆ ಮಗಳನ್ನ ಬೆಳಿಸಿಬಿಟ್ಟು, ಊರಿಗೆಲ್ಲಾ ಮಕ್ಕಳನ್ನ ಮುಂದಕ್ಕೆ ತರೋ ವಿಧಾನ ಸಾರ್‌ತಿಧಾಳೆ, ನಾಚಿಕೆಹೇಸ್ಕೆ ಇಲ್ದೆ....ಇನ್ನ್ಅವಳ ಸ್ನೇಹಿತೆ, ಒಂದು ಸುಪ್ರದೀಪ,....ಒಳ್ಳೇ ತೊಳದ ಕೆಂಡದ ಹಾಗೆ........ಏನ್ ಅವಳ ಹೆಸರು? ಸ್ವಯಂಪ್ರಭೇನೆ....ಅಲ್ಲ....ಮಣಿ....ಸ್ಯಮಂತಕಮಣಿ ....ಅಲ್ಲ .... ಮಣಿಪ್ರಭೆ! ........ ಆ ಪ್ರಸೇನನ ಕಥೆ ಜ್ಞಾಪಕಕ್ಕೆ ಬಂತು........ಜಾಂಬವತಿ!........ಅಲ್ಲ........ನೀನ್ ಹೇಳೇ ಸಾತೂ! ಆ **ಗುಹೇ** ಹಾಗೆ ಇದ್ದಲಲ್ಲೇ....?

**ಸಾತೂ :** (ನಗುವನ್ನು ಅಡಗಿಸಿಕೊಳ್ಳಲಾರದೆ ತಲೆಬಾಗಿ) ಮಿಸ್ ಪ್ರಭಾಮಣಿ!

**ನಾಗತ್ತೆ :** ಹೂ, ಪ್ರ ಭಾ ಮ್ಣಿ !.... ಮಿಸ್ಸು !... ಆ ಜಂತೂನೂ ಈ ಪಾತು ತಾಯೀನೂ ಲೆಕ್‌ಚರ್ ಕೊಟ್ಟು ಸೀಮೆ ದೊರೆಸಾನಿಗಳು ಆಗೋ ದಾರಿ ಇತ್ಯರ್ಥ ಮಾಡ್‌ತ್ತಿದಾಗ್ಲೆ ನಾವು ಅವರ ಮನೆಗೆ ಹೋಗಿದ್ದದ್ದು .... ....

(ಕೈಲಿದ್ದ ಕೂಸನ್ನು ನರಸಮ್ಮನಿಗೆ ಒಪ್ಪಿಸಿ, ನಮಸ್ಕಾರ ಮಾಡುವ ಪುಟ್ಟಾಗೆ,)

ಒಳ್ಳೇ ಮನ್ಮಥನಂಥ ಕೋಟೀಶ್ವರನನ್ ಮದುವೆ ಮಾಡಿಕೊಂಡು ದೀರ್ಘ ಸುಮಂಗಲಿಯಾಗಿರೂ ............ (ಪುಟ್ಟಾ ಎದ್ದು ನಿಲ್ಲುತ್ತಲೆ) ಗೊಂಬೆಗಳನ್ನಿಟ್ಟುಕೊಂಡು ಆಡ್‌ತಿಧೀಯಾ? .... ಆಡು! ಆಡು! ಇನ್ನೆಷ್ಟುದಿನಾಂತ ಆಡೀಯಾ? ಆಮೇಲೆ (ನರಸಮ್ಮನಿಗೆ) ಇವಳಿಗೊಬ್ಬ ಗಂಡನ್ನ ಹಿಡಿದು .... ಮದುವೆ ಮಾಡಿ ... ಸಂಸಾರ ಕುದುರಿಸೀ.... ಜಗದೀಶ್ವರನ ಕೆಲಸ ಜರಗತ್ತಲೇ ಇರಬೇಕು, ಜಗದಲ್ಲಿ .... !

**ಮಗು :** ಏನ್ .... ನಾಗತ್ತೆ ! ಬರುತ್ಲೂ ಹೀಗೆ ಹೊರಟ್ಹೋಗೋದೆ ? .... ಇಲ್ಲೇ ಒಂದು ಹತ್ತು ದಿನ ಇದ್ದು .... ಮುಂಚೆ ಒಂದು ಸರತಿ ಬಂದಾಗ ಗೋವಿನ ಕಥೆ ಹೇಳ್ತಿದ್ದೆಯಲ್ಲ ಹಾಗೆಲ್ಲ .... ಕಥೆ ಗಿಥೆ ಹೇಳದೇನೇ ಊರಿಗೆ .... ? (ನಮಸ್ಕರಿಸಿ ಏಳುವನು.)

**ನಾಗತ್ತೆ :** (ಮಗುವಿನ ತಲೆಯನ್ನು ಸವರುತ್ತಾ) ಘಟಂಗಾ !! ಏನ್ ನೆನಪೊ ನಿನಗೆ! (ನರಸಮ್ಮನಿಗೆ)ಮದುವೇಲಿ ಚೋಟುದ್ದ ಕೂಡ ಇರಲಿಲ್ಲ ಇವನು, ಗೋವಿನ ಕಥೆ ಹೇಳಿ ಸುದಾರ್ಸ್‌ತಿದ್ದದ್ದು ಇನ್ನೂ ಜ್ಞಾಪಕ ಇಟ್ಕೊಂಡಿಧಾನೆ ನೋಡಿ ! (ಮಗುವಿಗೆ)

ಖಂಡ್ವಿದ್ಕೊ ಮಾಂಸ್ವಿದ್ಕೋ
ಗುಂಡಿಗೆಯ ಬಿಸಿರಕ್ತವಿದ್ಕೊ
ನೀನಿದೆಲ್ಲವ ನುಂಡು ಸಂತಸ
**ದಿಂದಿರ್ರೈ** ಹುಲಿ . . . . . . .

(ಮಗುವಿನ ಕೆನ್ನೆಯನ್ನು ಸಲಿಗೆಯಿಂದ ಮಾತಿಗೆ ಸರಿಯಾಗಿ ಮೆಲ್ಲನೆ ತಟ್ಟಿ)

**ರಾಯನೇ !** ಘಟಂಗಾ ! .... ಊರಲ್ಲಿ ಮನೇಲಿ ಖಾಯಿಲೆ ನನ್ನ ಕಂದಾ ! .... ಹೋಗಲೇ ಬೇಕೀಗ ! .... ತಿರುಗಿ ಸಾತೂನ ಕರ್ ಕೊಂಡು ಹೋಗೋಕ್ ಬರತೇನಲ್ಲ ಆಗ ಎರಡು ಮೂರು ದಿನ ಇಲ್ಲೇ ಇದ್ದು .... ಗೋವಿನ ಕಥೇ ಯಾಕೆ ? .... ದೊಡ್ಡವನಾಗಿ ಬೆಳೆದು ಬಿಟ್ಟೆ ಈಗಾ .... ಪ್ರಹ್ಲಾದ ಕುಮಾರನ ಕಥೇ ........ ಲವಕುಶರ ಕಥೇ ........ ಅವರೂ ನಿನ್ನ ಹಾಗೇ ಘಟಂಗರು ! ........ ಎಲ್ಲಾ ಹೇಳತೇನೆ ನನ್ನ ರಾಜಾ !

(ಮುಂದಕ್ಕೆ ಬಂದು ನಮುಸ್ಕಾರಮಾಡುತ್ತಿರುವ ಅಶ್ವತ್ಥ, ಶಾಮಿ ಇವರಿಗೆ)

ದೀರ್ಘಾಯಿಷ್ಮಗಳಾಗಿ ಇರ್ರಿ, ಅಪ್ಪಾ ! ನೀವೋ, ಇಂಗ್ಲೀಷು ಗಿಂಗ್ಲೀಷು ಓದೋ ಈ ಕಾಲದವಿದ್ಯಾವಂತರು. ನಾನೇನು ಹೇಳೇನು ನಿಮಗೆ....? ಒಟ್ಟಿನಲ್ಲಿ ಬುದ್ಧಿಯಾಗಿದ್ದು ಮನೇಗೆ ಒಳ್ಳೇ ಹೆಸರು ತರ್ರಿ. (ಅಶ್ವತ್ಥ, ಶಾಮಿ, ಎದ್ದು ಗೋಡೆ ನೇರಕ್ಕೆ ಹೋದನಂತರ ನಮುಸ್ಕಾರ ಮಾಡುವ ಸಾತುವಿಗೆ) ಸಾವಿರ ವರ್ಷ ತಾಳೀ ಕಟ್ಕೊಂಡು ಸುಖವಾಗಿರಮ್ಮ !

(ಮನಸ್ಸಿನಲ್ಲಿ ಉಕ್ಕಿ ಉಕ್ಕಿ ಬರುವ ದುಃಖವನ್ನು ತಡೆಯಲಾರದೆ ಕಣ್ಣೀರು ಸುರಿಸುತ್ತಾ ಗದ್ಗದಸ್ವರದಿಂದ) ಕುಂಕ್ಮಾ........ಕುಂಕ್ಮಾ .... ಇಡೋ .... ಯೋಗ್ಯತೆ ........ ಹೊರಟ್ಹೋಯಿತು! (ಮುಸುಕಿನಿಂದ ಬಾಯನ್ನು ಮುಚ್ಚಿಕೊಂಡು) ಬರ್ತೇನೆ ................ ಕೂನ್ನ್ ಜೋಪಾನವಾಗಿ ನೋಡಿಕೊಳ್ಳಿ....ಬರ್ತೇನೆ (ಕ್ರಮೇಣ ಬೀದಿ ಬಾಗಿಲಿನಿಂದ ನಿಷ್ಕ್ರಮಣ).

**ರಂಗಣ್ಣ :** (ನಾಗತ್ತೆಯ ಚೀಲವನ್ನೂ ಚೊಂಬನ್ನೂ ಕೈಲಿಹಿಡಿದಿರುವ ಅಶ್ವತ್ಥನಿಗೆ) ಜೊತೇಲಿಹೋಗಿ ಒಳ್ಳೇ ಗಾಡೀಲಿ ಕೂಡಿಸಿ ಟಿಕೆಟ್ಟು ತೆಕ್ಕೊಟ್‌ಬಿಟ್ ಬಾ ........

**ನರಸಮ್ಮ :** ಸ್ವಲ್ಪ ಇರು!.......ಬೇಡ! ನೀನು ಹೋಗು!........ ಕೂಜಾಲಿ ಹಾಲಿಥೆ, ಶಾಮಿ ಎತ್ತಿಕೊಂಡು ಬರ್‌ತಾನೆ........ತಿರಿಗಿ ಬರೋವಾಗ ತಂದರೆ ಸಾಕು ಕೂಜಾನ, ಅಂತ ಹೇಳು.
(ಅಶ್ವತ್ಥನು ಬೀದಿ ಬಾಗಿಲಸಿಂದ ನಿಷ್ಕ್ರಮಿಸುವನು. ನರಸಮ್ಮನು ಒಳಕ್ಕೆ ಹೋಗಿ ಕಂಚಿನ ಕೂಜಾವನ್ನು ತಂದು ಶಾಮಿ ಕೈಲಿಟ್ಟು) ಓಡೋ.... !

**ರಂಗಣ್ಣ :** ಓಡೋದರಲ್ಲೀ ಮುಗ್ಗರಿಸಿ ಬಿದ್ದು ಮುಂಡೀನೂ ತರ್ಕೊಂಡು ಕೂಜಾನೂ ಚರಂಡೀಲಿ ಉರುಳಿಸಬೇಡ........ ಮೆಲ್ಲಗೆ ಹೋಗು (ಶಾಮಿ ನಿಷ್ಕ್ರಮಣ) ಬೇಕಾದಷ್ಟಿದೆ ಟೈಮು .... .... .... .... .... (ನರಸಮ್ಮನಿಗೆ) ಪೂಜೇಗೆ ಸಿದ್ಧ ತಾನೆ?

**ನರಸಮ್ಮ :** ಹೂಂ.
(ರಂಗಣ್ಣ ಒಳಕ್ಕೆ ನಿಷ್ಕ್ರಮಣ) ಹೋಗೋ ಮಗೂ. ಚೊಕ್ಕಟವಾಗಿ ಮೈತೊಳಕೊಂಡು ಹಂಡೇಗೆ ಇನ್ನೆರಡು ಬಿಂದಿಗೆ ನೀರು ಸುರಿದು, ಎರಡು ಕಟ್ಟಿಗೆ ಒಲೇಗೆ ಇಟ್ಟು ಕೈತೊಳಕೊಂಡು, ನಿಮ್ಮ ತಂದೇ ಪಕ್ಕದಲ್ಲಿ ನಿಂತಿರು, ಪೂಜೇ ಆಗೋವಾಗ ........(ಮಗೂ ನಿಷ್ಕ್ರಮಣ. ಬೀದಿಯ ಬಾಗಿಲನ್ನು ಹಾಕುತ್ತಾ) ಪಾಪ! ಈ ವಯಸ್ಸಿನಲ್ಲಿ ಮನೆಯಲ್ಲಿ ಹಗಲೂ ರಾತ್ರಿ ದುಡಿಯೋದಲ್ದೆ ರೈಲು ಪ್ರಯಾಣದ ಕಷ್ಟಾನೆಲ್ಲಾ ತಡಕೊಂಡೂ .... ....ಬಿಸಿಲ್‌ನಲ್ಲಿ ನಡಕೊಂಡು ಹೋಗತಿಥೆ ಪ್ರಾಣಿ, ಪಾಪ!

**ಸಾತೂ:** ನನಗೂ, ಪಾಪ ಅನ್ನಿಸುತ್ತೆ ಅಮ್ಮ! ಆದರೆ....ಆ ಮನೇಲಿ ........ಒಂದೊಂದು ಸರತಿ ಅನ್ಯಾಯ........ಹಿಂಸೆ........

**ನರಸಮ್ಮ:** (ಕೋಪದಿಂದ) ಸಾತೂ! ಒಂದು ಮಾತು ಹೇಳ್ತೀನೆ........ ಸಾಯೋವರಿಗೂ ಮರೀಬೇಡ!........**ಲೋಕದಲ್ಲಿ ಕಷ್ಟಪಟ್ಟು ನರಳೋರ್‌ರು ದೇವರಿಗೆ ಸಮಾನ...............ನಮ್ಮ ಕಣ್ಣಿಗೆ ದೇವರಿಗಿಂತಲೂ ಜಾಸ್ತಿ**. ಈಗ್ನೋಡು! (ಮೃದುವಾಗಿ) ಈ ಕೂಸಿಗೆ ಸ್ವಲ್ಪ ಮೈ ಬೆಚ್ಚಗಾಯಿತು ಅಂದ್ರೆ ನನ್ನ ಗುಂಡಿಗೆ ಬಿರಿದಹಾಗಾಗುತ್ತೆ ...............ಇಷ್ಟು ಮಕ್ಕಳೂ ಇದ್ದೂ, ದೇವರ ದಯದಿಂದ ಮನೆ ಬಾಗಲು ಅಂಬೋದನ್ನ ಅನುಭವಿಸ್ತಿದ್ರೂ, **ಸ್ವಲ್ಪ** ಹೆಚ್ಚು ಕಡಿಮೆ ಆಗುತ್ಲೂನೂವೆ ನನಗೆ ಇಷ್ಟು ಯಾತನೆ ಆಗುತ್ತಲ್ಲಾ............ಈಕೆ ಅಂಥಾ ಹೆಂಗಸರು ಪಾಪ! ಕೈಹಿಡಿದವನನ್ನೂ ಕಳಕೊಂಡು, ತನ್ನ ಹಣೆಯಲ್ಲಿ ಬರೆಯದ ಸಂಸಾರದ ಸುಖಾನ ಸುತ್ತಮುತ್ತಲೂ ಇರೋರು ಅನುಭವಿಸೋದ್ನೂ.... ತನಗೆ ಮಕ್ಕಳಿಲ್ಲದ್ದಲ್ಲದೆ, ಇತರರು ಮಕ್ಕಳನ್ನ ಹೆತ್ತು ಸಾಕೋ ಸುಖಾನ ನೋಡುತ್ಲೂ ಇಧಾರಲ್ಲಾ....! **ಇವರಿಗೆ ಹುಚ್ಚು ಹಿಡೀದೆ ಇರೋದು ಆಶ್ಚರ್ಯ.......... ..! ತನ್ನ ಭಾಗ್ಯಾನ ಕಳಕೊಂಡ ಯಾತನೇಲಿ ಅಲ್ಪಸ್ವಲ್ಪ ರೇಗಿದಾಕ್ಷಣವೇ, ನಾವು ಮನಸ್ಸಿಗೆ ತಂದ್ಕೊಳ್ಳೋದೇ? ತಪ್ಪು ಸಾತೂ........ಇನ್ನುಮೇಲೆ ನಾಗತ್ತೆ ಏನ್‌ಹೇಳಿದರೂ ಏನ್‌ಮಾಡಿದರೂ.... ...ಖಾಯಿಲೇಲಿ ರೋಗಿಗಳು ನೋವು ತಡೀಲಾರದೆ ರೇಗಿದರೆ ಹ್ಯಾಗೆ ಮನಸ್ಸಿಗೆ ತಂದುಕೋಬಾರದೊ ಹಾಗೆ ಮನಸ್ಸಿಗೆ ತಂದುಕೊಳ್ಳದೇ ನಡಕೊಳ್ಳೋದು........ ಅದು ಜಾಣತನ!! ಅರ್ಥವೇ........?**

**ಮಗು:** (ರಭಸದಿಂದ ಪ್ರವೇಶಿಸಿ) ಇದಕ್ಕೇ ಹೆಂಗಸರು ಹೋಪ್‌ಲೆಸ್ಸೂ ಅಂಬೋದು........ಇಲ್ಲಿ ನಿಂತ್ಕೊಂಡು ಹರಟೇಬಡೀತಿರಿ! ............ ಅಲ್ಲಿ ಅಪ್ಪಾ ಕಾದಿಧಾನೆ ಮಂಗಳಾರತೀಗೆ........!

**ನರಸಮ್ಮ:** ಸಾಕು ನಿಲ್ಲ್ಸೋ! ಅಧಿಕ ಪ್ರಸಂಗಿ! (ಕೂಸನ್ನು ಸಾತುವಿನ ಕೈಯಲ್ಲಿಟ್ಟು ತ್ವರೆಯಿಂದ ಒಳಕ್ಕೆ ಹೋಗುವಳು. ಮಗುವೂ, ಪುಟ್ಟಾನೂ, ಹಿಂಬಾಲಿಸುವರು.)

. . . . . . . . . . . .

[ಒಳಗೆ, ಮಂಗಳಾರತಿಯ ಘಂಟೆಯ ಶಬ್ದ ಕೇಳಿಬರುವುದು. ಒಂದೆರಡು ಕ್ಷಣಗಳಲ್ಲಿಯೇ ಮಗುವು, ಕರ್ಪೂರವು ಉರಿಯುತ್ತಿರುವ ಮಂಗಳಾರತಿ ತಟ್ಟೆಯನ್ನು ತಂದು ನೆಲದಮೇಲಿಟ್ಟು "ಅಕ್ಕಾ! ತೀರ್ಥ" ಎನ್ನುವನು.]

**ಸಾತೂ:** ಅಣ್ಣಾನೂ ಶಾಮಿಾನೂ ಬರಲಿ........ನೀನ್ ಹೋಗು.

[ಮಗು ಒಳಕ್ಕೆ ನಿಷ್ಕ್ರಮಣ]

(ಕೂಸನ್ನು ಮೊಗುಚಿ ಹಿಡಿದುಕೊಂಡು ಉರಿಯುವ ಕರ್ಪೂರಕ್ಕೆ ಕೂಸಿನ ಮುಖವನ್ನು ಸಮಿಾಪಿಸಿ)

ದೇವ್ರು!........ದೇವ್ರು! ನನ್ನ ಕಂದಾ!........ದೇವ್ರು!

(ಕೂಸು, ಉರಿಯುವ ಕರ್ಪೂರಕ್ಕೆ ಚಾಚುವ ಕೈಯನ್ನು ಥಟ್ಟನೆ ಹಿಂದೆಳೆಯುತ್ತ)

ಬೆಂಕೀ ನೋ, ಕೋ ತಿ !!!!

[ಪರದೆಯು ಮೆಲ್ಲನೆ ಬೀಳುವುದು.]

ತಾಳೀಕಟ್ಟೋಕ್ಕೂಲೀನೇ ?

೩

" ಯೋ ಧೃ ವಾ ಣಿ....

# "ಯೋಧ್ಯವಾಣಿ...

ಪಾತ್ರಗಳು

| | | |
|---|---|---|
| ನರಸಿಂಹಯ್ಯ | .... | ಪಾತು ತೌರ್ಮನೆಯ |
| ರಾಮಣ್ಣ | ... | ,, |
| ರಂಗಣ್ಣ | .... | ನಾತು ,, |
| ಶಾಸ್ತ್ರಿಗಳು | ... | ನರಸಿಂಹಯ್ಯನ ಮನೆಯ |
| ಪುರೋಹಿತರು | .... | ,, |
| ಅತಿಥಿಗಳು | ... | ನರಸಿಂಹಯ್ಯನ ಬಳಗ |
| ಪಾರ್ವತಮ್ಮ | ... | ,, ಪತ್ನಿ |
| ಮುತ್ತೈದೆಯರು | ... | ರಾಮಪುರದವರು |
| ಶಂಕರ | ... | ನರಸಿಂಹಯ್ಯನ ಮಗ |

**ಸ್ಥಳ** :—ನರಸಿಂಹಯ್ಯನ ಮನೆ　　　　**ಭಾಷಾ** :—ಹಿಂದಿನಂತೆ

## ನರಸಿಂಹಯ್ಯನ ಮನೆ ಪಡಸಾಲೆ.

[ಮುಹೂರ್ತದ ಗಲಾಟೆ. ಒಂದು ಕಡೆಯಲ್ಲಿ ಬ್ರಾಹ್ಮಣರು ನವಗ್ರಹ ಪೂಜೆಯನ್ನು ಮುಗಿಸುತ್ತಿರುವರು. ಮತ್ತೊಂದು ಕಡೆಯಲ್ಲಿ ವಧುವಿಗೆ ಅಲಂಕಾರ ಮಾಡುವ ಗಲಾಟೆ. ಪಡಸಾಲೆಯ ಮುಂಭಾಗದಲ್ಲಿ ಅತಿಥಿಗಳು ಕೂತು ತಾಂಬೂಲ ಕಲ್ಲು ಸಕ್ಕರೆ ಇತ್ಯಾದಿ ವಸ್ತುಗಳನ್ನು ಸೇವಿಸುತ್ತಾ ಮಾತನಾಡಿಕೊಳ್ಳುತ್ತಿರುವರು. ಮನೆಯಾಕೆ-ಮನೆಯಾತ, ಆಗಾಗ್ಗೆ ಒಳಗೂ ಹೊರಗೂ ಬಂದು ಹೋಗುತ್ತಾ ಏರ್ಪಾಟುಗಳನ್ನು ವಿಚಾರಿಸಿಕೊಳ್ಳುತ್ತಾ ಇರುವರು.

ಪಡಸಾಲೆಯ ಪಕ್ಕದ ಗೋಡೆಯಮೇಲೆ ತಗುಲಿಸಿರುವ ದೊಡ್ಡ ಗಡಿಯಾರವು ಒಂಬತ್ತು ಘಂಟೆ ಹೊಡೆಯುವ ಶಬ್ದವು ಕೇಳುವಷ್ಟರಲ್ಲೇ ನರಸಿಂಹಯ್ಯನು ಬೀದಿಬಾಗಿಲಕಡೆ ಬಂದು ಅಸಮಾಧಾನದಿಂದಲೂ ಕಳವಳದಿಂದಲೂ "ಶಂಕರಾ! . ಎಲ್ಲೀ ಅವನು **ಶಂಕರಾ**!!" ಎಂದು ಕೂಗುವನು. ಶಂಕರನು ಒಳಗಿನಿಂದ ಓಡಿಬಂದು ತಂದೆಯನ್ನು ಸಮೀಪಿಸುವನು.]

**ನರಸಿಂಹಯ್ಯ:** ಎಲ್ಲಿದ್ಯೋ?........ಏನ್ಮಾಡ್ತಿದ್ಯೋ........?

**ಶಂಕರ:** ಬಂದೋರಿಗೆ........ಕಾಫಿ!....ಇಡ್ಲಿ!........ಅಮ್ಮ ಹೇಳ್ತಾರೆ ಆ ಮನೆಯಿಂದ ಹೆಂಗಸರು ಯಾರೂ ಬಂದಿಲ್ಲ........ಅಂತ!

**ನರಸಿಂಹಯ್ಯ:** ಅದಕ್ಕೇ ನಾನು ಪೇಚಾಡ್ತಿರೋದು!.... ಘಂಟೆ ಒಂಭತ್ತು ಹೊಡೆದಾಯಿತು....ಮುಹೂರ್ತಕ್ಕೆ ಇನ್ನೊಂದೇ ಘಂಟೆ! ಅವರಿನ್ನೂ........ನಾವು ಹೊರಡೋಕೆ ಏನೂ ಹೇಳಿಕಳಿಸ್ಲಿಲ್ಲ.... ಬೈಸಿಕಲ್ ಹತ್ತಿಕೊಂಡುಹೋಗಿ ಏನ್ಸ್ತಡ ಅಂತ ವಿಚಾರಿಸಿಕೊಂಡು ಬಾ........guestsನ ನಾನು ನೋಡಿಕೋತೇನೆ.

(ಶಂಕರನು ಬೀದಿ ಬಾಗಿಲಿನಿಂದ ನಿಷ್ಕ್ರಮಣ)

**ಅತಿಥಿಗಳಲ್ಲೊಬ್ಬ:** (ಎದ್ದುಬಂದು) ಏನಪ್ಪಾ ಇನ್ನೂ delay! ಬೀಗರ Bungalow, ಒಂದೂವರೆ ಮೈಲು ಇದೆ........ಇನ್ನೂ ಇಲ್ಲಿಂದ ನೀವು ಹೊರಟು ಅವರನ್ನ ಕರಕೊಂಡ್ಬಂದೂ........ಮುಹೂರ್ತ........ ಹತ್ತೂಕಾಲು?

**ನರಸಿಂಹಯ್ಯ :** ಕಾರು(Car)ಗಳು arrange ಮಾಡಿದೇನೆ ............ three Cars...... !

**ಅತಿಥಿ:** ಮತ್ತಿನ್ಯಾಕೆ ಹೊರಡಬಾರದೂ?........

**ನರಸಿಂಹಯ್ಯ :** ಸ್ವಲ್ಪ, ಅಲ್ಲೇನೋ........ಸ್ವಲ್ಪ............ಮನೇಲಿ ಮುದುಕಿ ........ orthodoxಉ......superstitiousಉ......ಏನೋ ಅಪಶಕುನವಂತೆ............ಇಂಥಾದ್ದು ಅಂತ ಗೊತ್ತಿಲ್ಲ............ಹಲ್ಲಿ ಬಿತ್ತ್ತೋ........ಬೆಕ್ಕು ಅಡ್ಡಹಾಸ್ತೋ........ಏನೋ ಗೊತ್ತಿಲ್ಲ........ ಅದೇ........ಶಾಂತೀಗೇಂತ........ಸ್ವಲ್ಪ delay ಅಂತ ಕಾಣತ್ತೆ.......

**ಅತಿಥಿ:** ಹಾಗಾರ್ ಸರಿ........(ಪುನಃ ಸ್ವಸ್ಥಾನದಲ್ಲಿ ಕುಳಿತುಕೊಳ್ಳುವನು.)

[ನರಸಿಂಹಯ್ಯನು ಆತುರವನ್ನು ತಡೆಯಲಾರದೆ . . ಬೀದಿ ಬಾಗಿಲನ್ನು ಸಮೀಪಿಸುತ್ತಿರಲು ಶಂಕರನು ರಭಸದಿಂದ ಪ್ರವೇಶಿಸುವನು.]

**ಶಂಕರ :** (ಓಡಿಬಂದ ಆಯಾಸದ ನಿಟ್ಟುಸಿರುಬಿಡುತ್ತಾ) ಹಪ್ಪಾ........ಹವರು ........ರಾಮಣ್ಣೋರು........

(ತಂದೆಯ ಕೈಹಿಡಿದು ಪಡಸಾಲೆ ಮುಂಭಾಗದ ಅಂಚಿಗೆ ಎಳೆದುಕೊಂಡುಹೋಗಿ) ಅಪ್ಪಾ ! ರಾಮಣ್ಣೋರು............ಅದ್ಯಾಕೋ ಕಾಣೆ ! ಜಟ್ಕಾದಲ್ಲಿ ಹತ್ಕೊಂಡು........ನನ್ನೆದುರಿಗೇ ಬರ್ತಿದ್ರು........ನನಗೇನೋ ಎದೆ ........'ಧ ನ್' ಅಂತು........ವಿಚಾರ್ಸೋಕೆ ಧೈರ್ಯ ಬರಲಿಲ್ಲ.... ಬೈಸಿಕಲ್ ತಿರುಗಿಸ್ಕೊಂಡು ಬಂದುಬಿಟ್ಟೆ........!

(ಬೀದಿ ಬಾಗಿಲಕಡೆ ಕಿವಿಗೊಟ್ಟು) ಆಕೋ ! ಜಟ್ಕಾ ನಿಂತ್ತು....ಅವ್ರೇ !!!

[ನರಸಿಂಹಯ್ಯನು ತನ್ನ ತೋಳಿನಮೇಲೆ ಇದ್ದ ಶಂಕರನ ಕೈಯನ್ನು ಒದರಿ... ಉದ್ವುದ್ದ ಹೆಜ್ಜೆಹಾಕುತ್ತ ಬೀದಿಬಾಗಿಲನ್ನು ಸೇರುವನು. ಎರಡು ಅಂಗುಲ ಜರತಾರಿ ಅಂಚುಗಳ ರುಮಾಲು, ಕರೀಬನಾತಿನ ದರಬಾರ್ ಲಾಂಗ್‌ಕೋಟು, ನಾಲ್ಕು ಅಂಗುಲ ಜರತಾರಿ ಅಂಚಿನ ಅಂಗವಸ್ತ್ರ, ಮೂರು ಅಂಗುಲ ಜರತಾರಿ ರೇಷ್ಮೆ ಅಂಚಿನ ಧೋತ್ರ...ಹುಲಿಯ ಹಲ್ಲು ಹಿಡಿ ಕಟ್ಟಿದ ಕರೀಮರದ ಕೋಲು, ಸುವರ್ಣದ ಕಟ್ಟುಹಾಕಿರುವ ಸುಲೋಚನಾ, ಇವುಗಳಿಂದ "ಅಲಂಕೃತನಾಗಿ" ರಾಮಣ್ಣನು ಪರಮಾನಂದವು ಉಕ್ಕಿಬರುವ ಮುದ್ರೆಯನ್ನು ತಾಳಿ.. .. ಪ್ರವೇಶಿಸುವನು]

**ರಾಮಣ್ಣ :** (ಮೆಟ್ಟಿಲನ್ನು ಹತ್ತಿ ಹೊಸ ಪಾಪಾಸನ್ನು ಬಾಗಿಲ ಅಂಚಿನಲ್ಲಿ ಬಿಟ್ಟು ಮುಂದಕ್ಕೆ ಬರುವನು ನರಸಿಂಹಯ್ಯನ ಎರಡೂ ಕೈಗಳನ್ನೂ ತನ್ನ ಕೈಗಳಿಂದ ಹಿಡಿದು ಕುಲುಕುತ್ತಾ)

Hear I am at last, dear boy!....ನೀನು anxious ಆಗಿರ್ತೀಯ ಅಂತ ಗೊತ್ತು....But ಹೆದರಬೇಡ....every thing...is...at least will be...I hope...all right;

(ನರಸಿಂಹಯ್ಯನನ್ನು ಬಿಟ್ಟು ಮುಂದಕ್ಕೆ ಬಂದು...ಸಂಗ್ರಹಿಸಿರುವ ಅತಿಥಿಗಳಿಗೆ ಕೈಮುಗಿದು...ಹಸನ್ಮುಖನಾಗಿ)

Good morning gentlemen...ನಾನು, ನನ್ನ dear brother,...... that is to be, Mr. ನರಸಿಂಹಯ್ಯ........ದೊಡ್ಡ ಕಾರ್ಯಕ್ಕೆ ಕೈ ಹಾಕಿದೇವೆ....ತಮ್ಮಗಳ ಆಶೀರ್ವಾದ...assistance....ದಯಪಾಲಿಸಿ ಕೆಲಸ...................(ಪಕ್ಕದಲ್ಲಿದ್ದ ಪುರೋಹಿತನನ್ನು ನೋಡಿ) . . . ... ಹ್ಯಾಗೆ ಹೇಳೋದು ಶಾಸ್ತ್ರಿಣಃ....ಸಾಂಗೋಪಾಂಗವಾಗಿ ಮುಗಿಸಿ, " ಸರ್ವೇಜನಾಃ ಸುಖಿನೋಭವಂತು "........ಗೆ........ತಂದು ಬಿಟ್ಟು ಬಿಡಬೇಕು.

**ನರಸಿಂಹಯ್ಯ :** ಹೌದು ಸರ್!....ಒಂಬತ್ತೂಕಾಲು ಆಗ್ತಾಬಂತಲ್ಲ ....ಇನ್ ನಾವು ಹೊರಟು........??, ಅಲ್ಲದೇ ನೀವೇನೂ ಹೀಗ್ ಬಂದ್ಬಿಟ್ಟದ್ದೂ........? ನಾವು ಬಂದೂ................ಕಾರಿನಲ್ಲಿ........?

**ರಾಮಣ್ಣ :** (ಕೈಗಳನ್ನು ನರಸಿಂಹಯ್ಯನ ಭುಜಗಳಮೇಲೆ ಹಾಕಿ ಮಮತೆಯು ಸುರಿಯುತ್ತಿರುವ ಕಣ್ಣುಗಳಿಂದ ನೋಡುತ್ತಾ)

My dear boy...be calm....ಶಾಮಾಗಿರು....ನೀನು impatient ಆಗಿರ್ತೀಯ ಅಂಬೋದ್ನ think ಮಾಡಿಯೇ ನಾನ್ ಬಂದದ್ದು ಮೊದಲು!........ಏನೀಗ........a few minutes ಹಾಗೂ ಹೀಗೂ ಆದಾಕ್ಷಣವೆ?....After all ನಮ್ಮ orthodoxy...thanks to the broad-mindedness of our fairly up-to-date purohits, is fairly elastic; ಸ್ವಲ್ಪ up and downಉ, late and early...give and takeಉ, ಈ libertiesಗೆಲ್ಲ ಸ್ವಲ್ಪ margin......(ಪುರೋಹಿತನಿಗೆ)

ಏನ್ ಶಾಸ್ತ್ರಿಣಃ; ಪುರಾತನಕಾಲದಹಾಗೆ ಪರಿಪೂರ್ಣವಾಗಿ ವೈದಿಕ ವಾಗಿಯೇ ಕರ್ಮಗಳನ್ನ ಜರಗಸ್‌ಬೇಕೂ ಅಂದ್ರೆ .... ಸಾಧ್ಯವೆ .... ಈ ಆಧುನಿಕ ಪಟ್ಟಣವಾಸಗಳಲ್ಲಿ? ಅಲ್ಪ ಸ್ವಲ್ಪ **ಲೌಕೀಕ** ಅಲ್ಲಿ ಇಲ್ಲಿ ಸಂಕಲನ ಆಗಲೇ ಆಗುತ್ತಲ್ವೆ? ತಮ್ಮ ಅಭಿಪ್ರಾಯವೇನು?

[ಎಂದು ನರಸಿಂಹಯ್ಯನನ್ನು ಬಿಟ್ಟು ಶಾಸ್ತ್ರಿಗಳನ್ನು ಸಮೀಪಿಸಿ ಆತನೊಂದಿಗೆ ಕೈ ಮುಖಗಳನ್ನು ಅಧಿಕವಾಗಿ ಹಾವಭಾವಗಳಿಗೆ ಗುರಿಮಾಡಿ ಸಣ್ಣ ಧ್ವನಿಯಲ್ಲಿ ಸಂಭಾಷಣೆ ಬೆಳೆಸುತ್ತಿರುವನು. ನರಸಿಂಹಯ್ಯನು ಯಾವ ಒಂದು ಯೋಜನೆಯೂ ತೋಚದೆಯೂ. ರಾಮಣ್ಣನ ನಡತೆಯು ಮನದಟ್ಟಾಗದೆಯೂ... ಗಡಿಯಾರವನ್ನು ನೋಡಿ...ಕೈಕೈ ಹಿಸುಕುತ್ತಾ ಪೇಚಾಡುತ್ತಿರುವನು]

[ನವಗ್ರಹ ಪೂಜೆಯು ಆಗಿ ವೈದೀಕರು ಎದ್ದು ನಿಲ್ಲುತ್ತಲೂ, ಪುರೋಹಿತನು ರಾಮಣ್ಣನಿಗೆ ತಲೆಬಾಗಿ "ಕ್ಷಮಿಸಿ" ಎಂದು ಹೇಳಿ ನರಸಿಂಹಯ್ಯನನ್ನು ಸಮೀಪಿಸುವನು]

**ಪುರೋಹಿತ:** ಸ್ವಾಮಿ ...ಇನ್ನು ಹೊರಡಲೇಬೇಕು! ಸ್ವಲ್ಪ ಚಟುವಟಿಕೆ ಇದ್ರೇನೆ....ಮುಹೂರ್ತಕ್ಕೆ ಸರಿಯಾಗಿ....ನೆರವೇರೋ. .

**ನರಸಿಂಹಯ್ಯ:** ಹೌದು!....ಗೊತ್ತು! ಮತ್ತೆ ಈತನೇನೋ!?.... ತಾವು ದಯವಿಟ್ಟು ಆ ವೈದೀಕರನ್ನ ಮುಂದಿನ ಹಜಾರಕ್ಕೆ ಕಳಿಸಿ ಬಿಟ್ಟು ನಮ್ಮಾಕೆ ಹತ್ತರ ಆ ಹೆಂಗಸರ ಗಲಾಟೆ ಇಲ್ಲದಹಾಗೆ ನೋಡಿಕೋ ಅಂತ ಹೇಳಿ........

(ಪುರೋಹಿತನು ಹೋಗಿ, ಪಡಸಾಲೆಯ ಹಿಂಭಾಗವು ನಿರ್ಜನವಾಗುತ್ತಲೆ ರಾಮಣ್ಣನ ಹತ್ತಿರಬಂದು).........ಕ್ಷಮಿಸಿ! ಒಂದು ನಿಮಿಷ!

(ರಾಮಣ್ಣನನ್ನು ಪಡಸಾಲೆಯ ಮುಂಭಾಗಕ್ಕೆ ಕರೆತಂದು)

ಈಗ....ನಾವು....ಹೊ....ರ .. ಡ .. ಬ....ಹು....ದ....ಲ್ವೇ!

**ರಾಮಣ್ಣ:** Why... ??! (ನರಸಿಂಹಯ್ಯನ ಬೆನ್ನನ್ನು ತಟ್ಟುತ್ತಾ)......... Most certainly!...ಆದರೆ...dear boy......ಹ್ಯಾಗೆ ಹೇಳಲೀ!... ಒಂದು small...hitch ಉ...hitch ಏನೂ...a sort of trivial... (ಭೃಕುಟಿ ರಚನೆಯನ್ನು ಮಾಡಿ) ಅದೂ .... ಏನೂ ಇಲ್ಲ .... ಆದರೆ .... after all...ನಿನಗ್ಗೊತ್ತಿಲ್ವೆ...........(ಮುಗುಳು ನಗೆಯಿಂದ)............ **Boys will be boysಉ!!!**

**ನರಸಿಂಹಯ್ಯ :** ಕೋಪಿಸ್ಕೋಬೇಡಿ! .... ಮುಹೂರ್ತ ಹತ್ತುಹತ್ತರ ಬಂತು .... ಶಾಸ್ತ್ರಿಗಳು ಅವಸರಪಡಸ್ತಿದಾರೆ. ನೀವು ಹೀಗೆ ಥಟ್ಟಂತ ಮುಂದೇ ಬಂದುಬಿಟ್ಟಿದ್ದಲ್ದೆ.... ನಾನು "ಹೊರಡಬಹುದೆ" ಅಂತ ಹೇಳಿದ್ದಕ್ಕೆ ಉತ್ತರ .... ?!

**ರಾಮಣ್ಣ :** (ಹತ್ತಿರ ಬಂದು ಬೆನ್ನನ್ನು ಸವರುತ್ತಾ) I can understand, dear boy! ಅರ್ಥವಾಗುತ್ತೆ........ನಿನ್ನ impatienceಉ, of course...... naturalಉ! ಮುಹೂರ್ತ approachingಉ, guests assembledಉ .... ಎಲ್ಲ ನನಗೂ ತಿಳೀತು...But...ನೀನೇನೂ otherwise ತಿಳ್ಕೋಬಾರದು.. ....But I must confess, ನನ್ನ positionಉ ಬಹಳ delicateಉ....

**ನರಸಿಂಹಯ್ಯ :** ಅದೇನು delicateಉ ಸರ್? ಹೇಳಿಬಿಡಿ! .. ...... ಎಲ್ಲ all right ಅಂತೀರಾ! .... ತಿರುಗೂ hitch ಅಂತೀರಾ!.... ... ಇನ್ನು boys will be boys ಅಂದ್ರೇನೂ....? ಈ last momentನಲ್ಲಿ delicate position ಏನ್ ನಿಮಗೆ ........? (ಸಿಟ್ಟುಸಿರು ಬಿಡುತ್ತಾ) ನನಗೊಂದೂ ಅರ್ಥವಾಗಲಿಲ್ಲ. .... **ಏನಿದ್ರೂನೂವೆ ದಯವಿಟ್ಟು ಹೇಳಿಬಿಡಿ.... !**

**ರಾಮಣ್ಣ :** Certainly, dear boy! ... ನಿನ್ನನ್ನ suspenseನಲ್ಲಿ.... ಹೀಗೆ ಇಡೋದು ... far be it from my mind ... ಅದೂನೂ for a well-wisher of yours like me! .................. ಆದರೆ (ತಲೆಯನ್ನು ತಿರುಗಿಸಿ ಕಣ್ಣುಗಳಿಂದ ಅತಿಥಿ ಸಮೂಹವನ್ನು ಸೂಚಿಸಿ, ಸಣ್ಣ ಧ್ವನಿಯಿಂದ)

ಸ್ವಲ್ಪ crowded ಆಗಿಧೆಯಲ್ವೆ, .... ಸ್ಥಳ? of course...serious ಏನೂ ಇಲ್ಲ ... But delicate and personal topicಉ after all... merely ನಮ್ಮ ನಮ್ಮಗಳ ಮಾತು!

**ನರಸಿಂಹಯ್ಯ :** (ಮುಂದಕ್ಕೆ ಬಂದು ಘಟ್ಟಿಯಾಗಿ "ಶಂಕರಾ" ಎಂದು ಕೂಗಿ ...ಅತಿಥಿಗಳಿಗೆ) ಕ್ಷಮಿಸಬೇಕು .... ಎಲ್ಲರೂ! .... ಇನ್ನೂ ಗಂಡುಗಿಂಡು

ಬಂದು .... ಕಾರ್ಯಕ್ರಮಗಳೆಲ್ಲಾ ಪ್ರಾರಂಭವಾಗೋ ಅಷ್ಟರಲ್ಲಿ.... ತಾವುಗಳೆಲ್ಲರೂ ದಯವಿಟ್ಟು ಸ್ವಲ್ಪ ಕಾಫಿ ಫಲಾಹಾರ ಸೇವಿಸಬೇಕು. (ಬಲಗೈಯನ್ನು ಚಾಚಿ ಪಕ್ಕದ ಒಳಬಾಗಿಲೊಂದನ್ನು ಸೂಚಿಸಿ ... ಆಗತಾನೆ ಬಂದ ಶಂಕರನಿಗೆ) ಕರಕೊಂಡುಹೋಗಿ ಅಲ್ಲೇ ಇದ್ದು ಎಲ್ಲರಿಗೂ ಫಲಾಹಾರ ಮಾಡಿಸು.

[ಅತಿಥಿಗಳೆಲ್ಲರೂ ಎದ್ದು ಒಬ್ಬೊಬ್ಬರಾಗಿ ಶಂಕರನನ್ನು ಹಿಂಬಾಲಿಸಿ ನಿಷ್ಕ್ರಮಿಸುವರು]

**ನರಸಿಂಹಯ್ಯ:** [ಎಲ್ಲರೂ ಹೋದಮೇಲೆ . ಒಂದು ನಿಮಿಷ ಕಾದಿದ್ದು ... ನೆಲವನ್ನು ನೋಡುತ್ತಾ . . ಮುಖ ತಗ್ಗಿಸಿ ನಿಂತಿರುವ ರಾಮಣ್ಣನು ಮಾತನಾಡದಿರಲು] **ಈಗ ಸರ್ ! .... ದಯವಿಟ್ಟು !**

**ರಾಮಣ್ಣ :** (ಒಂದು ಅರ್ಧ ನಿಮಿಷ ಇದ್ದಹಾಗೆಯೇ ಇದ್ದು) ವಿಶೇಷವೇನೂ ಇಲ್ಲ....ಚಿಲ್ಲರೆ ವಿಷಯ....ಆದರೆ ಹುಡುಗ....ಅದೂನೂ ಯಾವಾಗ್ಲೂ ....ಮಾತಾಪಿತೃಗಳು....ಅಂದ್ರೆ....ಶ್ರೀರಾಮ....ಇನ್ಯಾರು ? ! ....you know the rest....ಯಯಾತಿ....I should say ಪುರು....ಭಗೀರಥ, ಈ ಬಾಬ್ತುಗಳ ಹಾಗೆ ಭಕ್ತಿ ಶ್ರದ್ಧೆಯಾಗಿದ್ದ ಹುಡುಗ ... **ಥಟಕ್ಕನೆ** ಈಗ ಹಟಹಿಡಿದಿರೋದು ನೋಡಿದ್ರೆ,....congenitally—ನಾನ್ ಯಾವಾಗ್ಲೂ suspect ಮಾಡಿದ ಹಾಗೆ—ನಮ್ಮ Grandfatherನ ....temperಉ...traitsಉ...ಇವನಿಗೆ ಇಧೆ .... ಅಂತ....complete ಆಗಿ ಈ ಹೊತ್ತು confirm ಆಗ್ಹೋಯಿತು....to my entire conviction if not satisfaction. ನಮ್ಮ grand fatherಗೆ **ಕೆಂಡದ** ಭೀಮಣ್ಣ ಅಂತ ಹೆಸರು.... ! ! !

**ನರಸಿಂಹಯ್ಯ:** ಕ್ಷಮಿಸಿ ಮಿಸ್ಟರ್ ರಾಮಣ್ಣ........ನಿಮ್ಮ family history ನೀವು ಹೇಳೋಕೆ ನನಗೇನೂ ಅಭ್ಯಂತರವಿಲ್ಲ ... ಆದರೆ ನೀವು ಬಳಸ್ಕೊಂಡು ಬಳಸ್ಕೊಂಡು ಹೇಳೋದ್ ನೋಡಿದ್ರೆ ನನಗೇನೋ.... !

**ರಾಮಣ್ಣ :** ಛೀ ಛೆ.... ಈ circumlocutingಉ....ಅನ್ಯಾಯ ಅಭ್ಯಾಸ ಆಗಿಹೋಗಿಬಿಟ್ಟಿದೆ....ಹಗಲೂ ರಾತ್ರಿ ಈ official routineಉ, this notorius red-tapism ಬಾಬತ್ತಿಗೆ ನೋಡಿ.... !

(ನರಸಿಂಹಯ್ಯನ ಆತುರವನ್ನು ಗಮನಿಸಿ ಆತನ ಭುಜದಮೇಲೆ ಒಂದು ಕೈಯನ್ನಿಟ್ಟು)

ಇದೋ ಬಂದ್‍ಬಿಟ್ಟೆ pointಗೇ....ನಾನು....ಈ ಮಾತಿಗೆ ನಮ್ಮ ತಾತನ್ನ ಎಳೆದದ್ಯಾಕೆ ಅಂದ್ರೆ....ಆತನ ಹಾಗೆ ಸ್ವಲ್ಪ ಮುಷ್ಕರ.... ಮೂರ್ಖತನ....ಅಲ್ಲ at least ಒಂದು hard-headedness ! ಒಂದು ವಿಧದಲ್ಲಿ ನೋಡಿದ್ರೆ ಅವನ್ನೂ entirely ತಪ್ಪು ಅಂತ ಹೇಳೋ ಹಾಗಿಲ್ಲ........ಅವನು ಕೇಳೋದೇನೊ........ಒಂದು sensible plan ಮುಂದಿಟ್ಕೊಂಡೇ ಕೇಳ್ತಾನೆ........ಆದ್ರೆ, ಕೇಳೋದನ್ನ ಹ್ಯಾಗೆ ಕೇಳಬೇಕು....ಯಾವಾಗ ಕೇಳಬೇಕೂ....ಅಂತ ಕಾಲ ದೇಶ ವರ್ತಮಾನ ಇತ್ಯಾದಿಗಳನ್ನ ಮನಸ್ಸಿಗೆ ಇಂಗಿತಮಾಡಿಕೊಳ್ದೆ ಹುಚ್ಚು ಹುಚ್ಚಾಗಿ !...Of course ನಾನೂ and my wifeಉ, ಅಲ್ದೆ his own grand-motherಉ, ಇಷ್ಟು ಜನ advise ಮಾಡಿದ್ರೂ ! ?.... ಆದ್ರೆ ಒಂದು ಮಾತು. (ಬಿರುಸಾಗಿ) **ಈಗ ಇರೋ critical juncture ಅಲ್ದೆ ಬೇರೆ ಯಾವಾಗ್ಲಾದ್ರೂ ಹೀಗೆ behave ಮಾಡಿದ್ದ ಅಂದ್ರೆ ಯಮಕೆಗಳನ್ನ ಮುರಿದುಹಾಕಿಬಿಡ್ತಿದ್ದೆ!** (ಅತಿ ವಿನಯದಿಂದ) . But ನೀನು ಇಷ್ಟು preparations ಮಾಡಿ.... ಇಷ್ಟು ದೊಡ್ಡೋರ್‍ನೆಲ್ಲಾ ಕೂಡಿಸಿ ತಯಾರಾಗಿರೋ moment ನಲ್ಲಿ, .... ನಾವಿಬ್ರೂ, ಒಂದು sort of ಕವೆಗೋಲಿನಲ್ಲಿ .... You know what I mean ... a sort of cleft stickಉ ... ಇಕ್ಕಳ.... ಇದರಲ್ಲಿ ಸಿಕ್ಕೊಂಡ್ ಬಿಟ್ಟೆಧೇವೇಂತ ತಿಳಕೊಂಡು **ನನಗೆ,**....ಹೆತ್ತ ತಂದೆ ತಾಯಿಗಳಿಗೆ....**ನಮಗೆ** ! ultimatum ಕೊಟ್ಟಿಧಾನೆ ! ! ! !

**ನರಸಿಂಹಯ್ಯ:** (ಮನಸ್ಸಿನ ಕಳವಳವೂ, ದುಗುಡವೂ, ಪ್ರತಿ ಕ್ಷಣವೂ ಹೆಚ್ಚುತ್ತಾ ಇದ್ದರೂ ಅತಿ ಸಾಹಸದಿಂದ ಅಡಗಿಸಿಕೊಂಡು) Ultimatumಉ ? ? ! ! ಏನ್‍ಸಾರ್ ಅದು.... ?

**ರಾಮಣ್ಣ :** Ultimatum ... strong word of course ··· but ··· ಅವನಿಗೇನೋ — ಸ್ವಲ್ಪ far-sighted boyಇ —ambitionsಉ ಇವೆ, for a career ! But ಅವನ mentalityಗೂ.... ನಮ್ಮ local schoolsಉ, university ಈ ಬಾಬತ್ತುಗಳಿಗೂ ಲಾಗಾಯತ್‌ನಿಂದ ಸರಿಹೋಗಲಿಲ್ಲ; therefore ಇಲ್ಲಿ ಅರ್ಧಂಬರ್ಧ ಕಲಿಯೋಕ್ ಬದಲಾಗಿ....knowledgeನ ...fountain-headನಲ್ಲೆ, — I mean foreignಗೆ — ಹೋಗಿ....I mean westಉ........Englandಉ.... barrister at law...ಹೀಗೆಲ್ಲಾ ಯೋಚನೆ........

**ನರಸಿಂಹಯ್ಯ:** ಹೋಗಲೀ ಸಾರ್, England ಗೆ! ಈಗ ಯಾರು ಬೇಡ ಅಂದದ್ದು....? ಅದೂ ಒಂದು ಒಳ್ಳೆ ಯೋಚನೇನೆ! ಆತ ಹೋಗಿಬಿಟ್ಟು ಬರುವಷ್ಟರಲ್ಲಿ ನಮ್ಮ ಹುಡುಗೀನೂ ಸ್ಕೂಲು.... ಕಾಲೇಜು ಅಂತಾ; ....ಹೌದೂ? ಇದಕ್ಕೋಸ್ಕರ ಈಗ ಇಷ್ಟು ಅನಾನುಕೂಲ ಪಡಿಸೋದೇ....? !

**ರಾಮಣ್ಣ :** I told him···ನಿನಗೇನೂ objection ಇರೋದಿಲ್ಲ ಅಂತ, I told him. ಆದ್ರೆ ಅವನು, ಆ ವಿಷಯದಲ್ಲಲ್ಲಾ....ಶಂಕೆಪಟ್ಟು ಕೊಂಡದ್ದು....to come to his point,....ಅವನಿಗೆ figure ಸಿಕ್ಕಿದ್ದು ....ನನಗೇ ಆಶ್ಚರ್ಯ !........—ಕನಿಷ್ಟಪಕ್ಷ ವರ್ಷಕ್ಕೆ £ 200 expensesಉ....three yearsಉ barristerಗೆ....ಮೂರೆರಡಲ ಆರು ....600 poundsಉ, ಹದಿನೈದಾರಲ್ 90—9000 ರುಪೀಸು........ ಹೋಗ್‌ತಾ ಬರ್ತಾ....ಒಂದು ಸಾವಿರ, plus feesಉ geeseಉ.... ಒಟ್ಟಿನಲ್ಲಿ 11,000...ಇದೂ ನನ್ನ ಕೈಗೆ ಬಂದರೇನೆ ನಾನು ನನ್ನ wifeಗೆ ತಕ್ಕ husband ಆಗೋಕೆ ಯೋಗ್ಯತೆ ಬರುತ್ತೆ ಅಂತ ಕೂತಿಧಾನೆ ! ! !

**ನರಸಿಂಹಯ್ಯ :** ಇದೇನ್ ಅನ್ಯಾಯ ಸಾರ್?....ಧರ್ಮವೆ ?...ನಾನೂ ನನ್ನ ಹೆಂಡತೀನೂ ನಿಮ್ಮ ಮನೇಗೆ ಬಂದು ಮದುವೆ ಖರ್ಚಿನ

ವಿಷಯ ಎತ್ತಿದಾಗ....ಮನೆ mortgage ವಿಷಯ 2700 ರೂಪಾಯಿ ನನ್ನ ಹತ್ತಿರ ಹೇಳದೇನೂ....ನಿಮಗಿರೋ 3300 ರೂಪಾಯಿ ಸಾಲ ನನ್ನ ಪತ್ನೀಗೆ ನಿಮ್ಮಾಕೆ ಹೇಳದೇನೂ ಇದ್ರೂನೂವೆ....ಏನೋ ದೊಡ್ಡ ಸ್ಥಳ ದೊಡ್ಡ ಕುಟುಂಬ ಅಂತ ........ ನಾನು ಸತ್ಯವಾಗಿ ಹೇಳ್ತೀನೆ........ವರದಕ್ಷಿಣೆ ಬಾಬ್ತು 2000 ಖರ್ಚು 1000 ಅಂತ 3000 ರೂಪಾಯಿ ಒಟ್ಟಾಗಿ....ಮನೇಲಿ ಅಕ್ಕಿ ಇಲ್ಲದೆ ಅನ್ನ....ರವೆ ಇಲ್ಲದೆ ಗಂಜಿ, ಹೀಗೆ ಸಂಸಾರಮಾಡಿ, ಸ್ಕೂಲಿಗೆ ಹೋಗೋ ನಮ್ಮ ಹುಡುಗನಿಗೂ ಅರ್ಧ ಹೊಟ್ಟೇಗೆ ಹಾಕಿ ಬೆಳೆಸಿ....ಕಾಸಿಗ್ ಕಾಸೂ ಅಂತ ಕೂಡಿಟ್ಟ 3000 ರೂಪಾಯಿನ, ನೀವು ಕೇಳೋ 6000ಕ್ಕೆ, ನನ್ನ Insurance policyನೂ mortgage ಮಾಡಿ, ತಂದದ್ದಾಯಿತೂ. ಇನ್ನು ಈಗ 11,000 ರೂಪಾಯಿ ಕೈಲಿಡೂಅಂದ್ರೆ ಎಲ್ಲಿಂದ ತರೋದು? (ಮೂಲೆಯಲ್ಲೊಂದು ಚಿಕ್ಕ ಮೇಜಿನ ಮೇಲಿರುವ ಕೈಪೆಟ್ಟಿಗೆಯೊಂದನ್ನು ಸೂಚಿಸಿ) ನಿಮ್ಮ ಮನೆ title deedsಉ, ನೀವು ಈ ವೂರಲ್ಲಿ ಕೊಟ್ಟಿರೋ promissory ನೋಟುಗಳು, ಒಂದು ಬಾಕಿ ಇಲ್ಲದೆ ಬಿಡಿಸ್ಕೊಂಡು, ಮುಹೂರ್ತವಾಗುತ್ಲೂನೂವೆ ನಿಮ್ಮ ಕೈಲೆ ಕೊಡಬೇಕೂ ಅಂತಿದ್ದೆ! ಈಗ ನಾನ್‌ಸತ್ರೆ ನನ್ನ insurance ದುಡ್ಡು ಸಂದೇಹ ನನ್ನ ಹೆಂಡತಿ ಮಗನಿಗೆ!!!....ಇನ್ನೀ 11,000 ರೂಪಾಯಿ ಎಲ್ಲಿಂದ ತರೋದು ?

**ರಾಮಣ್ಣ :** ಹೌದು dear boy....ಒಂದು ಹೇಳೋದ್ ಮರ್ತುಬಿಟ್ಟೆ ; ನನ್ನ wifeಉ . . . ನಿನಗ್ಗೊತ್ತಿಲ್ವೇನೊ . . . ಬಲು determined characterಉ! ಅವಳೂ ಅವನ್‌ಕಡೆ ಸೇರ್ಕೊಂಬಿಟ್ಳು . . . . . ........"ಈ ದುಡ್ಡನ್ನ ಪಾಪ ಎಲ್ಲಿಂದ ಸಂಪಾದ್ಸೀಯಾ" ಅಂದದ್ದಕ್ಕೆ ಅವಳು . . . "ಸಂಪಾದಿಸೋದೇನಿಥೆ" ? . . . ಕೋಪಿಸ್ಕೋಬೇಡ, ಅವಳು ಹೇಳಿದ್ದು! "ಅವರು ವಾಸಮಾಡೋ ಮನೆ ಹನ್ನೊಂದಕ್ಕಿಂತ ಜಾಸ್ತಿ ಬಾಳತ್ತೆ; ಅದು ಬರಕೊಡಲಿ; ಅದನ್ನ ದುಡ್ಡಾಗಿ ಮಾಡೋ ಯೋಚನೆ ಆಮೇಲೆ ಮಾಡೋಣ" ಅಂತ....;

[ಇದನ್ನೆಲ್ಲ ಕೇಳುತ್ತ ತನ್ನ ಮನಸ್ಸನ್ನು ಆವರಿಸುತ್ತಿರುವ ಶೋಕಾಗ್ನಿಯನ್ನು ಅಡಗಿಸಲಾರದೆ, ನರಸಿಂಹಯ್ಯನು, ಕಣ್ಣುಗಳು ಕೆಂಪಾಗಿ ಕಣ್ಣೀರು ಸುರಿಸಲಾರಂಭಿಸುವನು]

**ರಾಮಣ್ಣ :** ಅಳಬೇಡ dear boy ! ... ಇದೂ ಕೂಡ ಹೇಳ್ದ್ಲಿ. ನೀನು ಬಹಳ ದುಃಖ ಪಡ್ತೀಯಾ ಅಂತ ........ ಅದಕ್ಕೂ ಅವಳು ಹೇಳಿದ್ಲು "ದುಃಖ ಇರುತ್ತೆ ! ಆದ್ರೆ ಸಮಯ ಅಂದ್ರೆ .... ಸುಖ ದುಃಖ ನೋಡೋಕಾಗುತ್ತೆಯೇ .... ದುಃಖಾನ ಅಡಗಿಸ್ಕೊಂಡು ಹತ್ತು ಜನ ಹಿರಿಯರು ಕಾದಿರೋವಾಗ .... ಹ್ಯಾಗೆ ನಡೀಬೇಕೋ ಹಾಗೆ " . . . . . . . . . . . . . . . . . . . . . . . . . . . .

[ ಇದನ್ನು ಕೇಳುತ್ತಲೆ ಕ್ರಮೇಣ ನರಸಿಂಹಯ್ಯನು ಕೆಳದುಟಿಯನ್ನು ಕಚ್ಚಿಕೊಂಡು ಎರಡು ಮುಷ್ಟಿಯನ್ನೂ ಬಿಗಿಹಿಡಿದು ಅಶ್ರುಧಾರೆಯನ್ನು ನಿಲ್ಲಿಸುವನು. ಶೋಕವು ತೊಲಗಿ, ಕ್ರಮೇಣ ಕಣ್ಣುಗಳಲ್ಲಿ ಹುಚ್ಚು ಹಿಡಿದವನ ರೌದ್ರವು ಹೊಳೆಯುವುದು]

**ನರಸಿಂಹಯ್ಯ :** (ದಪ್ಪನಾದ ಧ್ವನಿಯಿಂದ) **ಹಾಗಾದ್ರೆ ಈಗ ಹನ್ನೊಂದು ಸಾವಿರ ರೂಪಾಯಿ ಇಟ್ಟುಬಿಡಬೇಕು ?.... ಇಲ್ಲಿ ನಾನೂ ನನ್ನ ಹೆಂಡತೀನೂ ನನ್ನ ಮಕ್ಕಳೂ ಕಾಡುಪಾಲಾದರೂ ಸರಿಯೆ.... ಈ ಮನೇನ ನಿಮ್ಮ ಮಗನಿಗೆ ಬರಕೊಟ್ಟೇಬಿಡಬೇಕು ; ಇದೇ ಅಲ್ಲವೇ .... ನೀವು ಕೇಳೋದು .... ??**

**ರಾಮಣ್ಣ :** (ನರಸಿಂಹಯ್ಯನ ಮುಖದಲ್ಲಿಯೂ ಧ್ವನಿಯಲ್ಲಿಯೂ ದೃಷ್ಟಿಯಲ್ಲಿಯೂ ಥಟ್ಟನೆ ಆದ ಬದಲಾವಣೆಯನ್ನು ಗಮನಿಸಿ ಅಲ್ಪಸ್ವಲ್ಪ ಅಂಜಿ)...ಆ......ಅ.... . ಅಷ್ಟು serious ಆಗಿ ತಕ್ಕೋಬೇಡ, dear boy ! ಅದು ನನ್ನ wifeಉ, ಅಲ್ಲ ನಮ್ಮ ಹುಡುಗ . . . ಹೇಳಿದ್ದು ! . . . . . . .

**ನರಸಿಂಹಯ್ಯ:** (ಒಂದು ಹೆಜ್ಜೆ ಮುಂದೆ ಬಂದು ಬಿರುಸಾಗಿ) ನಿಮ್ಮ ಹುಡುಗಾ ಇಲ್ಲೇ ; ನಿಮ್ಮ ಹೆಂಡತಿ ಹೀಗ್ ನೀವು ಕೇಳುತ್ತೂ ಅಳತೇನೇಂತ ಆಕೇಗೆ ಗೊತ್ತೂ ಅಂತ ಅಂದ್ಲೂ, ಅಂದ್ರಿ ಅಲ್ವೆ ?

**ರಾಮಣ್ಣ :** (ಮತ್ತಷ್ಟು ಅಂಜಿ) ಹೌದು . . . . but ... !

**ನರಸಿಂಹಯ್ಯ :** ಅಲ್ಲದೆ, . . . . ಇಷ್ಟು ಜನ ಸೇರಿರೋವಾಗ ಮಾನ ಕಳಕೊಳ್ಳೋಕಿಂತ . . . ಮನೆ ಹೋದರೂ ಚಿಂತೆ ಇಲ್ಲ ಅಂತ . . . ಮನೇನ ಬರದೇ ಕೊಟ್‌ಬಿಡ್‌ತೇನೆ ಅಂಬೋದೂ ಆಕೇಗೆ ಗೊತ್ತೂ . . . . ಅಂದ್ರಿ ಅಲ್ಲವೆ ?

**ರಾಮಣ್ಣ :** . . . . ಹೌದು ! . . . . but ! ಅವ್ಳು . . . .

**ನರಸಿಂಹಯ್ಯ : ಸುಳ್ಳು !!!....ನಂಬಬೇಡಿ....**ಅವಳು **ಗಟ್ಟಿಗಳೂ** ಅಂತ ಒಪ್ಕೊಂಡೆ....ಆದ್ರೆ ಅವಳ ಗಟ್ಟಿಗತನಕ್ಕೊಂದು ಮಿತಿಉಂಟು. ....ಮುಹೂರ್ತಕ್ಕೆ ಅರ್ಧ ಘಂಟೆ ಮುಂಚೆ ಮನೇಲಿ ನೆರೆದಿರೋ ನೂರಾರು ಜನರೆದುರಿಗೆ ಅವಮಾನ ಆಗತ್ತೇಂತ ಬೆದರಿ, ನೀವು ಹೇಳಿದ ಹಾಗೆ ನಡೀಲೇಬೇಕಾಗಿ ಬಂದು ನನ್ನ ಜಟ್ಟು ನಿಮ್ಮ ಕೈಲಿ ಸಿಕ್ಕಿದ ಹಾಗೇನೇ ಅಂತ ಹೇಳಿದ್ದೇ.... ನೋಡಿ, ಗಟ್ಟಿಗತನ! (ಬಿರುಸಾಗಿ) **ಆದ್ರೆ ಇನ್ನೊಂದೂ ದಿಟ! ಅದೂ, ನಿನ್ನ ಬುದ್ಧೀಗೂ ನಿನ್ನ ಹೆಂಡತೀ ಬುದ್ಧೀಗೂ ಹೊಳೀಲಿಲ್ಲ. ಈ ಊರಿನಲ್ಲಿ, ಒಬ್ಬ** ಮಾರವಾಡಿ . ಒಬ್ಬ ಸಾವ್‌ಕಾರ ಬಾಕಿ ಇಲ್ದೆ... ಸರ್ವಿಸ್‌ನಲ್ಲಿ ಇರೋ ನೀನು ಬಟ್ವಾಡೆ ಮಾಡಿದ ನಿನ್ನ **promissory notes**ನೂ, ನಿನ್ನ ಬಂಗಲೇ partial **mortgage** ಮಾಡಿದ್‌ನೂ ಬಿಡಿಸಿಕೊಂಡು, ನಿನ್ನ ಮನೇ **title deeds**ಉ ನನ್ನ ಕೈಲಿ ಇರೋದ್ನೂ, ನಾನು ಲಾಯರಿ ಅಂಬೋದ್ನೂ ನೀವಿಬ್ರೂ ನೂ ಮರೆತುಬಿಟ್ಟರಿ! ಈ ಹೊತ್ತು, ಈಗ, ಹತ್ತು-ನಲವತ್ತು ಜನರೆದುರಿಗೆ ನೀನು ಅವಮಾನ ಮಾಡಿದರೂನೂವೆ........ನುಂಗ್ ಕೊಂಡು, ನಿನ್‌ಕೈಲಿ ಆರುಸಾವಿರ ರೂಪಾಯಿ ಉದರಿಸ್ಕೊ....ಇಲ್ಲಾ, ನಿನ್ನ ಬಂಗಲೆ ಹರಾಜ್ ಮಾಡ್ಸ್ಯೋ....ಇಲ್ಲಿ ನೆರೆದಿರೋ ಒಬ್ಬೊಬ್ರಿಗೆ ಬದಲಾಗಿ public ಆಗಿ ಸಾವಿರ ಸಾವಿರ ಜನದ ಎದುರ್ಗೆ, ನಿನ್ ಎಳೆದು ಕೋರ್ಟ್‌ಗೆ,. ..ನಿನ್ನ employ ಮಾಡಿರೋ authoritiesಗೂ ನಿನ್ ನಡತೆ ತಿಳಿಯೋಹಾಗೆ ಮಾಡೋ ಶಕ್ತಿನೂ ಧೈರ್ಯಾನೂ ನನಗಿದೆ ... ಅಂಬೋದು ನಿಮ್ಮಿಬ್ಬರಿಗೂ ಗೊತ್ತಿಲ್ಲ. ನಿನ್ನ ಆಷಾಢಭೂತಿತನ ನನಗೇನೂ ಗೊತ್ತಿಲ್ಲಾ ಅಂತ ತಿಳುಕೊಂಡ್ಯಾ? **ScoundreL ?!**

**ರಾಮಣ್ಣ** : Don't be silly! Think of my position !! (ಹಿಮ್ಮೆಟ್ಟುವನು)

**ನರಸಿಂಹಯ್ಯ :** (ಬುದ್ಧಿಯೆಲ್ಲವೂ ಗಾಳಿಯ ಪಾಲಾಗಿ ಘರ್ಜಿಸುತ್ತಾ) **ನಿನ್ನ position**ಉ (ಕೈಯನ್ನು ಬೀಸಿ **"ಫಟಾರ್"** ಎಂದು ರಾಮಣ್ಣನ ಕೆನ್ನೆಗೆ ಬಡಿದು) ಕಿಲ್ಬರ್ ! ನಿನ್ನ **position** ಗೊತ್ತಾಗುತ್ತೆ ........ ಅಲ್ಲಿ ನೆರೆದಿರೋರು ಬರಲಿ, ನೋಡ್ಲಿ ನಿನ್ನ ಅವಸ್ಥೆ.... **ನಿನ್ನ position**ಉ**!!**

(ದವಡೆಗೆ ಇನ್ನೊಂದು ಬಾರಿಸಿ ರಾಮಣ್ಣನು ಸಹಾಯಕ್ಕೆ ಜನರನ್ನು ಕರೆಯಲು ನಾಚಿಕೊಂಡು ಬೀದಿಬಾಗಿಲ ಕಡೆ ಓಡತೊಡಗಲು, ನರಸಿಂಹಯ್ಯನು ಅವನನ್ನು ಕಾಲಿಂದ ಒದ್ದು ಕೆಡಹಿ ಬಾಗಿಲ ಹತ್ತಿರಿದ್ದ ರಾಮಣ್ಣನ ಪಾಪಾಸಿನಲ್ಲಿಯೇ ಒಂದನ್ನು ಹಿಡಿದುಕೊಂಡು "ಪಟಪಟ"ನೆ ರಾಮಣ್ಣನ ತಲೆಯ ಮೇಲೆ ಬಡಿಯುತ್ತಾ). .

**ಇದು ಗೊತ್ತಿಲ್ಲ ನಿಮ್ಮ್ ಮನೇಲಿ, ಹೀಗಾಗುತ್ತೆ ಅಂತ ....!** ನಿಮ್ಮನೇಲಿ ಹೋಗಿ,ಹೇಳು ನಿನ್ನ ಹೆಂಡತೀಗೆ! ನೀನ್ ಹೇಳಿದ್ಹಾಗೇ ಮನುಷ್ಯ ಹೆದರಿ, ಕುಗ್ಗಿ ಕಣ್ಣಲ್ಲಿ ಧಾರೆ ಧಾರೆ ನೀರು ಸುರಿಸ್ತಾ ಗಂಡಸ್ತನಾನ್ನ ಮರೆತೂ ಗೋಳಾಡ್ದಾ ; ಆದರೆ ಹೆದರಿಕೇಗೂ ಮಿತಿ ಇಥೇ ; **ಆ ಮಿತಿ ಮೀರಿ,** ನನ್ನ ಜೋಡು ತಕ್ಕೊಂಡು ಬಾರಿಸಿ ಓಡಿಸಿದಾ ಅಂತಾ ಹೇಳೋ.... **ಈಗ ನಗೊ ... ಈಗ ಮಾಡೊ ನಿನ್ನ ಜೋಕುಗಳೂ** .... (ಒಂದೊಂದು ಮಾತನ್ನೂ ಪಾಪಾಸಿನಿಂದ ಹೊಡೆದು ಹೊಡೆದು ತಿದ್ದುತ್ತಾ) ದೊಡ್ಡ ಮನುಷ್ಯನೋ ನೀನು ? Position ಇದೆಯೋ ನಿನಗೇ .... ?

**ರಾಮಣ್ಣ :** (ಪೆಟ್ಟು ತಡೆಯಲಾರದೆ)...ದಮ್ಮಯ್ಯಾ for pity's sake...!
(ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸುವನು)

**ನರಸಿಂಹಯ್ಯ :** (ಮತ್ತೆ ತಿರುಗಿ ಬಡಿಯುತ್ತಾ) Pity ! ಪಾಪೀ ! ನಾನು ಗೋಳಾಡ್ತಿದ್ದಾಗ ನಿನಗೆ pity ಇತ್ತೇ ? ನಿನಗೆ ಇಲ್ಲದ pity ನನಗೆಲ್ಲಿ ಬರಬೇಕೋ ? (ಇನ್ನೊಂದು ಪೆಟ್ಟನ್ನು ಹಾಕುತ್ತಾ) ತೋರಿಸು ! ಬ್ರಾಹ್ಮಣನಂತೆ ! .... ದೊಡ್ಡ ಮನುಷ್ಯ ! .... (ದೊಡ್ಡ ಧ್ವನಿಯಿಂದ) **ಕಡು ಪಾಪಿಗಳು! ಕಟುಕರಿಗೂ ಕೂಡ ಇಷ್ಟು ಅನ್ಯಾಯ ತೋಚೋದಿಲ್ಲ !** ........ ಇನ್ನು ಎದ್ದು ನನ್ನ ತಿರುಗಿ ಹೊಡೆಯೋ ಗಂಡಸ್ತನಾ ಕೂಡ ನಿನಗಿಲ್ಲ ! ಅಸಹ್ಯ ಆಗುತ್ತೆ ನಿನ್ನ ನೋಡೋದು! (ಕಾಲಿಂದ ಒದ್ದು) ಎದ್ದೇಳೋ ! ಎದ್ದೂ, ಗಂಡಸಾದ್ರೆ, police stationಗೆ ನೆಟ್ಟಗೆ ಹೋಗಿ ನನ್ನ ಮೇಲೆ assaultಗೆ ಒಂದು complaint ಕೊಡು ! Public Courtನಲ್ಲಿ, ನೀನು ಮಾಡಿದ black-mailingಗೆ ನಿನ್ನ ನಾನು ಜೂತೀಲಿ ಹೊಡೆದದ್ದಕ್ಕೆ, **ಇಲ್ಲಿ** provocationಉ ಇತ್ತೋ ಅಲ್ಲವೋ, **ಅಲ್ಲಿ** ತೀರ್ಮಾನವಾಗಲಿ !

[ರಾಮಣ್ಣನು ಥಟ್ಟನೆ ಬಾಗಿಲ ಹೊಸಿಲನ್ನು ಹಿಡಿದುಕೊಂಡು ನಿಂತು ಹೊರಟು ಹೋಗಲು ತಿರುಗುವಷ್ಟರಲ್ಲಿ] ಹೋಗಬೇಡ ........ ಇನ್ನಿದಲ್ಲ್ದೆ ನಿನ್ನ 3,300 ರೂಪಾಯಿಗೆ ನಾಳೇನೆ, ಈ ತಿಂಗಳ ಕೊನೇಲಿ, ನಿನ್ನ ಮನೇನ ಹರಾಜ್‌ಮಾಡ್ಸಿ ನಿನ್ನೂ ನಿನ್ನ ಹಾಳು ಕುಟುಂಬಾನೂ ಈ ಊರಿಂದ ಬಿಡ್ಸೋಕೆ ಬೇಕಾದ ಕ್ರಮ ಈಗಿಂದ ಷುರು ಮಾಡ್‌ತೇನೆ, ತಿಳಿದಿರ್ಲೀ! (ಕಾಲಿಂದ ಒಂದು ಒದೆ ಒದ್ದು) ತಗೊಂಡು ಹೋಗು ನಿನ್ನ ಹಾಳು ಪಾಪಾಸ್ನ!!!

(ಕೈಯಲ್ಲಿದ್ದ ಜೋಡನ್ನು ನಿಷ್ಕ್ರಮಿಸಿದ ರಾಮಣ್ಣನ ಕಡೆ ಬೀಸುವನು).

[ರಾಮಣ್ಣನು ಕಣ್ಮರೆಯಾಗುತ್ತಲೆ, ನರಸಿಂಹಯ್ಯನು ರೋಷಾವೇಶದಲ್ಲಿ ತನ್ನನ್ನೇ ತಾನರಿಯದೆ ಮಾಡಿದುದೆಲ್ಲವೂ ಥಟ್ಟನೆ ಹೊಳೆದು . . ಕೈ ಮೈ ನಡುಗುತ್ತಾ ದಿಗ್ಭ್ರಮಿತನಾಗಿ ಹುಚ್ಚನಂತೆ ನಿಲ್ಲುವನು. ಕ್ರಮೇಣ ತನ್ನ ನಡತೆಯು ಚೆನ್ನಾಗಿ ಮನಸ್ಸಿಗೆ ಬಂದು, ಕೊನೆಯಲ್ಲಿ ಅತಿಥಿಗಳೆಲ್ಲರೂ ಸಂಭಾಷಿಸುತ್ತಿರುವ ಶಬ್ದವನ್ನು ಕೇಳಿ, ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅಳುವನು. ಕ್ರಮೇಣ ದುಃಖವನ್ನು ಅಡಗಿಸಿಕೊಂಡು . ತನ್ನ ಕಣ್ಣುಗಳನ್ನು ಒರೆಸಿಕೊಂಡು "ಯಾರೋ ಅಲ್ಲಿ? ಶಂಕರಾ"! ಎನ್ನುವನು.]

**ಪುರೋಹಿತರು:** (ಒಳಗಿನಿಂದ ಪ್ರವೇಶಿಸಿ) ಶಂಕರಪ್ಪನೋರು ಒಳಗೆ ಫಲಾರದ ಗಲಾಟೇಲಿಧಾರೆ, ಸ್ವಾಮಿ! ........... ಇದೇನು ಹೀಗೆ ನಿಂತಿಧೀರಾ? .... ಏನು ಅಲೌಕೀಕ ಅಂದ್ರೂ .... ಮುಹೂರ್ತ....?

**ನರಸಿಂಹಯ್ಯ:** ಮುಹೂರ್ತ ಕಾಡುಪಾಲು ಶಾಸ್ತ್ರಿಗಳೆ?....ಕೇಳೀ! ಈತ,ನೋಡಿ! ಮನುಷ್ಯ....ಬ್ರಾಹ್ಮಣ....ಅಲ್ದೆ ಒಂದು ತಾಲ್ಲೂಕ್ ಜನಗಳ್ನೆಲ್ಲಾ .... ನಮ್ಮನ್ನಾಳೋ ಮಹಾಸ್ವಾಮಿಗಳು ಧ್ವಜಪಟದ ಮೇಲೆ ಬರ್‌ಕೊಂಡಿರೋ "ಸತ್ಯಮೇವೋದ್ಧರಾಮ್ಯಹಂ" ಅಂಬೋ ಬಿರುದನ್ನು ಕಾಪಾಡಿ ರಕ್ಷಿಸೋಕೆ ಅಂತ ಇರೋ ಹುದ್ದೇದಾರ! ಇವರ ಮನೆ ಸಂಬಂಧ ಬೆಳೆಸೋ ಹುಚ್ಚು ಆಶೇಲಿ, ಸದ್‌ಬ್ರಾಹ್ಮಣ, ಸಭ್ಯನಾದ ಒಬ್ಬ ಗೃಹಸ್ಥ, ಚಿಕ್ಕ ಪದವೀಲಿಧಾನೆ ಅಂತ........ ರಂಗಣ್ಣೋರ ಮನೇಲಿ....ಸಿಕ್ಕಿದ ವರನ್ನ ಬಿಟ್ಟುಬಿಟ್ಟೆ....

" ಯೋಧ್ರುವಾಣಿ ಪರಿತ್ಯಜ್ಯ ಅಧ್ರುವಂ ಪರಿಷೇವತೇ |
ಧ್ರುವಾಣಿ ತಸ್ಯ ನಶ್ಯಂತಿ ಅಧ್ರುವಂ ನಷ್ಟಮೇವಚ ||,"

ಅಂಬೋ ನೀತೀನ ನನ್ನ ಎದೇನ ಬಿರಿದು ನಾಟಿದ, ದೇವರು, ಈ ಹೊತ್ತು !

**ಪುರೋಹಿತ:** ಹೌದು !........ರಂಗಣ್ಣೋರು ಮಹನೀಯರು. ಮಗ ಬುದ್ಧಿಶಾಲಿ....ಅಲ್ಲದೆ ಸಾಧು ...

**ನರಸಿಂಹಯ್ಯ:** (ಕಣ್ಣುಗಳು ಹೊಳೆಯುತ್ತಾ) ಶಾಸ್ತ್ರಿಗಳೇ! ಈ ಮುಹೂರ್ತ ತಪ್ಪಿತೂ....ಆದರೂ ನನಗೊಂದು ಯೋಚನೆ ಹತ್ತಿದೆ....ನನ್ನ ಮೂಢ ಬುದ್ಧೀಗೆ ಆಗ್ರಹಪಟ್ಟು ಇಷ್ಟು ಕಾಡಿಸಿದ, ಪರಮಾತ್ಮ !....ಆದ್ರೂ ನಾನು ಪಟ್ಟ ಅವಸ್ಥೇನ ಕನಿಕರಿಸದೆ ಇರಲಾರ !........ಈ ಲಗ್ನ ತಪ್ಪಿದ್ರೂ ತಕ್ಕಮಟ್ಟಿಗೆ ಅಶುಭವಾಗಿಲ್ಲದ ಇನ್ನೊಂದು ಲಗ್ನ ಇವತ್ತೇ ....ಸಾಧ್ಯವೆ.... ?

**ಪುರೋಹಿತ:** (ಮೂಲೆಯಲ್ಲಿ ಬಿಚ್ಚಿಬಿದ್ದಿರುವ ರಾಮಣ್ಣನ ಜರೀರುಮಾಲನ್ನು ಗಮನಿಸಿ, ಆದ ವಿಚಾರಗಳನ್ನು ಸ್ವಲ್ಪ ಹೆಚ್ಚು ಕಮ್ಮಿ ಸರಿಯಾಗಿ ಊಹಿಸಿ) .. ದೈವವಶಾತ್, ಸ್ವಾಮಿ ! ಎರಡೂವರೆ ಘಂಟೆಗೆ ಇನ್ನೊಂದು ಲಗ್ನ ಇಧೆ.... !

**ನರಸಿಂಹಯ್ಯ:** ಬುದ್ಧಿ ಭ್ರಮಿತನಾಗಿರುವ ನನಗೆ ಈ ಯೋಚನೆ ದೇವರೇ ಕೊಟ್ಟದ್ದು ! !....ಆ ಕೋಣೇಗೆ ಹೋಗಿ ಅಲ್ಲೇ ಇದ್ಕೊಂಡು ಶಂಕರನ ಕಳ್ಸಿ. (ಪುರೋಹಿತನ ನಿಷ್ಕ್ರಮಣ) . . (ಹಿಂದಿನ ಬಾಗಿಲನ್ನು ಸಮೀಪಿಸಿ) ಇ ಧಿ ೀ ಯಾ.... ?

**ಪಾರ್ವತಮ್ಮ:** (ಪ್ರವೇಶಿಸಿ) ಇದೇನ್ ಅನ್ಯಾಯ ಅಂದ್ರೆ !....ಬಂದಿರೋ ಹೆಂಗಸ್ರೆಲ್ಲ ಗುಸುಗುಟ್ಕೊಳ್‌ತಿಧಾರೆ....ಯಾಕೆ ತಡ ... ?

**ನರಸಿಂಹಯ್ಯ:** (ಹಲ್ಲು ಕಚ್ಚಿ) ಇಲ್ಲಿ ಬಾ....ಇನ್ನಾ ರಾಮಣ್ಣನ ಮನೆ **ಮಾತೆತ್ತಿದ್ಯೋ.... ಕೊಂದು ಬಿಡತೇನೆ ನಿನ್ನ** ...ಆ ಪಾಪೀ ಬಂದು, "ಈ 6000 ರೂಪಾಯೂ ಅಲ್ದೆ....ಅವನ ಮಗ ವಿಲಾಯಿತೀಗೆ ಹೋಗೋಕೆ 11000 ರೂಪಾಯಿ ಎಣಿಸಿಬಿಡಬೇಕು!.... **ಈಗ**.... ಇಲ್ಲಿ

ಅದು ಬರೋಕೆ ದಾರಿ ಈ ಮನೇನ ಈ ಕ್ಷಣ ಬರಕೊಟ್ರೇನೆ ಬರೋದು ಮದ್ವೇಗೆ," ಅಂತಂದ !! (ರೌದ್ರದಿಂದ) ಅರ್ಥವಾಯಿತೇನೆ ನಿನ್ನ ದೊಡ್ಡ ಮನುಷ್ಯತೆ !........... ನೀನು ಬೊಗುಳ್ತಿದ್ದ ದೊಡ್ಡ ರಕ್ತದ ಯೋಗ್ಯತೆ! ನೀನು ಕಿಲ್ಸ್ತಿದ್ದೆ ನೋಡು, ಒಡವೆಗಳು ಅಂತ?.... ನೆನ್ನೆ ಹೊರಬಿತ್ತು ಅದರ ಗುಟ್ಟು ಕೋರ್ಟನಲ್ಲಿ....ಕಳವು ಸಿಕ್ಕಿದ ಮಾಲು ಬಂದ ದಿನ, ಖಜಾನೆ ಮುಚ್ಚಿತ್ತು ಅಂತ ಒಂದು ರಾತ್ರಿ ಅವರ ಮನೇಲಿತ್ತು. ಅದನ್ನೇ ನಿನಿಗೆ ತೋರ್ಸಿದ್ದು, ಅವರ ಅಜ್ಜಿ ಆಸ್ತಿ ಅಂತ... **ಇಲ್ಲಿ ಬಾ !** (ಬೀದಿ ಬಾಗಿಲ ಕಡೆ ಹೊರಡುವನು)

**ಪಾರ್ವತಮ್ಮ :** ಏನಿದೂ ಅಂದ್ರೆ.... ನೀವು ಹುಚ್ಚರ ಹಾಗೆ ....?....

**ನರಸಿಂಹಯ್ಯ :** (ಘರ್ಜಿಸುತ್ತಾ) **ಮುಚ್ಚು ಬಾಯಿ**....ನಿನ್ನ ಮಾತು ನಿನ್ನ ಜಾಣತನ ನಿನ್ನ ಧೋರಣೆ ನಿನ್ನ ಬಿಂಕ ನಿನ್ನ ಬಡಾಯಿ ಒಂದು ಮೂಲೇಗೆ ಎಸ್ದು....ಆ ಕೋಣೇಲಿ ನೆರೆದಿರೋ ನಮ್ಮ ನೆಂಟರೂ, ಈ ಊರಿನ ದೊಡ್ಡವರೂ, ಇವರೆದುರಿಗೆ ನನ್ನ ಮಾನ ಹೋಗಬಾರದೂ ಅಂತಾ ನಿನಗೇನಾದ್ರೂ ಮನಸ್ಸಿನಲ್ಲಿತ್ತೊ....ನಾನ್ ಹೇಳೋದನ್ನ ಚಾಚೂ ಬಿಡದೆ ಕೇಳಿ ನಡಕೊಳ್ತೀಯಾ,....ಇಲ್ಲಾ....??

(ಎಂದು ಮುಷ್ಟಿಗಳನ್ನು ಬಿಗಿದು ಹತ್ತಿರ ಬರುವನು)

**ಪಾರ್ವತಮ್ಮ :** (ಗಾಬರಿಯಾಗಿ) ಏ ನ ದೂ, ಅಂದ್ರೆ....?

**ನರಸಿಂಹಯ್ಯ :** ಶಂಕರ ಬರ್‍ತ್ತಾನೆ! ಕಾರಿನಲ್ಲಿ ಹತ್ಕೊಂಡು ಹೋಗಿ ರಂಗಣ್ಣೋರ ಮನೇಗೆ, ಅವರ ಮನೆಯಾಕೆ ಕಾಲಿಗೆ ಬಿದ್ದು,........ "ನನ್ನ ಗಂಡನಿಗೆ ಮಾನದಾನ ಪ್ರಾಣದಾನ ಎರಡೂನೂ ನಿಮ್ಮಿಂದಲೇ ಆಗಬೇಕೂ" ಅಂತ ಹೇಳಿ ಅವರನ್ನ ಹ್ಯಾಗಾದ್ರೂ ಒಡಂಬಡಿಸಿ ಕರಕೊಂಬರ್ತೀಯಾ........ಇಲ್ಲಾ, .... ನಿನ್ನ, ಹಾಳು ಬೆಂಕೀಗೆ ಹಾಕೋ ದೊಡ್ಡ ಮನುಷ್ಯರ ಧೋರಣೇಲಿ ಅವರ ಮನೆ ತಂಗಳುವಾಸ್ನೇಗೆ ಅಸಹ್ಯಪಟ್ಟು, ಹಾಗೇ ನಿನ್ನ ಹಾಳು ತೌರ್ಮನೇಗೆ ಹೋಗಿ ಸೇರ್ಕೋತೀಯಾ? ಈಗ್ಲೇ ಹೇಳಿಬಿಡು!!

**ಪಾರ್ವತಮ್ಮ :** (ನಡುಗುತ್ತ) ಆಗ್ಲೀ ಅಂದ್ರೆ!

**ನರಸಿಂಹಯ್ಯ:** (ಹಲ್ಲು ಕಚ್ಚಿ) ನಿನ್ನ ವಿದ್ಯೆಗಳೇನಾದ್ರೂ.... ?

**ಪಾರ್ವತಮ್ಮ:** (ನಡುಗುತ್ತಾ ಹಿಮ್ಮೆಟ್ಟಿ) ಇಲ್ಲಾ .... ಆಗ್ಲಿ .... ಅಂದ್ರೆ !

**ಶಂಕರ:** (ಪ್ರವೇಶಿಸಿ) ಏನಪ್ಪ ?

**ನರಸಿಂಹಯ್ಯ:** ಕಾರುಗಳಿವೆ ಹೊರಗೆ. ಒಂದರಲ್ಲಿ ನೀನೂ ನಿಮ್ಮ ಅಮ್ಮನೂ ಹತ್ತಿಕೊಂಡು, ಇನ್ನೊಂದು ಜೊತೇಲೇ ಬರ್ಲಿ, ರಂಗಣ್ಣೋರ ಮನೇಗೆ ಹೋಗು. ನಿಮ್ಮಮ್ಮ ಇಳಿದು ಒಳಗ್ಹೋಗ್ತಾಳೆ; ಜಗಲಿಯಿಂದ ರಂಗಣ್ಣೋರ್ನ 'ನಾನು ಬಹಳ ಬೇಡ್ಕೊಂಡು ಕೇಳಿಕೊಂಡೆ' ಅಂತ ಹೇಳಿ ಒಂದು ಕಾರು ಅಲ್ಲೇ ಬಿಟ್ಟು ಇನ್ನೊಂದು ಕಾರಿನಲ್ಲಿ, ಇನ್ನೈದು ನಿಮಿಷದಲ್ಲಿ, ಅವರನ್ನ ಕರಕೊಂಡು ಬಂದು ಸೇರಬೇಕು ಅರ್ಥವೇ ?

**ಶಂಕರ:** ಹೂಂ ಅಪ್ಪ !

[ಪಾರ್ವತಮ್ಮನೂ ಶಂಕರನೂ ಹೊರಬಾಗಿಲಿನಿಂದ ನಿಷ್ಕ್ರಮಣ]

**ನರಸಿಂಹಯ್ಯ:** (ಪಡಸಾಲೆಯ ಸುತ್ತಲೂ ದೃಷ್ಟಿಯನ್ನು ಬೀರಿ ಕೊನೆಗೆ ಬಿಚ್ಚಿ ಬಿದ್ದಿರುವ ರಾಮಣ್ಣನ ಜರತಾರಿ ರುಮಾಲನ್ನು ನೋಡಿ ಬೀದಿ ಬಾಗಿಲನ್ನು ಸಮೀಪಿಸಿ) ಯಾರೋ ಅಲ್ಲಿ ?

**ಸೇವಕ:** (ಪ್ರವೇಶಿಸಿ) ... ಬುದ್ದೀ ! ?

**ನರಸಿಂಹಯ್ಯ:** ತಾಲ್ಲೂಕ್ ಕಚೇರಿ ಗೊತ್ತಿಲ್ವೇ .... ?

**ಸೇವಕ:** ಇಲ್ದೇ ಏನು ಬುದ್ದೀ .... !

**ನರಸಿಂಹಯ್ಯ:** ಎಲ್ಲರಿಗೂ ಊಟ ಆಗಿ ಎಲೆ ಅಡಿಕೆ ಹಾಕ್ಕೊಂಡ್ ಮೇಲೆ .... ಅಲ್ಲಿ ಬಿದ್ದಿರೋ ರುಮಾಲು ಇದೆ ನೋಡು, ಅದನ್ನ ಅಮಲ್ದಾರ್ ಕೋರ್ಟಿಗೆ ತಗೊಂಡ್ಹೋಗಿ, ಹೆಡ್‌ಮುನ್ಷಿ ಕೃಷ್ಣರಾಯರ ಹತ್ತಿರ, 'ಮದುವೇಗೆ ಬಂದಿದ್ರು ಅಮಲ್ದಾರ್‌ರ್‍ರೂ, .... ಹೋಗೋ ಅವಸರದಲ್ಲಿ ರುಮಾಲು ಬಿಟ್ಟುಬಿಟ್ಟು ಹೋದ್ರು' ಅಂತ ಕೊಟ್ಟುಬಿಟ್ಟು ಬಾ .... ... ಅದುವರಿಗೂ ಈಗ್ಲೇ ಇಲ್ಲಿಂದ ಎತ್ತಿಕೊಂಡು ಹೋಗಿ ಸುತ್ತಿ ಅಲ್ಲೆಲ್ಲಾದ್ರೂ ಇಡು.

**ನರಸಿಂಹಯ್ಯ :** (ಚೇತರಿಸಿಕೊಂಡು ಅತಿಥಿಗಳಿರುವ ಕೋಣೆಯ ಬಾಗಿಲಿನಿಂದ ನಿಷ್ಕ್ರಮಿಸಿ, ಒಳಗಿನಿಂದ) ಕ್ಷಮಿಸಬೇಕು ತಾವೆಲ್ಲರೂ ! ನಾನ್ಹೋಳಿದ್ದಾಗೆ ನಮ್ಮ ಬೀಗರ ಮನೇಲಿ ಏನೋ ಅಪಶಕುನ ಪೂರ್ವಕ ಅನಿವಾರ್ಯ ಸಂಭವಿಸಿರೋ ಹಾಗೆ ತಿಳಿದು ಬಂದು ಅಲ್ಲೊಂದು ಶಾಂತೀಗೆ ಪೂಜೆ ಆಗ್ತಿಥೆ. ಆದ್ದರಿಂದ ಲಗ್ನಾನ ಇನ್ನೊಂದು ಎರಡು ಘಂಟೇಲಿ ಬರೋ ಇನ್ನೊಂದು ಮುಹೂರ್ತದಲ್ಲಿ, ಅಂತ ನಿಶ್ಚಯವಾಗಿದೆ. ಆದ್ದರಿಂದ .... ಅಷ್ಟರಲ್ಲಿ ನೀವುಗಳು ನನ್ನ ಕೈಬಿಡದೆ ....ತಯಾರಾಗಿ ಸಿದ್ಧವಾಗ್ತಿರೋ ಭೋಜನಾನೂ ಮಾಡಿಬಿಟ್ಟು ವಧೂವರರನ್ನ ಆಶೀರ್ವಾದ ಮಾಡಿ ಬಿಟ್ಟೇ ಹೋಗಬೇಕೂ ಅಂತಾ ನನ್ನ ಹರವತ್ತಾದ ಕೋರಿಕೆ.

(ಒಳಗೆ ಸಂಭಾಷಣೆಗಳ ಧ್ವನಿಯು ಎದ್ದು ಕೇಳುವುದು ... ನರಸಿಂಹಯ್ಯನು ಪುನಃ ಪ್ರವೇಶಿಸುವನು ; ಹಿಂದೆ ಪುರೋಹಿತನೂ ಬರುವನು.)

**ಪುರೋಹಿತ :** ನನ್ನ ಮನಸ್ಸಿಗೆ ಬಹಳ ಸಂತೋಷ ಸ್ವಾಮಿ............ "ಮನಸಾ ಚಿಂತಿತಂ ಕಾರ್ಯಂ ದೈವಮನ್ಯತ್ರ ಚಿಂತಯೇತ್", ಅಂತಾ, ಹಿರಿಯರು ಹೇಳೋಹಾಗೆ, ನಮ್ಮ ಮಗೂಗೆ ವಿದ್ಯಾವಂತ ನಾದ ವರ ಸಿಕ್ಕಬೇಕೂ ಅಂತ ಬ್ರಹ್ಮ ನಿಶ್ಚಯಿಸಿರೋವಾಗ್ಗ ........ ನಾವು ಏನು ಏರ್ಪಾಟುಮಾಡಿದರೆ ತಾನೇ ಏನು ............ ?

**ನರಸಿಂಹಯ್ಯ:** ಏನಾಶ್ಚರ್ಯ ! ಶಾಸ್ತ್ರಿಗಳೇ ! (ಗಡಿಯಾರವನ್ನು ನೋಡುತ್ತಾ) ಒಂದು ಘಂಟೇ ಹೊತ್ತಿನ ಒಳಗೆ ದೇವರು ಏನು ಅದ್ಭುತಗಳನ್ನೆಲ್ಲಾ ತೋರಿಸಿಬಿಟ್ಟ !!! ಕಲಿಯುಗ, ಪಾಪಯುಗ, ಅಂತ ಎಷ್ಟು ತಿಳಿದಿದ್ರೂನೂವೆ, ಒಬ್ಬ ಬ್ರಾಹ್ಮಣ, ದುಡ್ಡಿನಾಶೇಗೆ, ಇಷ್ಟರಮಟ್ಟಿಗೆ ಮಾನ ಮರ್ಯಾದೆ—ಮತ—ಕರುಣೆ ಇವನ್ನೆಲ್ಲಾ ಮಿತಿಮೀರಿ, ಈ ರಾಮಣ್ಣನಷ್ಟು ತುಚ್ಛನಾಗಿ ಇರ್ತಾನೆ ಅಂತ ನಾನು ನಂಬೇ ಇರಲಿಲ್ಲ. ಅಂಥಾ ನರಮೃಗಾನ್ನೂ ತೋರ್ಸಿ, ಅದೇ ಘಂಟೇಲಿ, ಕೇವಲ ಸಾಮಾನ್ಯಸ್ಥಿತಿಯವನೇ ಆದರೂ, ಒಂದು ಮಾತಾಡದೆ, ನನ್ನ ಸ್ಥಿತೀನ ಕನಿಕರಿಸಿ, ಇಷ್ಟು ಗಂಭೀರವಾಗಿ

ನಡಿಯೋ ರಂಗಣ್ಣೋರಂಥ ಸಾಧೂನೂ ತೋರಿಸಿದ !...............
ಆಶ್ಚರ್ಯ ! ! ........ ಆಶ್ಚರ್ಯ ! !

**ಶಾಸ್ತ್ರೀ:** ಸ್ವಾಮೀ! ಈ ನವೀನ ಕಾಲದಲ್ಲಿ ವೈದೀಕರ ಮಾತಿಗೆ ಬೆಲೆಯೇ ಇಲ್ಲ !........ಆದರೂ ಹೇಳ್ತೇನೆ ;........ಬ್ರಾಹ್ಮಣ, ತನ್ನ ವ್ಯಾಸಂಗದಿಂದಲೋ, ತನ್ನ ತಂದೆತಾಯಿಗಳಿಂದಲೋ, ಇಲ್ಲ....ವಂಶ ಪರಂಪರೆಯಾಗಿ ಮಾಡ್ತಾಬಂದ ವೇದಾಧ್ಯಯನದಿಂದಲೋ, ಇಲ್ಲ ತನ್ನ ಸಂಸ್ಕಾರ ಪ್ರಭಾವದಿಂದಲೋ, ತನಗೆ ಇರುವ ಬುದ್ಧೀನ.... ಕೋರ್ಟು....ಕಚೇರಿ....ಕಾಲೇಜು....ಇಸ್ಕೂಲು ಅಂಬೋ ಬುದ್ಧೀ ಕೊಂಡುಕೊಳ್ಳೋ ಮಾರ್ಕಟ್ಟೆನಲ್ಲಿ, ಸಂಬಳಕ್ಕೆ ಮಾರಿ, ಆಯಾ ಸಂಬಳದ ಪ್ರಕಾರ ತಾರತಮ್ಯತೇನ ಅನುಭವಿಸ್ತಿದ್ದರೂ, ಕೇವಲ ಬ್ರಾಹ್ಮಣರ ಗೋಷ್ಠೀಲಿ....ಒಂದು ಜನನ....ಒಂದು ಮರಣ........ ಒಂದು ಉಪನಯನ........ಒಂದು ವಿವಾಹ........ಇತ್ಯಾದಿ ಧರ್ಮ ಕರ್ಮಾದಿಗಳಿಗೆ ಬ್ರಾಹ್ಮಣರು ಸಂಗ್ರಹಿಸಿರುವಾಗ, ಇವರು ಬುದ್ಧೀನ ಮಾರೋ ಮಾರ್ಕಟ್ಟುಗಳಲ್ಲಿಯ ಅಂತಸ್ತು ವ್ಯತ್ಯಾಸಗಳನ್ನ ಇಲ್ಲಿಯೂ ಸಾಧಿಸೋಕೆ ಆದೀತೆ....? **ರಾಮಣ್ಣೋರು ಮಾಮಲೆ ಹುದ್ದೆ ಮಾಡಿದರೆ ತಾನೆ ಏನೂ........ರಂಗಣ್ಣೋರು ಕೇವಲ ಮುತ್ಸದ್ದಿಯಾಗಿದ್ದರೇ ತಾನೇ ಏನೂ....ಒಟ್ಟಿನಲ್ಲಿ ಬ್ರಾಹ್ಮಣರ ಕಣ್ಣಿಗೆ........ ..ಟೊಳ್ಳು-ಟೊಳ್ಳೇ...........ಗಟ್ಟಿ-ಗಟ್ಟಿಯೇ !**

[ಪರದೆಯು ಮೆಲ್ಲನೆ ಬೀಳುವುದು]

[ಸೇವಕನು ರುಮಾಲನ್ನು ಎತ್ತಿ ಸುತ್ತಿ ತೆಗೆದುಕೊಂಡು ಬೀದಿ ಬಾಗಿಲಿನಿಂದ ನಿಷ್ಕ್ರಮಿಸುವನು; ನರಸಿಂಹಯ್ಯನು ಬೀದಿ ಬಾಗಿಲಿಗೆ ಕಿವಿ ಕೊಟ್ಟು ಒಂದೆರಡು ನಿಮಿಷ ನಿಂತು. .. ಚಕಿತನಾಗಿ] ಅಕೋ! .... ಕಾರು! ....?

[ಪಡಸಾಲೆಯ ಮಧ್ಯಭಾಗವನ್ನು ಸೇರಿ ಬೀದಿ ಬಾಗಿಲಕಡೆ ಆತುರದಿಂದ ನೋಡುತ್ತಾ ನಿಲ್ಲುವನು.]

**ರಂಗಣ್ಣ :** (ಪ್ರವೇಶಿಸಿ) ........ ಏನು ........ ಹೇಳಿಕಳಿಸಿದ್ದು ........ ?

**ನರಸಿಂಹಯ್ಯ :** (ನಮಸ್ಕಾರಸೂಚಕವಾಗಿ ಕೈಜೋಡಿಸಿಕೊಂಡು) ಮೊದಲು, ಮದುವೇಗೆ ತಮ್ಮನ್ನ ಕರೀದೆ ಇದ್ದದ್ದಕ್ಕೆ ಕಾರಣ ಹೇಳೋಕೆ! ... ನನಗೂ ನನ್ನ ಗೃಹಣೀಗೂ ............ ನಾವು ಈಗಿರೋ ಅಂತಸ್ತು ಸಾಲದೇ ಇನ್ನೂ ದೊಡ್ಡಮನುಷ್ಯರ ಕುಟುಂಬದ ಸಂಬಂಧಮಾಡಿ ಮೆರೀಬೇಕೂ ಅಂಬೋ ಸಂಭ್ರಮದಲ್ಲಿ ........ ನಮಗೆ ಗುರ್ತಾದ ಬಹಳ ಜನಾನ ಮದುವೇಗೆ ಕರೀದೇ ಇದ್ದು, ಅದಕ್ಕೆ ಪ್ರತಿಫಲ ಅನುಭವಿಸಿದ್ದೂ ಆಯಿತು ........

**ರಂಗಣ್ಣ :** (ಮೆಲ್ಲನೆ) ಅದೆಲ್ಲ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳೋದಿಲ್ಲ. ........ ಈಗ ನಿಮ್ಮ ಹುಡುಗ ಬರ್ತಾ ಹೇಳಿದ್ರಲ್ಲಾ ........ ಏನೋ ಅಸಂಭವ ಒದಗಿ....ನಿಮ್ಮ ಬೀಗರು....ಮನಸ್ತಾಪಪಟ್ಟುಕೊಂಡು....

**ನರಸಿಂಹಯ್ಯ : ಮನಸ್ತಾಪ!** ಕ್ಷಮಿಸಿ! ನನ್ನ ಕಾಲ್ನಲ್ಲಿ ಒದಸ್ಕೊಂಡು ನನ್ನ ಕೈಯಿಂದ ಎಕ್ಕಡದೇಟು ತಿಂದ ........ **ತನುಸ್ತಾಪ**ದಿಂದ ಹೋದದ್ದು ! ! .... ನೋಡೀ, ಸ್ವಾಮೀ........

**ರಂಗಣ್ಣ :** (ಮುಂದೆ ಹೇಳುವಷ್ಟರಲ್ಲಿ, ನರಸಿಂಹಯ್ಯನ ಕುಗ್ಗಿದ ಮುಖವನ್ನೂ ದನಿಯನ್ನೂ ಗಮನಿಸಿ ಮೃದು ವಚನಗಳಿಂದ)
ಏನೋ ಆದದ್ದಾಗಿಹೋಯಿತು ............ ವ್ಯವಹಾರದಲ್ಲಿ ಹೀಗೆ ಅಸಂಭವಗಳು ಇದ್ದೇ ಇರುತ್ತವೆ ............ ಮನಸ್ಸಿಗೆ ಸಮಾಧಾನ ತಂದುಕೊಳ್ಳೋದು ಉಚಿತವೇ ಹೊರ್ತು ಅದನ್ನ ತಿರುಗೂ ಜ್ಞಾಪಿಸ್ಕೊಂಡು ನೊಂದುಕೊಳ್ಳೋದು ಸರಿಯಲ್ಲ ............

**ನರಸಿಂಹಯ್ಯ:** ನಿಮಗೆ ಈ ತೊಂದರೆ ನಾನು ...ಡ . . ಲಿಲ್ಲ. ಆದರೆ ನೀವು, ನಿಮ್ಮ ಮನೇಗೆ ಬಂದಿದ್ದಾಗ, 'ನನ್ನ ಮಗಳನ್ನ ತಂದುಕೊಳ್ಳೋದರಲ್ಲಿ ಅಭ್ಯಂತರವೇನೂ ಇಲ್ಲ; ಆದ್ರೆ ಹುಡುಗಿ ನಿಮ್ಮ ಮನೇಲಿ ಸಂತೋಷವಾಗಿ ಇರೋ ವಿಷಯದಲ್ಲಿ ಹುಡುಗಿ ಮನಸ್ಸು ಒಪ್ಪಬೇಕೂ' ಅಂತ ಹೇಳಿದ್ರುಮೇಲೆ............ ನನಗೆ ಈಗಿರೋ ಅವಸ್ಥೇನ ತಪ್ಪಿಸೋ ಔದಾರ್ಯ ನಿಮಗಿರುತ್ತೆ, ಅಂಬೋ ಭರವಸೆ ಮೇಲೆ ನಾನು ಹೇಳಿಕಳಿಸಿದ್ದು ನಿಮಗೆ; ........ ನಮ್ಮ ಮನೇಲಿ ನನ್ನ ಲಾಯರಿ ಕೆಲಸದ ಮೇಲೆ ನನ್ನ ಗಮನ ............ ಗೃಹಕೃತ್ಯದ ಮೇಲೆ ನನ್ನ ಹೆಂಡತಿ ಗಮನ.... ಏತನ್ಮಧ್ಯೆ ನನ್ನ ಮಗಳಿಗೆ ಒಂದು ಒಳ್ಳೇ ಮಾತಾಡಿ ಸಂತೋಷಪಡಿಸಿ ಇಟ್ಕೊಳ್ಳೋಕೆ ನನಗಾಗ್ಲೀ ನನ್ನ ಹೆಂಡತಿಗಾಗ್ಲೀ ಬಿಡುವಿರಲಿಲ್ಲ. ಒಂದು ಸಂತೋಷ ಮತ್ತೆ ಸ್ನೇಹ, ಅನ್ಯೋನ್ಯ, ಇವೆಲ್ಲಾ ನಿಮ್ಮ ಮನೇಗೇ ಬಂದು ನಿಮ್ಮ ಮಕ್ಕಳ ದೆಸೆಯಿಂದ ಅವಳು ಇನ್ನು ಮುಂದೆ ಅನುಭವಿಸಬೇಕೇ ಹೊರತು ನನ್ನ ಮನೇಲಿ ಅವುಗಳ ಪರಿಚಯ ತಹಲ್‌ವರಿಗೂ ಇಲ್ಲ ಇಲ್ಲೇ, ಹೀಗಾಗಿ ಹೋಯಿತು! ದಿಕ್ಕು ದೆಸೆ ತೋಚದೆ ಬೆಪ್ಪಾಗಿ ನಿಂತಿದ್ದೆ. ಆ ಕೋಣೆ ನೋಡಿ! ತುಂಬ ಅತಿಥಿಗಳು, ನೆಂಟರು, ಅದರಲ್ಲೂ ನನ್ನ ದಾಯಾದಿಗಳು .... ... ಮದುವೆ, ನಮ್ಮ ನಮ್ಮ ನೆಂಟರಲ್ಲೇ ಆಗೋ ಪದ್ಧತಿ ಅನಾರೋಗ್ಯ, ಅಂತ ತಪ್ಪಿಸಿ, ಹೊಸ ಸಂಬಂಧ ಆಗಬೇಕೂ ಅಂತಾ ಹಿಡಿದ ನನ್ನ ಹಟಕ್ಕೆ, ರೇಗಿದ ದಾಯಾದಿಗಳಿಗೆ, ಈಗ ನನ್ನ ಅವಸ್ಥೆ ಗೊತ್ತಾಯಿತೋ ಅವರ ಆನಂದಕ್ಕೆ ಎಣೆಯೇ ಇಲ್ಲ ............... ಶಾಸ್ತ್ರಿಗಳು ಎರಡೂವರೆ ಘಂಟೆಗೆ ಇನ್ನೊಂದು ಲಗ್ನ ಇಧೆ ....... ಅಂತ ....

**ರಂಗಣ್ಣ :** (ಮುಂದಕ್ಕೆ ಬಂದು ನರಸಿಂಹಯ್ಯನ ಜೋಡಿಸಿದ ಕೈಯ್ಯನ್ನು ಎರಡು ಕೈಗಳಿಂದಲೂ ಹಿಡಿದು) ನೀವೇನೂ ಯೋಚನೆ ಮಾಡಬೇ. ಹುಡುಗನ್ನ ಸ್ನಾನ ಮಾಡಿಸ್ಕೊಂಡು ಎಲ್ಲರನ್ನೂ ಕರ. ಬರ್‍ತೇನೆ ....

(ಬೀದಿ ಬಾಗಿಲಿನಿಂದ ನಿಷ್ಕ್ರಮಣ)